# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ನವೆಂಬರ್ 04, 2020

ಸಂಪುಟ : 47 ಸಂಚಿಕೆ : 185 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com



B.S.CHANNABASAPPA & SONS
DAVANGERE

ಮದುವೆ ಜವಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ


ಬಿ.ಎಸ್.ಚನ್ನಬಸಪ್ಪ & ಸನ್ಸ್

ಕಾಳಿಕಾದೇವಿ ರಸ್ತೆ * ಪಿ.ಜೆ.ಬಡಾವಣೆ * ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ.


## ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಸೇವಾ ಶುಲ್ಕ ಏರಿಕೆಯಿಲ್ಲ : ಕೇಂದ್ರ

ನವದೆಹಲಿ, ನ. 3 - ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿನ ಸೇವೆಗಳ ಶುಲ್ಕದಲ್ಲಿ ಯಾವುದೇ ಏರಿಕೆಯಾಗುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಈ ನಡುವೆ, ಬ್ಯಾಂಕ್ ಆಫ್ ಬರೋಡಾ ತನ್ನ ಉಚಿತ ನಗದು ಠೇವಣಿ ವಹಿವಾಟುಗಳ ಮಿತಿ ಬದಲಾವಣೆಯನ್ನು ವಾಪಸ್ ಪಡೆದಿದೆ.



ನವೆಂಬರ್ 1, 2020ರಿಂದ ಜಾರಿಗೆ ಬರುವಂತೆ ಪ್ರತಿ ತಿಂಗಳ ನಗದು ಠೇವಣಿ ಹಾಗೂ ಬಿಡಿಸಿಕೊಳ್ಳುವ ಸಂಖ್ಯೆಯಲ್ಲಿ ಬದಲಾವಣೆ ತಂದಿತ್ತು. ಮೂರಕ್ಕಿಂತ ಹೆಚ್ಚು ಬಾರಿ ನಗದು ವಹಿವಾಟು ನಡೆಸಿದರೆ ಶುಲ್ಕ ಪಾವತಿಸಬೇಕೆಂದು ತಿಳಿಸಿತ್ತು.

ಆದರೆ, ಕೊರೊನಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಬದಲಾವಣೆ ವಾಪಸ್ ಪಡೆಯಲಾಗಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಇತ್ತೀಚೆಗೆ ಯಾವುದೇ ಶುಲ್ಕ ಬದಲಾವಣೆ ಮಾಡಿಲ್ಲ ಎಂದು ಹಣಕಾಸು ಸಚಿವಾಲಯ ಹೇಳಿದೆ.

# ಲವ್ ಜಿಹಾದ್ ತಡೆಗೆ ರಾಜ್ಯದಲ್ಲೂ ಕಾನೂನು

ಬೆಂಗಳೂರು, ನ. 3 - ಲವ್ ಜಿಹಾದ್' ಮಟ್ಟ ಹಾಕಲು ಮದುವೆಗಾಗಿ ಮತಾಂತರ ನಡೆಸುವುದನ್ನು ತಡೆಯಲು ರಾಜ್ಯದಲ್ಲಿ ಕಾನೂನು ತರಲಾಗುವುದು ಎಂದು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಸಿ.ಟಿ. ರವಿ, ಇಂದಿಲ್ಲಿ ಪ್ರಕಟಿಸಿದ್ದಾರೆ.

ಮದುವೆಯಾಗುವ ಉದ್ದೇಶದಿಂದ ಮತಾಂತರವಾಗುವಂತಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ನೀಡಿರುವ ತೀರ್ಪು ಉಲ್ಲೇಖಿಸಿರುವ ಅವರು, ಜಿಹಾದಿ ಶಕ್ತಿಗಳು ನಮ್ಮ ಸಹೋದರಿಯರ ಘನತೆ, ಗೌರವ ಹರಣ ಮಾಡುವುದನ್ನು ಸುಮ್ಮನೆ ನೋಡುತ್ತಾ ಕೂರಲು ಸಾಧ್ಯವಿಲ್ಲ ಎಂದಿದ್ದಾರೆ.

ಯಾರೇ ಇರಲಿ, ಮತಾಂತರದಂತಹ ಕೃತ್ಯದಲ್ಲಿ ತೊಡಗಿದರೆ, ಅಂತಹವರು ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.



> ಜಿಹಾದಿ ಶಕ್ತಿಗಳು ನಮ್ಮ ಸಹೋದರಿಯರ ಘನತೆ, ಗೌರವ ಹರಣ ಮಾಡುವುದನ್ನು ಸುಮ್ಮನೆ ನೋಡುತ್ತಾ ಕೂರಲು ಸಾಧ್ಯವಿಲ್ಲ.
>
> – ಸಿ.ಟಿ. ರವಿ, ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕೊಡಗು, ಕರಾವಳಿ ತೀರ ಪ್ರದೇಶಗಳು ಸೇರಿದಂತೆ, ರಾಜ್ಯದ ಕೆಲವು ಭಾಗಗಳಲ್ಲಿ ಜಿಹಾದಿಗಳು ಹಿಂದೂ ಸಮುದಾಯದ ಹುಡುಗಿಯರನ್ನು ಮತಾಂತರ ಮಾಡಿಸಿ, ಮದುವೆಯಾಗುತ್ತಿದ್ದರು. ಇದು ಭಾರೀ ವಿವಾದಕ್ಕೆ ಎಡೆಮಾಡಿತ್ತು. ಇದರಿಂದ ಕೆಲವೆಡೆ ಗುಂಪು ಹಾಗೂ ಕೋಮು ಘರ್ಷಣೆಗಳು ನಡೆದಿದ್ದವು. ಅಷ್ಟೇ ಅಲ್ಲ ಕೆಲವು ಕುಟುಂಬಗಳು ಆತ್ಮಹತ್ಯೆಗೂ ಒಳಗಾಗಿದ್ದವು. ಇದನ್ನು ಮನಗಂಡೇ ರಾಜ್ಯ ಸರ್ಕಾರ ಕಠಿಣ ಕಾನೂನಿಗೆ ಮುಂದಾಗಿದೆ ಎಂದು ರವಿ ಹೇಳಿದ್ದಾರೆ.

ಉತ್ತರ ಪ್ರದೇಶ, ಹರಿಯಾಣ, ಮಧ್ಯಪ್ರದೇಶ ನಂತರ ಇದೀಗ ಕರ್ನಾಟಕ ಸರ್ಕಾರ ಕೂಡ 'ಲವ್ ಜಿಹಾದ್' ವಿರುದ್ಧ ಕಾನೂನು ಜಾರಿಗೆ ತರಲು ಹೊರಟಿದೆ.

ಮುಸ್ಲಿಂ ಪುರುಷರು ಹಿಂದೂ ಹುಡುಗಿಯರಿಗೆ ಆಮಿಷವೊಡ್ಡಿ ತಮ್ಮ ಜಾತಿಯ ವಿಚಾರವನ್ನು ರಹಸ್ಯವಾಗಿಟ್ಟು ಲವ್ ಜಿಹಾದ್ ಮಾಡಿಕೊಂಡಿರುವ ಘಟನೆಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕಠಿಣ ಕಾನೂನು ರಚಿಸುವುದಕ್ಕೆ ಸರ್ಕಾರ ಮುಂದಾಗಿದೆ.

ಲವ್ ಜಿಹಾದ್ ವಿರುದ್ಧ ಕಾನೂನು ಜಾರಿಗೆ ತರಲು ಮುಂದಾಗಿರುವ ಬಿಜೆಪಿ ಆಡಳಿತದ ನಾಲ್ಕನೇ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಲಿದೆ. ಪ್ರೀತಿ ಹೆಸರಿನಲ್ಲಿ ಜಿಹಾದ್ ನಡೆಯಬಾರದು. ಇಂತಹ ಪದ್ಧತಿಯನ್ನು ತಡೆಯಲು ಕಾನೂನು (2ನೇ ಪುಟಕ್ಕೆ)



**ಬಣ್ಣ ಬಣ್ಣದ ದೀಪ ...** | ದೀಪಗಳ ಹಬ್ಬ ದೀಪಾವಳಿಗೆ ಕೆಲವೇ ದಿನಗಳು ಉಳಿದಿವೆ. ನಗರದ ಪ್ರಮುಖ ರಸ್ತೆಗಳಲ್ಲಿ ವಿವಿಧ ಬಗೆಯ ಬಣ್ಣ ಬಣ್ಣದ ದೀಪಗಳ ಮಾರಾಟ ಆರಂಭವಾಗಿದೆ. ದಾವಣಗೆರೆ ಭಾರತ್ ಕಾಲೋನಿ 1ನೇ ಕ್ರಾಸ್ ಕುಂಬಾರ ಸೊಸೈಟಿ ರಸ್ತೆಯಲ್ಲಿ ಶಿವಕುಮಾರ್ ಕುಟುಂಬ, ದೀಪಗಳ ತಯಾರಿಕೆ ಹಾಗೂ ಮಾರಾಟದಲ್ಲಿ ನಿರತರಾಗಿರುವುದು.

## ಅಕ್ಟೋಬರ್‌ನಲ್ಲಿ ರಫ್ತು ಶೇ.5.4ರಷ್ಟು ಇಳಿಮುಖ

ನವದೆಹಲಿ, ನ. 3 - ಸೆಪ್ಟೆಂಬರ್‌ನಲ್ಲಿ ಏರುಮುಖವಾಗಿದ್ದ ರಫ್ತು, ಅಕ್ಟೋಬರ್‌ನಲ್ಲಿ ಶೇ.5.4ರಷ್ಟು ಇಳಿಕೆಯಾಗಿ 24.82 ಶತಕೋಟಿ ಡಾಲರ್‌ಗಳಿಗೆ ಸೀಮಿತವಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳು, ಹರಳು, ಆಭರಣ, ಚರ್ಮ ಹಾಗೂ ಇಂಜಿನಿಯರಿಂಗ್ ಉಪಕರಣಗಳ ರಫ್ತು ಕುಸಿತವಾಗಿರುವುದು ಇದಕ್ಕೆ ಕಾರಣ.

ಇದೇ ತಿಂಗಳು ಆಮದು ಸಹ ಶೇ.11.56ರಷ್ಟು ಇಳಿಕೆಯಾಗಿ 33.6 ಶತಕೋಟಿ ಡಾಲರ್‌ಗಳಿಗೆ ಸೀಮಿತವಾಗಿದೆ. ಇದರಿಂದ ವಿನಿಮಯ ಕೊರತೆ 11.76 ಶತಕೋಟಿ ಡಾಲರ್ ಆಗಿದೆ.

## ಅನ್ಯ ಜಿಲ್ಲೆಯಿಂದ ಲಾರಿ ಬಾಡಿಗೆಗೆ ಖಂಡನೆ, ಹೆಚ್ಚಿನ ದಂಡಕ್ಕೆ ಆಕ್ರೋಶ

ದಾವಣಗೆರೆ,ನ.3- ಮೆಕ್ಕೆಜೋಳ ಸಾಗಾಣಿಕೆಗೆ ಅನ್ಯ ಜಿಲ್ಲೆಯಿಂದ ಲಾರಿಗಳನ್ನು ಬಾಡಿಗೆಗೆ ತರಿಸಿದ್ದ ಎಪಿಎಂಸಿ ವರ್ತಕರು. ಇದಕ್ಕೆ ಅಸಮಾಧಾನಗೊಂಡು ಆರ್ ಟಿಓ ಕರೆಸಿ ಅನ್ಯ ಜಿಲ್ಲೆ ಲಾರಿಗಳಿಗೆ ಹೆಚ್ಚುವರಿ ದಂಡ ವಿಧಿಸಿದ ಜಿಲ್ಲಾ ಲಾರಿ ಮಾಲೀಕರ ಅಸೋಸಿಯೇಷನ್.



**ಲಾರಿ ಮಾಲೀಕರು ಮತ್ತು ಎಪಿಎಂಸಿ ವರ್ತಕರ ನಡುವೆ ವಾಗ್ವಾದ**

ಹೀಗೆ ಕೃಷಿ ಉತ್ಪನ್ನಗಳ ಸಾಗಾಟದ ವಿಚಾರದಲ್ಲಿ ಲಾರಿ ಮಾಲೀಕರ ಅಸೋಸಿ ಯೇಷನ್ ಮತ್ತು ಎಪಿಎಂಸಿ ವರ್ತಕರ ನಡುವೆ ವಾಗ್ವಾದ ನಡೆದು ಎಪಿಎಂಸಿ ಪ್ರಾಂಗಣದಲ್ಲಿಂದು ಪ್ರಕ್ಷುಬ್ಧ ವಾತಾವರಣ ನಿರ್ಮಾಣಗೊಂಡ ಘಟನೆ ನಡೆಯಿತು.

ದಾವಣಗೆರೆಯಿಂದ ಬೆಂಗಳೂರಿಗೆ ಕ್ವಿಂಟಾಲ್ ಗೆ 115 ರೂ. ಬಾಡಿಗೆಯನ್ನು ಲಾರಿ ಮಾಲೀಕರು ಫಿಕ್ಸ್ ಮಾಡಿದ್ದರು. ಸೋಮವಾರ ಎಪಿಎಂಸಿಯಲ್ಲಿ ರೈತರಿಂದ ಖರೀದಿಸಿದ್ದ ಮೆಕ್ಕೆಜೋಳವನ್ನು ಹೊರ ರಾಜ್ಯಗಳಿಗೆ ಕಳುಹಿಸಲು ಕಡಿಮೆ ಬಾಡಿಗೆಗೆ ಅನ್ಯ ಜಿಲ್ಲೆಯ ಎರಡು ಲಾರಿ ತರಿಸಿಕೊಂಡು ಖರೀದಿದಾರರಿಂದ ಲೋಡ್ ಮಾಡಲಾಗಿತ್ತು. ಇದನ್ನು ಕಂಡ ಲಾರಿ ಅಸೋಸಿಯೇಷನ್‌ನವರು ಆರ್‌ಟಿಓ ಅಧಿಕಾರಿಗಳನ್ನು ಕರೆಸಿ ಎರಡು ಲಾರಿಗಳಿಗೂ ತಲಾ 20 ಸಾವಿರ ರೂ. ದಂಡ ವಿಧಿಸಿದ್ದ (2ನೇ ಪುಟಕ್ಕೆ)

## ಬೆಳ್ಳೂಡಿ ಸಿದ್ದವೀರಪ್ಪ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ

**ಹರಿಹರ**

ಹರಿಹರ, ನ.3- ಬೆಳ್ಳೂಡಿ ಗ್ರಾಮದ ಎ. ಸಿದ್ದವೀರಪ್ಪ ಅವರು ಹರಿಹರ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಭಾನುವಳ್ಳಿಯ ಆರ್.ಸಿ. ಪಾಟೀಲ್ ಅವರ ರಾಜೀನಾಮೆಯಿಂದಾಗಿ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಗೆ ಸಹಕಾರ ಅಭಿವೃದ್ಧಿ ಅಧಿಕಾರಿ ಎನ್.ಜಿ. ರುದ್ರಪ್ಪ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಬ್ಯಾಂಕಿನ ವ್ಯವಸ್ಥಾಪಕರಾದ ಓ.ಎನ್. ನಿರ್ಮಲ (2ನೇ ಪುಟಕ್ಕೆ)

## ಜಗಳೂರಿನಲ್ಲಿ ಗೂಡಂಗಡಿಗಳ ತೆರವು

ಜಗಳೂರು, ನ.3- ಪಟ್ಟಣದ ತಾಲ್ಲೂಕು ಕಚೇರಿ, ಮುಂಭಾಗದಲ್ಲಿರುವ ಮತ್ತು ನೂತನವಾಗಿ ನಿರ್ಮಾಣವಾಗಿರುವ ಬಸ್ ಸ್ಟ್ಯಾಂಡ್ ಹತ್ತಿರದ ಸುತ್ತಮುತ್ತಲಿನ ಫುಟ್‌ಪಾತ್ ಮೇಲೆ ಮತ್ತು ರಸ್ತೆ ಬದಿಯಲ್ಲಿರುವ ಗೂಡಂಗಡಿಗಳನ್ನು ಇಂದು ಪೊಲೀಸ್ ಹಾಗೂ ತಹಶೀಲ್ದಾರರ ನೇತೃತ್ವದಲ್ಲಿ ತೆರವುಗೊಳಿಸಲಾಯಿತು.

ಅಂಗಡಿ-ಮುಂಗಟ್ಟುಗಳನ್ನು ತೆರವುಗೊಳಿಸುವಂತೆ 2017ರಲ್ಲಿ ಲೋಕಾಯುಕ್ತರಲ್ಲಿ ಒಂದು ಪ್ರಕರಣ ದಾಖಲಾಗಿದ್ದ ಹಿನ್ನೆಲೆಯಲ್ಲಿ ಈ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ. ಅಂಬೇಡ್ಕರ್ ವೃತ್ತದಿಂದ ರಸ್ತೆ ಅಗಲೀಕರಣ, ದ್ವಿಮುಖ ರಸ್ತೆ ನಿರ್ಮಾಣ (6ನೇ ಪುಟಕ್ಕೆ)



## ಶಾಲೆ ಆರಂಭ : ನ.6ರಂದು ನಿರ್ಧಾರ

ಬೆಂಗಳೂರು, ನ. 3 - ರಾಜ್ಯದಲ್ಲಿ ಶಾಲೆಗಳ ಪುನರಾರಂಭ ಕುರಿತು ಪೋಷಕರು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ಉಪನಿರ್ದೇಶಕರ ಜೊತೆಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ನಾಳೆ ಬುಧವಾರದಿಂದ ನ. 6ರವರೆಗೆ ಸಭೆ ನಡೆಸಲಿದ್ದು, ಅಂದು ಅಂತಿಮ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ.

ಈ ಸಂದರ್ಭದಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಪುನರಾರಂಭಿಸುವ ಕುರಿತು ಕೂಡ ಚರ್ಚೆ ನಡೆಸಲಾಗುವುದು ಎಂದು ಶಿಕ್ಷಣ ಇಲಾಖೆಯ ಆಯುಕ್ತ ವಿ. ಅನ್ಬುಕುಮಾರ್ ತಿಳಿಸಿದ್ದಾರೆ.

ಶಾಲೆಗಳನ್ನು ಪುನರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಲಿದ್ದಾರೆ. ಇದರೊಂದಿಗೆ ಶಾಲಾ ಕಟ್ಟಡ ಹಾಗೂ ಕೋಣೆಗಳ ದುರಸ್ತಿ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಮತ್ತಿತರೆ ಸಿದ್ಧತೆಗಳ ಬಗ್ಗೆಯೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ ಎಂದವರು ತಿಳಿಸಿದ್ದಾರೆ.

## ಮಾರ್ಕೆಟ್‌ನಲ್ಲಿ ಮಾಸ್ಕ್ ಅಭಿಯಾನ

ದಾವಣಗೆರೆ, ನ. 3 - ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಂಗಳವಾರ ನಗರದ ಮಾರುಕಟ್ಟೆಯಲ್ಲಿ ಮಾಸ್ಕ್ ಧರಿಸ ದವರಿಗೆ ಸ್ಥಳದಲ್ಲೇ ದಂಡ ವಿಧಿಸಿದ್ದಾರಲ್ಲದೇ, ಅಂಗಡಿಯೊಳಗೆ ಸಾಮಾಜಿಕ ಅಂತರ ಕಾಯ್ದುಕೊಳ್ಳದ್ದಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮಂಗಳವಾರ ಸಂಜೆ ಜಿಲ್ಲಾಧಿಕಾರಿಗಳ ನೇತೃತ್ವದ ಅಧಿಕಾರಿಗಳು ಹಾಗೂ ಪೊಲೀಸರ ತಂಡ ಗಡಿಯಾರ ಕಂಬದಿಂದ ಅಭಿಯಾನ ಆರಂಭಿಸಿ ಮಾರುಕಟ್ಟೆಯ ಜನನಿಬಿಡ ಪ್ರದೇಶಗಳಾದ ವಿಜಯಲಕ್ಷ್ಮಿ ರಸ್ತೆ, ಕಾಳಿಕಾದೇವಿ ರಸ್ತೆ, ಚೌಕಿಪೇಟೆ, ಕೆ.ಆರ್. ರಸ್ತೆ ಸೇರಿದಂತೆ ಹಲವು ಕಡೆಗಳಲ್ಲಿ ಭೇಟಿ ನೀಡಿತು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರೇ ಮಾಸ್ಕ್ ಧರಿಸದವರನ್ನು ಖುದ್ದು ಗುರುತಿಸಿ, ಅಂತಹವರಿಗೆ ಸ್ಥಳದಲ್ಲಿಯೇ ದಂಡ ಪಾವತಿಸುವಂತೆ ಸೂಚಿಸಿದರು. ಅಲ್ಲದೆ ಜಿಲ್ಲಾಧಿಕಾರಿಗಳೇ ಮಾಸ್ಕ್ ವಿತರಿಸಿದರು. ಬೀದಿ ಬದಿ (6ನೇ ಪುಟಕ್ಕೆ)


### ಕೋಟಿ ರೂ.ಗಳಿಗೂ ಹೆಚ್ಚು ದಂಡ

ಮುಂಬರುವ ಚಳಿಗಾಲದಲ್ಲಿ ಕೊರೊನಾ ಉಲ್ಬಣಿಸುವ ಸಾಧ್ಯತೆ ಇರುವುದರಿಂದ ಜನ ಮಾಸ್ಕ್ ಹಾಗೂ ಅಂತರದ ನಿಯಮಗಳನ್ನು ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಕರೆ ನೀಡಿದ್ದಾರೆ.
ಹೊರಗಿನ ತಾಲ್ಲೂಕುಗಳಿಂದ ಜನರು ಮಾರುಕಟ್ಟೆಗೆ ಬರುತ್ತಾರೆ. ಈ ಹಿನ್ನೆಲೆಯಲ್ಲಿ ಮಾರ್ಕೆಟ್ (6ನೇ ಪುಟಕ್ಕೆ)

**ದಂಡ ವಿಧಿಸಿ, ಎಚ್ಚರಿಕೆ ನೀಡಿದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ**



## ರಾಜೀವ್ ಹಂತಕರ ಕ್ಷಮಾದಾನ ಅರ್ಜಿ ಬಾಕಿ



**ಸುಪ್ರೀಂ ಕೋರ್ಟ್ ಅಸಮಾಧಾನ**

ನವದೆಹಲಿ, ನ. 3 - ರಾಜೀವ್ ಗಾಂಧಿ ಹಂತಕರಿಗೆ ಕ್ಷಮೆ ನೀಡಬೇಕೆಂಬ ಅರ್ಜಿಯನ್ನು ತಮಿಳುನಾಡು ರಾಜ್ಯಪಾಲರು ಎರಡು ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಉಳಿಸಿಕೊಂಡಿರುವುದಕ್ಕೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ಹೇಮಂತ್ ಗುಪ್ತ ಹಾಗೂ ಅಜಯ್ (2ನೇ ಪುಟಕ್ಕೆ)

## ಕೇಂದ್ರದಿಂದ ಶೀಘ್ರದಲ್ಲೇ ಇನ್ನೊಂದು ಆರ್ಥಿಕ ಪ್ಯಾಕೇಜ್

ನವದೆಹಲಿ, ನ. 3 – ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶೀಘ್ರದಲ್ಲೇ ಹೊಸ ಆರ್ಥಿಕ ಉತ್ತೇಜನ ಪ್ಯಾಕೇಜ್ ಪ್ರಕಟಿಸಲಿದ್ದಾರೆ ಎಂದು ಕೇಂದ್ರ ಹಣಕಾಸು ಕಾರ್ಯದರ್ಶಿ ತರುಣ್ ಬಜಾಜ್ ತಿಳಿಸಿದ್ದಾರೆ. ಆರ್ಥಿಕತೆಯ ಹಲವಾರು ವಲಯಗಳಿಂದ ಸಚಿವಾಲಯ ಮನವಿ ಹಾಗೂ ಸಲಹೆಗಳನ್ನು ಸ್ವೀಕರಿಸಿದೆ. ಈ ಬಗ್ಗೆ ಚರ್ಚೆ (6ನೇ ಪುಟಕ್ಕೆ)





7ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಚಿ. ದಕ್ಷ್ ಗೆ
ಪ್ರೀತಿಯ ಶುಭಾಶಯಗಳು.


ಅಜ್ಜಿ : ಶ್ರೀಮತಿ ಎಸ್. ನಿರ್ಮಲ
ಅಜ್ಜ : ಎಸ್. ಬಸವರಾಜ್ ಶಾಮನೂರು
ಮಾಜಿ ನಗರಸಭಾ ಸದಸ್ಯರು

|| ಶ್ರೀ ದಶರಥ ರಾಮೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ಸಿಟಿ ಕೆ.ಬಿ. ಬಡಾವಣೆ ವಾಸಿ
ಬಂಡೆ ಬೊಮ್ಮೇನಹಳ್ಳಿ ಶ್ರೀ ಲಿಂಗರಾಜ್ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 27.10.2020ನೇ ಮಂಗಳವಾರ ಬೆಳಿಗ್ಗೆ 9.30ಕ್ಕೆ ನಮ್ಮ ಪೂಜ್ಯ ತಂದೆಯವರಾದ




ಶ್ರೀ ಪರಮೇಶ್ವರಪ್ಪ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 04.11.2020ನೇ ಬುಧವಾರ ಬೆಳಿಗ್ಗೆ 10.30 ಕ್ಕೆ ಕೆ.ಬಿ. ಬಡಾವಣೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು :
ಶ್ರೀಮತಿ ಮೀನಾ ಶ್ರೀ ಬಿ.ಪಿ. ಲಿಂಗರಾಜ್ ಮತ್ತು ಮಕ್ಕಳು
ಶ್ರೀಮತಿ ಹೇಮ ಶ್ರೀ ಬಿ.ಪಿ. ನಟರಾಜ್ ಮತ್ತು ಮಕ್ಕಳು
ಶ್ರೀಮತಿ ಬಿ.ಪಿ.ಸುನಂದ ಶ್ರೀ ಶಿವಕುಮಾರ್ ಮತ್ತು ಮಕ್ಕಳು
ಶ್ರೀಮತಿ ಅರುಣ ಶ್ರೀ ಬಿ.ಪಿ. ದೇವರಾಜ್ ಮತ್ತು ಮಕ್ಕಳು
ಸಿದ್ರಾಮಜ್ಜರ ವಂಶಸ್ಥರು ಹಾಗೂ ಬಂಧು ಮಿತ್ರರು

# ಮತ್ತೊಬ್ಬರ ಹೆಸರಲ್ಲಿ ಪಹಣಿ: ರೈತ ಕುಟುಂಬದ ಧರಣಿ



**ನೇಣಿಗೆ ಶರಣಾಗುವುದಾಗಿ ಹಗ್ಗವನ್ನು ಹಿಡಿದು ತಹಶೀಲ್ದಾರ್ ಕಚೇರಿಯ ಮುಂಭಾಗದಲ್ಲಿ ಪ್ರತಿಭಟನೆ**

ಹರಿಹರ, ನ 3- ತಾಲ್ಲೂಕಿನ ಹಾಲಿವಾಣ ಗ್ರಾಮದ ರೈತ ಕುಟುಂಬದ ಬಸವನಗೌಡ, ಹನುಮನಗೌಡ, ರಂಗನಗೌಡ, ವೀರಪ್ಪಗೌಡ, ನರಸಿಂಹಪ್ಪ ಅವರಿಗೆ ಸೇರಿದ ಜಮೀನನ್ನು ಗ್ರಾಮದ ಇನ್ನೊಬ್ಬರ ಹೆಸರಿಗೆ ಅಧಿಕಾರಿಗಳು ಖಾತೆ ಮಾಡಿ ಅವರ ಹೆಸರು ಪಹಣಿಯಲ್ಲಿ ಬರುವಂತೆ ಮಾಡಿರುವುದರಿಂದ ನಮ್ಮ ಕುಟುಂಬದ ಸುಮಾರು 30 ಕ್ಕೂ ಹೆಚ್ಚು ಜನರು ಬೀದಿ ಪಾಲಾಗಿದ್ದಾರೆ ಎಂದು ದೂರಿ ನೇಣಿಗೆ ಶರಣಾಗುವುದಾಗಿ ಹಗ್ಗವನ್ನು ಹಿಡಿದು ತಹಶೀಲ್ದಾರ್ ಕಚೇರಿಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದ ಘಟನೆ ಇಂದು ನಡೆದಿದೆ.

ಈ ವೇಳೆ ಮಾತನಾಡಿದ ಬಸವನಗೌಡ್ರು ಹಾಲಿವಾಣ, ಮೂಲ ವಾರಸುದಾರರಾದ ರುದ್ರಪ್ಪ ಬಿನ್ ರಂಗಪ್ಪ, ಸಿದ್ದಪ್ಪ ಬಿನ್ ಹನುಮಂತಪ್ಪ ಇವರಿಗೆ ಸೇರಿದ್ದ 4/1 ನೇ ಸರ್ವೆ ನಂ. ಜಮೀನನ್ನು ಕಳೆದ 70 ವರ್ಷಗಳಿಂದ 7 ಎಕರೆ ಭೂಮಿಯನ್ನು ಉಳುಮೆ ಮಾಡಿಕೊಂಡು ನಾವು ಬರುತ್ತಿದ್ದೇವೆ. 22-9-2020 ರಂದು ಸಹ ನಮ್ಮ ಅಜ್ಜನವರ ಹೆಸರಿಗೆ ಪಹಣಿ ಬಂದಿದ್ದು, ಇದಾದ ನಂತರ ಹಾಲಿವಾಣ ಗ್ರಾಮದ ಹನುಮಂತಪ್ಪ ಬಿನ್ ಹನುಮಪ್ಪ ಎಂಬುವವರ ಹೆಸರಿಗೆ ತಹಶೀಲ್ದಾರ ಕಚೇರಿಯ ಅಧಿಕಾರಿಗಳು ನೀಡಿರುವ ಪಹಣಿಯಲ್ಲಿ ಬರುತ್ತಿದೆ.

ಆ ವ್ಯಕ್ತಿಗಳು 2018 ರಲ್ಲಿ ಮರಣವನ್ನು ಹೊಂದಿದ್ದಾರೆ. ಮತ್ತು 1 ಎಕರೆ ಜಮೀನನ್ನು ಮತ್ತು 2 ಎಕರೆ ಜಮೀನನ್ನು ಒಂದೇ ಹೆಸರಿಗೆ ನೋಂದಣಿ ಮಾಡಿಸಲಾಗಿದೆ. ಅವರ ಹೆಸರಿಗೆ ವಂಶವೃಕ್ಷ ಸೇರಿದಂತೆ ಯಾವುದೇ ಸ್ಪಷ್ಟವಾದ ದಾಖಲೆಗಳು ಇಲ್ಲದಿದ್ದರೂ ಸಹ ಅವರ ಹೆಸರಿಗೆ ಪಹಣಿ ನೀಡಿದ್ದಾರೆ. ಇದರಿಂದ ನಮ್ಮ ಕುಟುಂಬದ 30ಕ್ಕೂ ಅಧಿಕ ಸದಸ್ಯರಿಗೆ ಅನ್ಯಾಯವಾಗಿದೆ ಎಂದು ತಿಳಿಸಿದ್ದಾರೆ.

ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಮಾತನಾಡಿ, ತಮ್ಮ ಇಲಾಖೆಯಿಂದ ಯಾವುದೇ ಆ ರೀತಿಯ ತಪ್ಪುಗಳು ನಡೆಯಲು ಅವಕಾಶ ಇರುವುದಿಲ್ಲ. ಮೇಲಿನ ಅಧಿಕಾರಿಗಳಿಂದ ಏನು ಆದೇಶ ಬಂದಿರುತ್ತದೆಯೋ ಅದರ ಅಡಿಯಲ್ಲಿ ಕೆಲಸವನ್ನು ನಿರ್ವಹಣೆ ಮಾಡಲಾಗಿರುತ್ತದೆ. ಅನ್ಯಾಯವಾಗಿದ್ದರೆ ನ್ಯಾಯಾಲಯದ ಮೊರೆ ಹೋಗಬಹುದು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಹನುಮನಗೌಡ, ರಂಗನಗೌಡ, ವೀರನಗೌಡ, ನರಸಿಂಹಪ್ಪ, ಕರಿಯಪ್ಪ, ಹನುಮಂತಪ್ಪ, ಹನುಮಗೌಡ ಇನ್ನಿತರರು ಪಾಲ್ಗೊಂಡಿದ್ದರು.

# ನೆಲ, ಜಲದ ಮೇಲೆ ಅಭಿಮಾನವಿಟ್ಟು ಪ್ರತಿ ದಿನದ ಕೆಲಸ-ಕಾರ್ಯಗಳಲ್ಲಿ ಕನ್ನಡ ಬಳಸಿ, ಬೆಳೆಸಬೇಕು

## ಹರಪನಹಳ್ಳಿ : ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಕೀಲ ಕಣವಿಹಳ್ಳಿ ಮಂಜುನಾಥ್ ಕರೆ



ಹರಪನಹಳ್ಳಿ, ನ.3- ಕನ್ನಡ ನಾಡು, ನುಡಿಗಳ ಮೇಲಿರುವ ಅಭಿಮಾನ ಕೇವಲ ನವೆಂಬರ್ ತಿಂಗಳಿಗೆ ಸೀಮಿತವಾಗಬಾರದು ಎಂದು ಅಪರ ಸರ್ಕಾರಿ ವಕೀಲ ಕಣವಿಹಳ್ಳಿ ಮಂಜುನಾಥ ಹೇಳಿದರು.

ಪಟ್ಟಣದ ಆಚಾರ್ ಬಡಾವಣೆಯ ನ್ಯೂಟ್ರಿಷಿಯನ್ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡದ ಬಗ್ಗೆ ಅಭಿಮಾನ ಇಟ್ಟುಕೊಳ್ಳದೇ ವರ್ಷ ಪೂರ್ತಿ ಕನ್ನಡ ಭಾಷೆ, ನೆಲ, ಜಲದ ಬಗ್ಗೆ ಅಭಿಮಾನ ಇಟ್ಟುಕೊಂಡು ತಮ್ಮ ಪ್ರತಿ ದಿನದ ಕೆಲಸ, ಕಾರ್ಯಗಳಲ್ಲಿ ಕನ್ನಡ ಬಳಸಿ, ಬೆಳೆಸಬೇಕು ಎಂದು ತಿಳಿಸಿದರು.

ನಿವೃತ್ತ ಮುಖ್ಯ ಶಿಕ್ಷಕ ಸಿ.ಎಂ.ಕೊಟ್ರಯ್ಯ ಮಾತನಾಡಿ, ಅಲ್ಲಲ್ಲಿ ಚದುರಿದ್ದ ಕನ್ನಡವನ್ನೆಲ್ಲ ಒಂದು ಗೂಡಿಸಿ ಅದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ದಿನ, ಪಟ್ಟಣದಲ್ಲಿ ಕನ್ನಡ ಮಿತ್ರ ಸಂಘ ಎಂದು ಸಂಘ ಕಟ್ಟಿಕೊಂಡು ನಾವು ಅನೇಕ ವರ್ಷಗಳ ಕಾಲ ಕನ್ನಡ ನಾಡು, ನುಡಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದೇವೆ, ಕನ್ನಡ ರಾಜ್ಯೋತ್ಸವ ನಿತ್ಯೋತ್ಸವವಾಗಬೇಕು ಎಂದು ಹೇಳಿದರು.

ತರಬೇತುದಾರೆ ಲಕ್ಷ್ಮೀ ಕಣವಿಹಳ್ಳಿ ಮಾತನಾಡಿ, ಭಾಷಾವಾರು ಪ್ರಾಂತ ರಚನೆಯಾಗಿ ಕನ್ನಡಿಗರೆಲ್ಲರೂ ಒಂದು ಕಡೆ ಸೇರಿ 1956 ರಲ್ಲಿ ವಿಶಾಲ ಮೈಸೂರು ರಾಜ್ಯವಾಯಿತು. ನಂತರ 1973 ರಲ್ಲಿ ಕರ್ನಾಟಕ ಎಂದು ನಾಮಕರಣವಾಯಿತು.

ಕನ್ನಡ ಧ್ವಜ ಕೆಂಪು ಹಾಗೂ ಹಳದಿ ಬಣ್ಣ ಹೊಂದಿದ್ದು, ಹಳದಿ ಬಣ್ಣವು ಶಾಂತಿ ಮತ್ತು ಸೌಹಾರ್ದತೆ ಹಾಗೂ ಕೆಂಪು ಕ್ರಾಂತಿಯ ಸಂಕೇತ ಅಂದರೆ ಕನ್ನಡಿಗರು ಶಾಂತಿಗೂ ಬದ್ಧ, ಯುದ್ಧಕ್ಕೂ ಸಿದ್ಧ ಎಂಬ ಸಂದೇಶ ನೀಡುತ್ತದೆ ಎಂದರು.

ತರಬೇತುದಾರ ಕಣವಿಹಳ್ಳಿ ಚಂದ್ರಶೇಖರ್, ಕಸಾಪ ನಿಕಟಪೂರ್ವ ಅಧ್ಯಕ್ಷ ಬಿ.ರಾಮಪ್ರಸಾದ್ ಗಾಂಧಿ, ಕಸಾಪ ತಾ. ಕಾರ್ಯದರ್ಶಿ ಹೇಮಣ್ಣ ಮೋರಿಗೇರಿ ಮಾತನಾಡಿದರು. ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಪಿ.ಬಿ.ಗೌಡ, ಪೂರ್ಣಿಮಾ, ಕೊಟ್ರಬಸಪ್ಪ, ಎ.ಎಂ.ಸುಮಾ, ಸಾತ್ವಿಕ್, ದೀಕ್ಷಾ ಮತ್ತಿತರರು ಉಪಸ್ಥಿತರಿದ್ದರು.

# ಜಾನುವಾರುಗಳಲ್ಲಿನ ಕಾಲು, ಬಾಯಿ ಜ್ವರ ತಡೆಗೆ ಲಸಿಕೆ ಹಾಕಿಸಿ



**ಕೊಟ್ಟೂರು : ಪಶು ವೈದ್ಯಕೀಯ ಇಲಾಖಾ ವೈದ್ಯರ ಕರೆ**

ಕೊಟ್ಟೂರು, ನ.3- ಸಮೀಪದ ಚಿನ್ನೇನಹಳ್ಳಿ ಹಾಗೂ ಹಿರೇವಡ್ಡರಹಳ್ಳಿ ಗ್ರಾಮಗಳಲ್ಲಿ ಜಾನುವಾರುಗಳಿಗೆ ಉಚಿತ ರಾಷ್ಟ್ರೀಯ ಕಾಲು ಬಾಯಿ ರೋಗ ಲಸಿಕೆ ಕಾರ್ಯಕ್ರಮ ನಡೆಯಿತು.

ಪಶು ವೈದ್ಯ ಇಲಾಖೆಯ ಉಪ ನಿರ್ದೇಶಕ ಡಾ. ಬಿ.ಎಲ್. ಪರಮೇಶ್ವರ್ ನಾಯ್ಕ್ ಅವರು ಮಾತನಾಡಿ, ರೈತರ ಜಾನುವಾರುಗಳಿಗೆ ಸಂಕಷ್ಟ ಉಂಟುಮಾಡುವ ಕಾಲುಬಾಯಿ ರೋಗದಿಂದ ಮುಕ್ತಗೊಳಿಸುವ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ತಪ್ಪದೇ ಲಸಿಕೆ ಹಾಕಿಸಬೇಕು. ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು ಎಂದು ಹೇಳಿದರು.

ಕೊಟ್ಟೂರು ತಾಲ್ಲೂಕು ಚಿನ್ನೇನಹಳ್ಳಿ ಮತ್ತು ಹಿರೇವಡ್ಡರಹಳ್ಳಿ ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ಇಂದು ಆಯೋಜಿಸಿದ್ದ 18 ನೇ ಸುತ್ತಿನ ಉಚಿತ ರಾಷ್ಟ್ರೀಯ ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾರಕ ಕಾಯಿಲೆ ಕಾಲುಬಾಯಿ ಜ್ವರ ಮೂಕ ಪ್ರಾಣಿಗಳು ಸೇರಿದಂತೆ ಜಾನುವಾರುಗಳಲ್ಲಿ ಕಂಡು ಬಂದರೆ ವಾಸಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ತಡೆಗಟ್ಟಲು ಲಸಿಕೆ ಹಾಕಿಸುವುದು ಕಡ್ಡಾಯವಾಗಿದೆ.ರೈತರು ಜಾನುವಾರುಗಳಿಗೆ ಲಸಿಕೆ ಹಾಕಿಸಿ ತಮ್ಮ ಹಸುಗಳನ್ನು ಈ ಮಾರಕ ಕಾಯಿಲೆಯಿಂದ ದೂರ ಇಡಬೇಕಿದೆ.

ಪ್ರತಿ ಗ್ರಾಮಗಳಲ್ಲಿರುವ ಪ್ರತಿ ಹಸುವಿಗೂ ಲಸಿಕೆ ಹಾಕಿಸಿ. ಗ್ರಾಮದ ಒಂದು ಹಸುವಿನಲ್ಲಿ ಈ ಕಾಯಿಲೆ ಕಂಡುಬಂದರೆ, ಉಳಿದ ಎಲ್ಲಾ ಹಸುಗಳಿಗೂ ಹರಡುವ ಸಾಂಕ್ರಾಮಿಕ ರೋಗವೆಂಬುದನ್ನು ರೈತರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಡಾ. ರವಿಪ್ರಕಾಶ್ ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ಪಶುವೈದ್ಯಕೀಯ ಪರೀಕ್ಷಕರಾದ ಯೋಗೀಶ್ವರ ದಿನ್ನೆ ಮಾತಾನಾಡಿದರು. ರೈತರಾದ ಮಲ್ಲಯ್ಯ, ಶಾಮ್, ರವಿ, ರುದ್ರಪ್ಪ, ವಾಗೀಶ್, ಬಸಯ್ಯ, ಶಿವಮೂರ್ತಿ ಮತ್ತಿತರರಿದ್ದರು.

# ಬುದ್ಧಿಮಾಂದ್ಯ ಅಣ್ಣನಿಂದ ತಂಗಿ ಮೇಲೆ ಅತ್ಯಾಚಾರ

**ಕೂಡ್ಲಿಗಿ**

ಕೂಡ್ಲಿಗಿ, ನ.3- ಬುದ್ಧಿಮಾಂದ್ಯ ಅಣ್ಣನೊಬ್ಬ ತಂಗಿ ಮೇಲೆ ನಿರಂತರ ಅತ್ಯಾಚಾರವೆಸಗಿದ ಪರಿಣಾಮ ಅಪ್ರಾಪ್ತ ಬಾಲಕಿ ಗರ್ಭಿಣಿ ಆಗಿರುವ ಅಮಾನವೀಯ - ಅಸಹ್ಯಕರ ಘಟನೆ ತಾಲ್ಲೂಕಿನ ಹೊಸಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಜರುಗಿದ್ದು, ವಿಷಯ ತಡವಾಗಿ ಬೆಳಕಿಗೆ ಬಂದಿದೆ.

19 ವರ್ಷದ ಅಪ್ರಾಪ್ತ ಬುದ್ಧಿಮಾಂದ್ಯ ಅಣ್ಣನೊಬ್ಬ, 9ನೇ ತರಗತಿಯ 17 ವರ್ಷದ ಅಪ್ರಾಪ್ತ ಬಾಲಕಿ ಮೇಲೆ ಸಹೋದರ ಸಂಬಂಧವನ್ನು ಅರಿ ಯದೆ ನಿರಂತರ ಅತ್ಯಾಚಾರವೆಸಗಿ ಗರ್ಭಿಣಿಯನ್ನಾಗಿಸುವ ಮೂಲಕ ನಾಗರಿಕ ಸಮಾಜ ತಲೆತಗ್ಗಿಸುವ ಘಟನೆಗೆ ಕಾರಣವಾಗಿದೆ.

ಬಾಲಕಿಗೆ ಇತ್ತೀಚಿಗೆ ಹೊಟ್ಟೆ ನೋವು ಕಾಣಿಸಿ ಕೊಂಡಿದ್ದು, ಹೆತ್ತವರು ಮಗಳನ್ನು ವೈದ್ಯರ ಬಳಿ ಕರೆದು ಕೊಂಡು ಹೋಗಿ ಪರೀಕ್ಷಿಸಿದಾಗ ಗರ್ಭಿಣಿಯಾಗಿರುವುದು ಪರೀಕ್ಷೆ ಮೂಲಕ ದೃಢಪಡಿಸಿದ್ದಾರೆ. ನನ್ನ ಬುದ್ಧಿಮಾಂದ್ಯ ಅಣ್ಣನೇ ಕಾರಣವೆಂದು ತಂಗಿ ಒಪ್ಪಿಕೊಂಡಿದ್ದಾಳೆ. ಗರ್ಭಿಣಿ ಬಾಲಕಿಗೆ ತೀವ್ರ ರಕ್ತಸ್ರಾವ ಆಗಿರುವ ಕಾರಣ ಬಳ್ಳಾರಿ ವಿಮ್ಸ್‌ನಲ್ಲಿ ಅಗತ್ಯ ಚಿಕಿತ್ಸೆ ನೀಡಲಾಗಿದೆ. ಬಳ್ಳಾರಿ ಬಾಲಮಂದಿರದಲ್ಲಿ ಆರೈಕೆ ಮಾಡಲಾಗುತ್ತಿದೆ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸೂಚನೆಯಂತೆ ಕೂಡ್ಲಿಗಿ ಸಿಡಿಪಿಓ ನೀಡಿದ ಲಿಖಿತ ದೂರಿನಂತೆ ಹೊಸಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಾಡಿಗೆಗೆ ಖಂಡನೆ, ಹೆಚ್ಚಿನ ದಂಡಕ್ಕೆ ಆಕ್ರೋಶ



**(1ನೇ ಪುಟದಿಂದ)** ಘಟನೆ ನಡೆದಿತ್ತು.

ಇದು ಎಪಿಎಂಸಿ ವರ್ತಕರು, ಹಮಾಲರು, ರೈತರು ಮತ್ತು ಎಪಿಎಂಸಿ ನಿರ್ದೇಶಕರ ಆಕ್ರೋಶಕ್ಕೆ ಕಾರಣವಾಯಿತು. ಹೀಗಾಗಿ ಬೆಳಗ್ಗೆ ಎಪಿಎಂಸಿ ಪ್ರಾಂಗಣದಲ್ಲಿ ಒಟ್ಟಾಗಿ ಸೇರಿದ ಇವರೆಲ್ಲರೂ ಲಾರಿ ಮಾಲೀಕರ ಅಸೋಸಿಯೇಷನ್ ಮತ್ತು ಆರ್‌ಟಿಓ ಅಧಿಕಾರಿಗಳ ವಿರುದ್ಧ ಸಿಡಿದೆದ್ದರು. ಅಲ್ಲದೇ, ಆರ್ ಟಿಓ ಅಧಿಕಾರಿಗಳು ಲಾರಿ ಮಾಲೀಕರ ಕೈಗೊಂಬೆಯಾಗಿದ್ದಾರೆ ಎಂದು ಆರೋಪಿಸುತ್ತಾ, ದಂಡ ವಿಧಿಸಿದ ಅಧಿಕಾರಿ ಸ್ಥಳಕ್ಕೆ ಬರುವಂತೆ ಪಟ್ಟು ಹಿಡಿದರು ಹಾಗೂ ಲಾರಿ ಮಾಲೀಕರ ಅಸೋಸಿಯೇಷನ್ ಅಧ್ಯಕ್ಷ ಸಯ್ಯದ್ ಸೈಫುಲ್ಲಾ ವಿರುದ್ಧ ಪ್ರತಿಭಟಿಸಿದ್ದಾರೆ.

ಈ ವೇಳೆ ಮಧ್ಯಸ್ಥಿಕೆಗೆ ಬಂದ ಆರ್‌ಟಿಓ ಅಧಿಕಾರಿಗಳ ಮೇಲೆ ವರ್ತಕರು, ಹಮಾಲರು ತಿರುಗಿ ಬಿದ್ದರು. ಎರಡು ಲಾರಿಗಳು ಹೆಚ್ಚುವರಿ ಲೋಡ್ ಮಾಡಿವೆ ಎಂದು ದಂಡ ಹಾಕಲಾಗಿದೆ. ಆದರೆ, ಸ್ಥಳೀಯ ಲಾರಿಗಳು ಅಷ್ಟೇ ಪ್ರಮಾಣದಲ್ಲಿ ಲೋಡ್ ಮಾಡಿದ್ದು, ಅವುಗಳ ಮೇಲೆ ಆರ್‌ಟಿಓ ಅಧಿಕಾರಿಗಳು ಕ್ರಮವೇಕೆ ಕೈಗೊಂಡಿಲ್ಲ ಎಂಬುದಾಗಿ ಪೊಲೀಸ್ ಮತ್ತು ಆರ್‌ಟಿಓ ಅಧಿಕಾರಿಗಳ ಜೊತೆ ವಾಗ್ವಾದ ನಡೆಸಿದರು.

ಸಭೆಗೆ ಬಂದಿದ್ದ ಲಾರಿ ಮಾಲೀಕರ ಅಸೋಸಿಯೇಷನ್ ಅಧ್ಯಕ್ಷ ಸಯ್ಯದ್ ಸೈಫುಲ್ಲಾ ಅವರನ್ನು ಅಲ್ಲಿದ್ದ ಕೆಲವರು ತಳ್ಳಾಡಿ ನೂಕಾಟ ನಡೆಸಿದ್ದಾರೆ. ಸಭೆಯಿಂದ ಹೊರಗೆ ಹೋಗಲು ಯತ್ನಿಸಿದಾಗ ಸೈಯದ್ ಸೈಫುಲ್ಲಾ ಅವರ ಮೇಲೆ ಹಲ್ಲೆ ನಡೆದಿದ್ದು, ಹಮಾಲರಿಂದ ಎಪಿಎಂಸಿಯ ಕೊಠಡಿಯಲ್ಲಿ ಸೈಫುಲ್ಲಾ ಅವರಿಗೆ ದಿಗ್ಬಂಧನ ಹಾಕಲಾಗಿತ್ತು. ಈ ಘಟನೆಗೆ ಸಯ್ಯದ್ ಸೈಫುಲ್ಲಾ ಅವರು ಹಮಾಲರ ಬಗ್ಗೆ ಆಡಿದ ಮಾತುಗಳು ಕೆರಳಿಸಿದ್ದವು ಎನ್ನಲಾಗಿದೆ. ಇದರಿಂದ ಎಪಿಎಂಸಿ ಪ್ರಾಂಗಣದಲ್ಲಿ ಕೆಲವು ಕಾಲ ಪ್ರಕ್ಷುಬ್ಧ ವಾತಾವರಣ ನಿರ್ಮಾಣಗೊಂಡಿತ್ತು. ಕೊನೆಗೆ ಪೊಲೀಸರ ಮಧ್ಯ ಪ್ರವೇಶ ಮತ್ತು ಎಪಿಎಂಸಿ ನಿರ್ದೇಶಕರ ಮನವಿಗೆ ಹಮಾಲರು ಸುಮ್ಮನಾದರು. ಅಂತಿಮವಾಗಿ ಸೈಫುಲ್ಲಾ ಅವರನ್ನು ಪೊಲೀಸರ ರಕ್ಷಣೆಯಲ್ಲಿ ಕೊರೆದೊಯ್ಯಲಾಯಿತು.

ಪ್ರತಿಭಟನೆ ವೇಳೆ ಎಪಿಎಂಸಿ ಅಧ್ಯಕ್ಷ ಚಂದ್ರಶೇಖರ್, ರುದ್ರೇಶ್, ಎಸ್.ಕೆ. ಪಲ್ಲಾಘಟ್ಟೆ, ಶ್ರೀನಿವಾಸ್, ನಾಗಭೂಷನ್, ದೊಗ್ಗಳ್ಳಿ ಬಸವರಾಜ್ ಸೇರಿದಂತೆ ಇತರರು ಇದ್ದರು.

**ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್ ಮಾತನಾಡಿ, ದಾವಣಗೆರೆ ಲಾರಿ ಅಸೋಸಿಯೇಷನ್‌ನ ಧೋರಣೆಯಿಂದಾಗಿ ರೈತರಿಂದ ಭತ್ತ, ಮೆಕ್ಕೆಜೋಳ ಖರೀದಿಸುವುದನ್ನು ವರ್ತಕರು ನಿಲ್ಲಿಸುವ ಪರಿಸ್ಥಿತಿ ಉಂಟಾಗುತ್ತಿದೆ. ಈ ರೀತಿಯಾದಲ್ಲಿ ವರ್ತಕರಿಗಿಂತ ರೈತ ವಲಯಕ್ಕೆ ತುಂಬಲಾರದ ನಷ್ಟ ಆಗುತ್ತದೆ. ಈಗಾಗಲೇ ಲಾರಿ ಅಸೋಸಿಯೇಷನ್ ಅವರು ಸಭೆಗೆ ಆಗಮಿಸಿ, ಹಿಂದಿನಂತೆ ಎಲ್ಲರೂ ಕಾರ್ಯನಿರ್ವಹಣೆಗೆ ಭರವಸೆ ನೀಡಿದ್ದಾರೆಂದರು.**

**ವರ್ತಕರ ಸಂಘದ ಕಾರ್ಯದರ್ಶಿ ಜಾವೀದ್ ಮಾತನಾಡಿ, ದಾವಣಗೆರೆಯಿಂದ ಬೆಂಗಳೂರಿಗೆ ಒಂದು ಕ್ವಿಂಟಾಲ್ ಸಾಗಿಸಲು 115 ರೂ.ಗಳನ್ನು ಸ್ಥಳೀಯ ಲಾರಿ ಅಸೋಸಿಯೇಷನ್ ನಿಗದಿ ಮಾಡಿದ್ದು, ಇದರಿಂದ ರೈತರಿಗೆ ಆರ್ಥಿಕ ಹೊರೆಯಾಗಲಿದೆ. ಆದ್ದರಿಂದ ಹೊರ ಜಿಲ್ಲೆಯ ಲಾರಿಗಳನ್ನು ಕರೆಯಿಸಿ ಲೋಡ್ ಮಾಡಿ ಸಾಗಾಟ ಮಾಡುತ್ತಿದ್ದೇವೆ. ಆದರೆ ಅದನ್ನು ಲಾರಿ ಮಾಲೀಕರ ಅಸೋಸಿಯೇಷನ್ ತಡೆ ಹಿಡಿದು ನಮ್ಮ ಜಿಲ್ಲೆಯ ಲಾರಿಗಳಲ್ಲಿಯೇ ಸಾಗಿಸಬೇಕೆಂದು ದಬ್ಬಾಳಿಕೆ ನಡೆಸುತ್ತಿದ್ದಾರೆಂದರು.**

# ಲವ್ ಜಿಹಾದ್ ತಡೆಗೆ ರಾಜ್ಯದಲ್ಲೂ ಕಾನೂನು

**(1ನೇ ಪುಟದಿಂದ)** ರೂಪಿಸಲಾಗುವುದು ಎಂದಿದ್ದಾರೆ.

ತಮ್ಮ ನಿಜವಾದ ಹೆಸರು ಮತ್ತು ಗುರುತು ಮರೆಮಾಚಿ ನಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಗೌರವ ಮತ್ತು ಘನತೆಯೊಂದಿಗೆ ಆಟವಾಡುವವರಿಗೆ ಇದು ಎಚ್ಚರಿಕೆ ಪಾಠವಾಗಲಿದೆ. ಅವರು ತಮ್ಮನ್ನು ತಿದ್ದಿಕೊಳ್ಳದೇ ಹೋದರೆ, ಲವ್ ಜಿಹಾದ್‌ನಲ್ಲಿ ಭಾಗಿಯಾಗಿರುವವರ ಚಿತ್ರಗಳ ಪೋಸ್ಟರ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ವಿವಾಹದ ಏಕೈಕ ಉದ್ದೇಶಕ್ಕಾಗಿ ಮಾಡಲಾಗುವ ಮತಾಂತರ ಮಾನ್ಯವಲ್ಲ ಎಂಬ ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಆಧಾರವಾಗಿಟ್ಟುಕೊಂಡು ನೂತನ ಕಾಯ್ದೆ ರೂಪಿಸಲಿದೆ. ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಕಾನೂನು ಮಂಡಿಸಿ, ಸದನದ ಅನುಮತಿ ಪಡೆದುಕೊಳ್ಳಲಾಗುವುದು ಎಂದರು.

# ಬೆಳ್ಳೂಡಿ ಸಿದ್ದವೀರಪ್ಪ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ



**(1ನೇ ಪುಟದಿಂದ)** ಸಹಕರಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಗುತ್ತೂರಿನ ಕೆ. ರವೀಂದ್ರನಾಥ್, ನಿರ್ದೇಶಕರಾದ ಮಲೇಬೆನ್ನೂರಿನ ಸಿರಿಗೆರೆ ರಾಜಣ್ಣ, ಯಲವಟ್ಟಿ ಜಿ. ಆಂಜನೇಯ, ಗುತ್ತೂರು ಹೆಚ್. ಚಂದ್ರಪ್ಪ, ಧೂಳೆಹೊಳೆ ಹೆಚ್. ವಾಮದೇವಪ್ಪ, ಹರಿಹರ ಹೆಚ್.ಕೆ. ನಾಗರಾಜ್, ಆರ್.ಬಿ. ವಿಜಯಲಕ್ಷ್ಮಿ, ಹನಗವಾಡಿಯ ಬಣಕಾರ ಪ್ರಸನ್ನ, ಹೊಳೆಸಿರಿಗೆರೆ ಕೆ.ಎಂ. ಬಸವರಾಜಪ್ಪ, ಹಳ್ಳಿಹಾಳ್ ಹೆಚ್.ಜಿ. ಧರ್ಮರಾಜ್, ಕೊಕ್ಕನೂರು ಅಂಜಿನಮ್ಮ, ಕೊಂಡಜ್ಜಿ ಸುಧಾ, ನಾಮ ನಿರ್ದೇಶಕ ವಾಸನದ ಎನ್. ಅಶೋಕ್ ಹಾಜರಿದ್ದು, ಅವಿರೋಧ ಆಯ್ಕೆಗೆ ಸಮ್ಮತಿಸಿದರು.

ನೂತನ ಅಧ್ಯಕ್ಷರನ್ನು ಮಾಜಿ ಶಾಸಕ ಬಿ.ಪಿ. ಹರೀಶ್, ಹಿರಿಯ ಮುಖಂಡ ಎನ್.ಜಿ. ನಾಗನಗೌಡ್ರು, ತಾಲ್ಲೂಕು ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟದ ಲಿಂಗರಾಜ್, ಗೌಡ್ರ ಶೇಖರಪ್ಪ, ಗೌಡ್ರ ಮಲ್ಲೇಶಪ್ಪ, ಮುದೇಗೌಡ್ರ ಪ್ರಭು, ಬೆಳ್ಳೂಡಿಯ ಗಂಗಾಧರಪ್ಪ ಹಾಗೂ ಇನ್ನಿತರರು ಅಭಿನಂದಿಸಿದರು.

# ಕ್ಷಮಾದಾನ ಅರ್ಜಿ ಬಾಕಿ

**(1ನೇ ಪುಟದಿಂದ)** ರಸ್ತೋಗಿ ಅವರನ್ನು ಒಳಗೊಂಡ ಪೀಠ ವಿಳಂಬದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಈ ಹಂತದಲ್ಲಿ ನಾವು ನಮ್ಮ ಅಧಿಕಾರ ವ್ಯಾಪ್ತಿ ಬಳಸಲು ಬಯಸುವುದಿಲ್ಲ. ಆದರೆ, ಸರ್ಕಾರದ ಶಿಫಾರಸ್ಸು ಎರಡು ವರ್ಷಗಳಿಂದ ಬಾಕಿ ಇರುವುದು ಸಂತೋಷಕರವಲ್ಲ ಎಂದು ಹೇಳಿದೆ.


ರಾಜೀವ್ ಗಾಂಧಿ ಹತ್ಯೆಯಲ್ಲಿ ಭಾಗಿಯಾಗಿರುವುದಕ್ಕಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಎ.ಜಿ. ಪೆರಾರಿವಾಲನ್ ಬಿಡುಗಡೆಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ನ್ಯಾಯಾಲಯ ಆ ಬಗ್ಗೆ ವಿಚಾರಣೆ ನಡೆಸುತ್ತಿದೆ.

## ಸೀಗೆ ಹುಣ್ಣಿಮೆ ಪ್ರಯುಕ್ತ ಭೂಮಿ ತಾಯಿಗೆ ಸೀಮಂತ



ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿ ಗುಡ್ಡದಲ್ಲಿರುವ ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್ ಅವರ ಜಮೀನಿನಲ್ಲಿ ಪುರಸಭೆ ಸದಸ್ಯೆ ಶ್ರೀಮತಿ ಮಂಜುಳಾ ಕುಮಾರ್ ಹಾಗೂ ಮಹಿಳೆಯರು ಸೀಗೆ ಹುಣ್ಣಿಮೆಯ ಅಂಗವಾಗಿ ಪೈರನ್ನು ಹೊತ್ತು ನಿಂತ ಭೂಮಿ ತಾಯಿಗೆ ಸೀಮಂತ ಮಾಡಿದರು.

### ಕೆ. ರೇವಣಸಿದ್ದಪ್ಪ ನಿಧನ



ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು ಗ್ರಾಮದ ವಾಸಿ, ನಿವೃತ್ತ ಸರ್ವೆ ಸೂಪರ್ ವೈಸರ್ ಕೆ ರೇವಣಸಿದ್ದಪ್ಪ (92) ಅವರು ದಿನಾಂಕ 3.11.2020 ರಂದು ಮಂಗಳವಾರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.11.2020 ರಂದು ಬುಧವಾರ ಮಧ್ಯಾಹ್ನ 12.30ಕ್ಕೆ ಸಂತೇಬೆನ್ನೂರು ಗ್ರಾಮದ ಅವರ ಜಮೀನಿನಲ್ಲಿ ನೆರವೇರಿಸಲಾಗುವುದು.

### ಕಾಂಗ್ರೆಸ್ ಮುಖಂಡ ಮುನಿಸ್ವಾಮಿ ನಿಧನ




ದಾವಣಗೆರೆ ಕೆಟಿಜೆ ನಗರದ 12ನೇ ಕ್ರಾಸ್ ವಾಸಿ, ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಕೇರಂ ಗಣೇಶ್ ಅವರ ಸಹೋದರ ಮುನಿಸ್ವಾಮಿ (58) ಅವರು, ದಿನಾಂಕ 3.11.2020ರ ಮಂಗಳವಾರ ಬೆಳಿಗ್ಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.11.2020ರ ಬುಧವಾರ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

### ಮಾಯಕೊಂಡದ ಸಿ.ಎಂ. ರುದ್ರಪ್ಪ ನಿಧನ



ದಾವಣಗೆರೆ ತಾ॥ ಮಾಯಕೊಂಡ ವಾಸಿ, ಕುರುಬ ಸಮಾಜದ ಮುಖಂಡ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಹಾಗೂ ಕುಸ್ತಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸಿ.ಎಂ.ರುದ್ರಪ್ಪ (62) ಅವರು ದಿನಾಂಕ 3.11.2020ರ ಮಂಗಳವಾರ ನಿಧನರಾದರು. ಪತ್ನಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್. ಮಾದಪ್ಪ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.11.2020ರ ಬುಧವಾರ ಮಧ್ಯಾಹ್ನ 12ಕ್ಕೆ ಮಾಯಕೊಂಡದಲ್ಲಿ ನೆರವೇರಲಿದೆ.

### ಮಠದ ಓಂಕಾರಯ್ಯ ನಿಧನ



ಹೊನ್ನಾಳಿ ತಾ. ಮುಕ್ತೇನಹಳ್ಳಿ ಗ್ರಾಮದ, ಹಾಲಿ ದಾವಣಗೆರೆ ಜಯನಗರ ನಿವಾಸಿ, ಮಠದ ಓಂಕಾರಯ್ಯ (78) ಅವರು ದಿನಾಂಕ 3.11.2020ರ ಮಂಗಳವಾರ ರಾತ್ರಿ 11.30 ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.11.2020ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಮುಕ್ತೇನಹಳ್ಳಿ ಗ್ರಾಮದ ಅವರ ಸ್ವಂತ ತೋಟದಲ್ಲಿ ನೆರವೇರಲಿದೆ.

# ರಾಮ್‌ರಾವ್ ಶ್ರೀ ಮಾರ್ಗದರ್ಶನ ದಾರಿದೀಪ

## ಕೊಮಾರನಹಳ್ಳಿ : ಶ್ರದ್ಧಾಂಜಲಿ ಸಭೆಯಲ್ಲಿ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ



ಮಲೇಬೆನ್ನೂರು, ನ.3- ಮಹಾರಾಷ್ಟ್ರದಲ್ಲಿ ದೈವಾಧೀನರಾದ ಬಂಜಾರ ಸಮುದಾಯದ ನಡೆದಾಡುವ ದೇವರು, ಮಹಾನ್ ತಪಸ್ವಿ ಎಂದೇ ಬಿರುದಾಂಕಿತರಾಗಿದ್ದ ಡಾ. ಶ್ರೀ ರಾಮ್‌ರಾವ್ ಮಹಾರಾಜ್ ಅವರಿಗೆ ಕೊಮಾರನಹಳ್ಳಿಯಲ್ಲಿ ನಿನ್ನೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕೊಮಾರನಹಳ್ಳಿ ಗ್ರಾಮದ ತಾಂಡಾದಲ್ಲಿರುವ ಶ್ರೀ ಸೇವಾಲಾಲ್ ಮರಿಯಮ್ಮ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಶ್ರೀ ರಾಮ್‌ರಾವ್ ಮಹಾರಾಜ್ ಅವರ ಬೃಹತ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಶ್ರದ್ಧಾಂಜಲಿ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿದ್ದ ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಮಾತನಾಡಿ, ಅಖಿಲ ಭಾರತ ಬಂಜಾರ ಸಮುದಾಯದ ಪಾಲಿಗೆ ಆರಾಧ್ಯ ದೇವರಾಗಿದ್ದ ರಾಮ್‌ರಾವ್ ಮಹಾರಾಜ್ ಅವರು ನಮ್ಮನ್ನಗಲಿರಬಹುದು, ಆದರೆ, ಅವರ ಆದರ್ಶಗಳು, ಮಾರ್ಗದರ್ಶನ ನಮಗೆ ದಾರಿದೀಪವಾಗಿವೆ ಎಂದರು.

ಯಾವುದೇ ಸಮಾಜ ಗುರಿ ಮುಟ್ಟಬೇಕಾದರೆ ಗುರು ಮುಖ್ಯ. ನಮ್ಮ ಸಮಾಜ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಪ್ರಗತಿ ಸಾಧಿಸಲು ರಾಮ್‌ರಾವ್ ಮಹಾರಾಜ್ ಅವರ ಹೋರಾಟ, ಶ್ರಮ ಕಾರಣವಾಗಿದೆ. ಅವರು ತಪಸ್ಸಿನಿಂದ ಅಗಾಧ ಶಕ್ತಿ ಪಡೆದುಕೊಂಡಿದ್ದರು. ಹಾಗಾಗಿ ಅವರು ಊಟ ಮಾಡದೆ ಹಾಲು, ಹಣ್ಣು ಸೇವಿಸಿ ಭಕ್ತರ ಕಲ್ಯಾಣಕ್ಕಾಗಿ ದೇಶ ಸಂಚಾರ ಮಾಡಿದ್ದರು ಎಂದು ಸ್ಮರಿಸಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ರಾಮ್‌ರಾವ್ ಮಹಾರಾಜ್ ಅವರು ಇಡೀ ಮಾನವ ಕುಲಕ್ಕೆ ಲೇಸನ್ನು ಬಯಸಿದ್ದರು. ಅವರ ಅಗಲಿಕೆ ಬಂಜಾರ ಸಮುದಾಯಕ್ಕೆ ಅಷ್ಟೇ ಅಲ್ಲ ಅವರ ಬಗ್ಗೆ ತಿಳಿದಿರುವ ಎಲ್ಲಾ ಜನರಿಗೂ ದುಃಖ ತಂದಿದೆ. ಅವರು ಈ ಹಿಂದೆ 2 ಬಾರಿ ಕೊಮಾರನಹಳ್ಳಿಯ ಈ ತಾಂಡಾಕ್ಕೆ ಭೇಟಿ ನೀಡಿದ್ದರು ಎಂಬ ವಿಷಯ ತಿಳಿದು ಸಂತೋಷವಾಯಿತು ಎಂದು ಅವರು ಹೇಳಿದರು.

ಎಪಿಎಂಸಿ ನಿರ್ದೇಶಕ ಜಿ. ಮಂಜುನಾಥ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಕರ್ನಾಟಕ ಬಂಜಾರ ರಕ್ಷಣಾ ವೇದಿಕೆಯ ಅರುಣ್‌ಕುಮಾರ್, ಶಿವಣ್ಣ, ಬಾಲಾಜಿ ಮಾತನಾಡಿದರು.

ಗ್ರಾಪಂ. ಮಾಜಿ ಅಧ್ಯಕ್ಷರಾದ ದಾನಪ್ಪ ಹನುಮಂತಪ್ಪ, ಎಸ್.ಎಂ. ಮಂಜುನಾಥ್, ಎನ್.ಪಿ. ಪರಮೇಶ್ವರನಾಯ್ಕ್, ಪುರಸಭೆ ಸದಸ್ಯರಾದ ದಾದಾವಲಿ, ಎ. ಆರೀಫ್ ಅಲಿ, ತಾಂಡಾದ ಮುಖಂಡರಾದ ಸೇವಾನಾಯ್ಕ, ಜಗದೀಶನಾಯ್ಕ, ಬಾಬುನಾಯ್ಕ, ಹನುಮಂತನಾಯ್ಕ, ನಾಗನಾಯ್ಕ, ಗ್ರಾ.ಪಂ. ಮಾಜಿ ಸದಸ್ಯೆ ಕಮಲಬಾಯಿ, ಎಎಸ್‌ಐ ಬಸವರಾಜಪ್ಪ, ನವೀನ್ ಪಟೇಲ್, ಅರುಣ, ಮಡಿವಾಳರ ಬಸವರಾಜ್ ಮತ್ತಿತರರು ಭಾಗವಹಿಸಿದ್ದರು.

# ರಾಣೇಬೆನ್ನೂರಿನಲ್ಲಿ ಕೋಳಿವಾಡ ಅವರ 77ನೇ ಹುಟ್ಟುಹಬ್ಬ



ರಾಣೇಬೆನ್ನೂರು, ನ.3- ಅಭಿಮಾನಿಗಳ ಪ್ರೀತಿಯನ್ನು ತಿರಸ್ಕರಿಸಲಾಗದೆ ನನ್ನ 77 ನೇ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಬಿ.ಕೋಳಿವಾಡ ಹೇಳಿದರು.

ನಗರದ ತಮ್ಮ ಗೃಹ ಕಚೇರಿಯಲ್ಲಿ ತಮ್ಮ ಹುಟ್ಟು ಹಬ್ಬವನ್ನು ಸರಳವಾಗಿ ದೀಪ ಬೆಳಗಿಸುವ ಮೂಲಕ ಆಚರಿಸಿಕೊಂಡು ಮಾತನಾಡಿದ ಅವರು, ಕೊರೊನಾ ಸೋಂಕು ಹರಡುವ ಹಿನ್ನೆಲೆಯಲ್ಲಿ ಕೋವಿಡ್-19 ರ ನಿಯಮಾನುಸಾರ ಹುಟ್ಟುಹಬ್ಬವನ್ನು ಆಚರಿಸಲು ಅಭಿಮಾನಿಗಳಿಗೆ ತಿಳಿಸಿದ್ದೆ. ಅದರಂತೆ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ತೆರಳಿ ಸ್ವಾಮಿಗೆ ಪೂಜೆ ಸಲ್ಲಿಸುವ ಮೂಲಕ ರಾಜ್ಯ ಕೊರೊನಾ ಮುಕ್ತವಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿರುವೆ ಎಂದರು.

ಅಭಿಮಾನಿಗಳು ಕೋವಿಡ್-19 ರ ನಿಯಮಾ ನುಸಾರ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಶಾರೀರಿಕ ಅಂತರ ಕಾಪಾಡಿ ಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಯಾವುದೇ ಕಾರಣಕ್ಕೂ ಮಾಲೆ, ಶಾಲು, ಉಡುಗೊರೆ ತರಬಾರದು. ಇಂತಹ ಪರಿಸ್ಥಿತಿ ಯಲ್ಲಿ ನಿಮ್ಮ ಪ್ರೀತಿಯಷ್ಟೇ ಸಾಕು ಎಂದು ಅಭಿಮಾನಿಗಳಲ್ಲಿ ಮನವಿ ಮಾಡಿಕೊಂಡರು.

ಕೆಪಿಸಿಸಿ ಸದಸ್ಯ ಬಸನಗೌಡ ಮರದ್, ನಗರಸಭಾ ಸದಸ್ಯ ಪುಟ್ಟಪ್ಪ ಮರಿಯಮ್ಮನವರ್, ಜಿ.ಪಂ ಮಾಜಿ ಸದಸ್ಯ ಕೃಷ್ಣಪ್ಪ ಕಂಬಳಿ, ಶೇರುಖಾನ್ ಕಾಬೂಲಿ, ನಾಗರಾಜ್ ಮಾಕನೂರ್, ಸುರೇಶ್ ಜಾಡಮಾಲಿ, ರಮೇಶ್ ಬಿಸಲಳ್ಳಿ, ಕೆ.ಡಿ.ಸಾವುಕಾರ, ಚಂಪಾ ಬಿಸಲಳ್ಳಿ, ಭಾರತಿ ಸುರಹೊನ್ನಿ, ಜಯಶ್ರೀ ಪಸೆ ಸೇರಿದಂತೆ ಅಭಿಮಾನಿಗಳು ಇದ್ದರು

# ಮಲ್ಲಪ್ಪನವರ ಆದರ್ಶ, ತತ್ವಗಳು ಸಮಾಜಕ್ಕೆ ದಾರಿದೀಪ

## ಶ್ರದ್ಧಾಂಜಲಿ ಸಮಾರಂಭದಲ್ಲಿ ಕಾಗಿನೆಲೆ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಆಶೀರ್ವಚನ



ದಾವಣಗೆರೆ, ನ. 3- ಕೆ. ಮಲ್ಲಪ್ಪನವರ ಆದರ್ಶ ತತ್ವಗಳು ಸಮಾಜಕ್ಕೆ ದಾರಿದೀಪವಾಗ ಬೇಕಿದೆ. ಸಮಾಜ ಅವರ ಹಾದಿಯಲ್ಲಿ ನಡೆದಾಗ ಮಾತ್ರ ಅವರ ಆತ್ಮಕ್ಕೆ ಶಾಂತಿ ಸಿಗಲಿದೆ ಎಂದು ಕಾಗಿನೆಲೆ ಕನಕ ಗುರು ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಬೀರೇಶ್ವರ ಭವನದಲ್ಲಿ ಮಾಜಿ ಶಾಸಕ ಮಲ್ಲಪ್ಪನವರ ಶ್ರದ್ಧಾಂಜಲಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಜಿಲ್ಲೆ ಹಾಗೂ ಸಮಾಜಕ್ಕೆ ಕೆ.ಮಲ್ಲಪ್ಪ ಒಂದು ಶಕ್ತಿಯಾಗಿದ್ದರು. ಅವರ ಅಗಲಿಕೆಯಿಂದ ಸಮಾಜ ದೊಡ್ಡ ಶಕ್ತಿ ಕಳೆದುಕೊಂಡಿದೆ ಎಂದರು.

ನಾವು ಇಂದು ಸಮಾಜಕ್ಕೆ ಸ್ವಾಮೀಜಿಯಾಗಲು ಮಲ್ಲಪ್ಪನವರೇ ಕಾರಣ. 1991ರಲ್ಲಿ ನಮ್ಮ ತಂದೆಯವರಿಗೆ ಹೇಳಿ ದತ್ತು ಪಡೆದರು. ಅಂದು ಮಲ್ಲಪ್ಪನವರು ನಮ್ಮ ತಂದೆಗೆ ಬರೆದ ಪತ್ರದಿಂದ ನಾವು ಜಗದ್ಗುರುಗಳಾಗಲು ಕಾರಣವಾಗಿದೆ ಎಂದು ನೆನಪಿಸಿಕೊಂಡರು.

ಕರ್ನಾಟಕ ಪ್ರದೇಶ ಕುರುಬರ ಸಂಘ ಹಾಗೂ ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಗೆ ಮಲ್ಲಪ್ಪನವರ ಶ್ರಮ ಕೂಡ ಮರೆಯುವಂತದ್ದಲ್ಲ ಎಂದ ಶ್ರೀಗಳು, ಹರಿಹರ ತಾಲ್ಲೂಕಿನ ಡಾ. ಕೆ.ಪಿ. ಸಿದ್ದಬಸಪ್ಪ, ಡಾ|| ವೈ ನಾಗಪ್ಪ ಅವರುಗಳ ಅಗಲಿಕೆಯಿಂದ ಸಮಾಜಕ್ಕೆ ಅನಾಥ ಪ್ರಜ್ಞೆ ಕಾಡುವಂತಾಗಿದೆ ಎಂದರು.

ಚಂದ್ರಗಿರಿ ಅಥಣಿ ಮಠದ ಶ್ರೀ ಮುರಳೀಧರ ಸ್ವಾಮೀಜಿ ಮಾತನಾಡಿ, ಕೆ. ಮಲ್ಲಪ್ಪ ಜನ ಸೇವಕರಾಗಿ ಮುಕ್ತಿ ಹೊಂದಿದ್ದಾರೆ. ಜನ ಸೇವೆ ಸಮಾಜ ಸೇವೆ ದೇವರ ಸೇವೆಯೆಂದು ತಿಳಿದು ಕಾಯಕಯೋಗಿ ಆಗಿದ್ದರು ಎಂದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ, ಮಲ್ಲಪ್ಪನವರು ಸರಳ ಸಜ್ಜನಿಕೆಯ ವ್ಯಕ್ತಿ ಎಂದರು.

ನಗರ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಬಳ್ಳಾರಿ ಷಣ್ಮುಖಪ್ಪ, ದೂಡ ಮಾಜಿ ಅಧ್ಯಕ್ಷ ಟಿ. ದಾಸಕರಿಯಪ್ಪ, ನಗರ ಕುರುಬ ಸಂಘದ ಉಪಾಧ್ಯಕ್ಷ ಗೌಡ್ರು ಚನ್ನಬಸಪ್ಪ, ವಾರ್ತಾ ಇಲಾಖೆಯ ನಿವೃತ್ತ ವಾರ್ತಾಧಿಕಾರಿ ಎಂ. ಕರಿಯಪ್ಪ ಮಾತನಾಡಿದರು.

ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಕೆಂಗೋ ಹನುಮಂತಪ್ಪ, ಮಾಜಿ ಮೇಯರ್ ಹೆಚ್.ಬಿ. ಗೋಣೆಪ್ಪ, ಜೆ.ಕೆ. ಕೊಟ್ರಬಸಪ್ಪ, ಕೆ ಮಲ್ಲಪ್ಪನವರ ಪುತ್ರ ಕೆ. ವಿವೇಕ್, ಅಳಿಯ ಕೆ. ಓಂಕಾರಪ್ಪ, ಜಿಪಂ ಮಾಜಿ ಅಧ್ಯಕ್ಷ ದ್ಯಾಮಣ್ಣ, ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಕುಂಬಳೂರು ವಿರೂಪಾಕ್ಷಪ್ಪ, ಕಾರ್ಯದರ್ಶಿ ಮಳಲ್ಕೆರೆ ಎಸ್. ಹೆಚ್. ಪ್ರಕಾಶ್, ಪಾಲಿಕೆ ಸದಸ್ಯರುಗಳಾದ ಜೆ. ಎನ್. ಶ್ರೀನಿವಾಸ್, ನಾಗರಾಜ್, ದೇವರಮನೆ ಶಿವಕುಮಾರ್, ಇಟ್ಟಿಗುಡಿ ಮಂಜುನಾಥ್, ಸಮಾಜದ ಮುಖಂಡರುಗಳಾದ ದಿನೇಶ್ ಕೆ. ಶೆಟ್ಟಿ, ಕುಣೆಬೆಳಕೆರೆ ದೇವೇಂದ್ರಪ್ಪ, ಬಿ. ದಿಳ್ಳೆಪ್ಪ, ಹೆಚ್.ಜಿ. ಸಂಗಪ್ಪ, ಬಿ. ಲಿಂಗರಾಜು, ಸಾಯಿನಾಥ, ತಿರುಕಪ್ಪ, ರೇವಣ್ಣ, ಮಾಜಿ ಮೇಯರ್ ಎನ್.ಎನ್. ಗುರುನಾಥ್ ಇದ್ದರು.

ಚಂದು, ಪ್ರಿಯ ಪ್ರಾರ್ಥಿಸಿದರು. ಭಾನುವಳ್ಳಿ ಚಂದ್ರಪ್ಪ ನಿರೂಪಿಸಿದರು. ಪ್ರಕಾಶ್ ಸ್ವಾಗತಿಸಿದರು.

# ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವೆ

## ರಾಣೇಬೆನ್ನೂರು ನಗರಸಭೆ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ



ರಾಣೇಬೆನ್ನೂರು, ನ.3- ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೆರವಿನಿಂದ ಪ್ರಾರಂಭವಾಗಿರುವ ಅಮೃತ ಯೋಜನೆಯ ಕೆಲಸದ ಗುಣಮಟ್ಟದ ಬಗ್ಗೆ ಕಾಳಜಿ ವಹಿಸಿ ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದಾಗಿ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಹೇಳಿದರು. ಅವರು ಚುನಾವಣೆ ನಂತರ ತಮ್ಮ ಪಕ್ಷದ ಮುಖಂಡರ ಜೊತೆಗೂಡಿ ಪತ್ರಿಕಾಗೋಷ್ಠಿ ನಡೆಸಿದರು.

ಜನತೆಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಎಲ್ಲ ಸದಸ್ಯರ ಜೊತೆ ಚರ್ಚಿಸಿ, ಎಲ್ಲ ವಾರ್ಡ್‌ಗಳಲ್ಲೂ ಸಮನಾಗಿ ಕೆಲಸಗಳನ್ನು ತೆಗೆದುಕೊಳ್ಳುವುದಾಗಿ ಅಧ್ಯಕ್ಷರು ಹೇಳಿದರು. ನಗರ ಅಭಿವೃದ್ಧಿಗೆ ಸಂಸದರ ಸಹಾಯ, ಸಹಕಾರದೊಂದಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಎಲ್ಲಾ ಯೋಜನೆಗಳನ್ನು ತರುವುದಾಗಿ ಶಾಸಕ ಅರುಣಕುಮಾರ ಹೇಳಿದರು. ಸಂಸದ ಶಿವಕುಮಾರ ಉದಾಸಿ, ಶಾಸಕ ಅರುಣಕುಮಾರ, ವಿಧಾನ ಪರಿಷತ್ ಸದಸ್ಯ ಶಂಕರ್ ಹಾಗೂ ಬಿಜೆಪಿ ಸದಸ್ಯರು ಹಾಗೂ ಮುಖಂಡರು ಪಾಲ್ಗೊಂಡಿದ್ದರು.

# ಅತಿಯಾದ ವಿದ್ಯಾರ್ಹತೆಯಿಂದ ಅನರ್ಹತೆ!

## ಪದವೀಧರನಾದ ಕಾರಣಕ್ಕೆ ಜವಾನ ಹುದ್ದೆಯಿಂದ ಕಿತ್ತು ಹಾಕಿದ್ದನ್ನು ಎತ್ತಿ ಹಿಡಿದ ಸುಪ್ರೀಂ

ನವದೆಹಲಿ, ನ. 3 – ಅತಿಯಾದ ವಿದ್ಯಾರ್ಹತೆಯೂ ಅನರ್ಹತೆಗೆ ಕಾರಣ ಎಂಬ ವಾದವನ್ನು ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್, ಬ್ಯಾಂಕ್ ಜವಾನರೊಬ್ಬರು ಪದವೀಧರನಾದ ಕಾರಣಕ್ಕೆ ಕೆಲಸದಿಂದ ಕಿತ್ತು ಹಾಕುವ ಪಂಜಾಬ್ ನ್ಯಾಷನಲ್ ಬ್ಯಾಂಕ್ ಆದೇಶಕ್ಕೆ ಅಂಗೀಕಾರ ನೀಡಿದೆ.

ಬ್ಯಾಂಕ್ ಕೆಲಸಕ್ಕೆ ತೆಗೆದುಕೊಳ್ಳುವಾಗ ಅರ್ಜಿದಾರರು ಪದವೀಧರರಾಗಿರಬಾರದು ಎಂಬ ಷರತ್ತು ಹಾಕಿತ್ತು. ಹೀಗಾಗಿ ಪದವೀಧರನಾಗಿದ್ದನ್ನು ಮುಚ್ಚಿಟ್ಟಿರುವುದು ತಪ್ಪಾಗಿದೆ ಎಂದು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್, ಆರ್. ಸುಭಾಷ್ ರೆಡ್ಡಿ ಹಾಗೂ ಎಂ.ಆರ್. ಷಾ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಅಮಿತ್ ಕುಮಾರ್ ದಾಸ್ ಅವರು ಈ ಷರತ್ತನ್ನು ಪ್ರಶ್ನಿಸುವ ಬದಲು, ತಮ್ಮ ವಿದ್ಯಾರ್ಹತೆ ಮುಚ್ಚಿಟ್ಟು ಕೆಲಕ್ಕೆ ಅರ್ಜಿ ದಾಖಲಿಸಿದ್ದಾರೆ. ಇದು ಉದ್ದೇಶಪೂರ್ವಕವಾಗಿ ವಿಷಯ ಮುಚ್ಚಿಟ್ಟಂತೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇದಕ್ಕೂ ಮುಂಚೆ ಒರಿಸ್ಸಾ ಹೈಕೋರ್ಟ್ ಬ್ಯಾಂಕ್ ಕ್ರಮವನ್ನು ತಳ್ಳಿ ಹಾಕಿದ್ದು, ಜವಾನ ಕೆಲಸ ಮಾಡಲು ಅವಕಾಶ ಕೊಡಬೇಕು ಎಂದು ತಿಳಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಬ್ಯಾಂಕ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.

ತಪ್ಪು ಮಾಹಿತಿ ನೀಡುವುದು ಉದ್ಯೋಗಿಯ ಚಾರಿತ್ರ್ಯದ ಮೇಲೆ ಪ್ರಭಾವ ಬೀರುತ್ತದೆ. ಉದ್ಯೋಗಿ ತನ್ನ ಅರ್ಹತೆ ಬಗ್ಗೆ ಸರಿಯಾದ ಮಾಹಿತಿ ನೀಡಬೇಕು. ಅರ್ಜಿದಾರರು ಆ ರೀತಿ ನಡೆದುಕೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ದಾಸ್ ವರ್ತನೆಯಿಂದಾಗಿ ಇನ್ನೊಬ್ಬ ಅರ್ಹ ಅಭ್ಯರ್ಥಿ ಉದ್ಯೋಗಾವಕಾಶ ಕಳೆದುಕೊಂಡಂತಾಗಿದೆ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಹೆಚ್ಚಿನ ವಿದ್ಯಾರ್ಹತೆ ಹೊಂದಿರುವುದು ಉದ್ಯೋಗಕ್ಕೆ ಅಡ್ಡಿಯಾಗದು ಎಂದು ಸುಪ್ರೀಂ ಕೋರ್ಟ್ 2000ದಲ್ಲಿ ತೀರ್ಪು ನೀಡಿತ್ತು. ಅದನ್ನು ಉಲ್ಲೇಖಿಸಿ ದಾಸ್ ಅರ್ಜಿ ಸಲ್ಲಿಸಿದ್ದರು.

ಜನವರಿ 1, 2016ರಂದು ಜವಾನ ಹುದ್ದೆಗಾಗಿ ಜಾಹೀರಾತು ಪ್ರಕಟಿಸಿದ್ದ ಬ್ಯಾಂಕ್, ಅರ್ಜಿ ಸಲ್ಲಿಸುವವರು 12ನೇ ತರಗತಿ ಪಾಸ್ ಆಗಿರಬೇಕು. ಇಂಗ್ಲಿಷ್ ಬರೆಯುವುದು ಹಾಗೂ ಓದುವುದು ತಿಳಿದಿರಬೇಕು. ಆದರೆ, ಪದವೀಧರ ರಾಗಿರಬಾರದು ಎಂದು ತಿಳಿಸಲಾಗಿತ್ತು. ಆಗ ಅರ್ಜಿ ಸಲ್ಲಿಸಿದ್ದ ದಾಸ್, ತಾವು 12ನೇ ತರಗತಿ ಉತ್ತೀರ್ಣರಾಗಿರುವುದಾಗಿ ಹೇಳಿದ್ದರು. ಆದರೆ, ಪದವೀಧರನಾಗಿರುವುದನ್ನು ಮುಚ್ಚಿಟ್ಟಿದ್ದರು.


# ರೈಲ್ವೆ ಮುಷ್ಕರದಿಂದ ಪಂಜಾಬ್‌ನಲ್ಲಿ ವಿದ್ಯುತ್ ಕಡಿತ

ಚಂಡೀಘಡ, ನ. 3 – ಪಂಜಾಬ್‌ನ ಮೂರು ಖಾಸಗಿ ವಲಯದ ವಿದ್ಯುತ್ ಉತ್ಪಾದನಾ ಘಟಕಗಳು ಮುಚ್ಚಿವೆ ಹಾಗೂ ಇನ್ನೆರಡು ಘಟಕಗಳಲ್ಲಿ ಕಲ್ಲಿದ್ದಲು ಸಂಗ್ರಹ ಬಹುತೇಕ ಮುಗಿಯುವ ಹಂತದಲ್ಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ವಿದ್ಯುತ್ ಕಡಿತ ಮಾಡುವುದಾಗಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟಿಸುತ್ತಿರುವ ರೈತರು ರೈಲು ತಡೆ ನಡೆಸಿದ್ದಾರೆ. ಇದರಿಂದಾಗಿ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಕಲ್ಲಿದ್ದಲು ಪೂರೈಸುವ ಸಮಸ್ಯೆ ತೀವ್ರವಾಗಿ ಉಲ್ಬಣಿಸಿದೆ.

ಮಂಗಳವಾರ ಸಂಜೆಯಿಂದಲೇ ಪ್ರತಿದಿನ ಮೂರು ಗಂಟೆ ವಿದ್ಯುತ್ ಕಡಿತ ಮಾಡಲಾಗು ವುದು. ನಂತರದಲ್ಲಿ ವಿದ್ಯುತ್ ಕಡಿತ ನಾಲ್ಕರಿಂದ ಐದು ಗಂಟೆಗೆ ಹೆಚ್ಚಾಗಲಿದೆ. ವಿದ್ಯುತ್ ಪರಿಸ್ಥಿತಿ ಕಠಿಣವಾಗಿದೆ ಎಂದು ರಾಜ್ಯ ವಿದ್ಯುತ್ ನಿಗಮದ ಅಧ್ಯಕ್ಷ ಎ.ವಿ. ಪ್ರಸಾದ್ ತಿಳಿಸಿದ್ದಾರೆ.

# ಹಾವನ್ನು ರಕ್ಷಿಸಿದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ



ಹರಿಹರ, ನ.3- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಮಂಗಳವಾರ ಕಾಣಿಸಿಕೊಂಡ ಹಾವನ್ನು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ತಮ್ಮ ಕೈಯ್ಯಾರೆ ಹಿಡಿದು ಬೇರೆ ಕಡೆ ಸುರಕ್ಷಿತವಾಗಿ ಬಿಡುವ ಮೂಲಕ ಮಾನವೀಯತೆ ಮೆರೆದರು. ಈ ಫೋಟೋ, ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಸ್ವಾಮೀಜಿ ಅವರ ಧೈರ್ಯ ಮತ್ತು ಮಾನವೀಯತೆ ಬಗ್ಗೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.

# ಕಡಿಮೆ ಬೆಲೆಗೆ ಧಾನ್ಯ ಖರೀದಿ : ಕ್ರಮಕ್ಕೆ ಆಗ್ರಹಿಸಿ ಹೊನ್ನಾಳಿ ರೈತರ ಪ್ರತಿಭಟನೆ

ದಾವಣಗೆರೆ, ನ.3- ರೈತರು ಬೆಳೆದ ಬೆಳೆಗಳಿಗೆ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸುವ ದಲ್ಲಾಳಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ರೈತ ಸಂಘದ ಹೊನ್ನಾಳಿ ತಾಲ್ಲೂಕು ಘಟಕದ ಪದಾಧಿಕಾರಿಗಳು ನಿನ್ನೆ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಜಮಾಯಿಸಿದ್ದ ಪ್ರತಿಭಟನಾಕಾರರು, ಆದಷ್ಟು ಬೇಗ ಸರ್ಕಾರ ಖರೀದಿ ಕೇಂದ್ರಗಳನ್ನು ತೆರೆಯುವ ಮೂಲಕ ವರ್ತಕರ ಹಾವಳಿಗೆ ಕಡಿವಾಣ ಹಾಕಬೇಕು. ಇಲ್ಲವಾದಲ್ಲಿ ದಲ್ಲಾಳಿಗಳು ಕಡಿಮೆ ಬೆಲೆಗೆ ರೈತರ ಬೆಳೆಗಳನ್ನು ಖರೀದಿಸುವ ಸಂಭವವಿದೆ ಎಂದು ಸರ್ಕಾರಕ್ಕೆ ಜಿಲ್ಲಾಡಳಿತದ ಮುಖಾಂತರ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರವು 2020-21ನೇ ಸಾಲಿನ ರೈತರು ಬೆಳೆದ ಒಟ್ಟು 25 ಬೆಳೆಗಳಿಗೆ ಬೆಂಬಲ ಬೆಲೆಯನ್ನು ಘೋಷಿಸಿರುತ್ತದೆ. ಇದರಂತೆ ಸರ್ಕಾರವು ಎಲ್ಲಾ ಮಾರುಕಟ್ಟೆಯಲ್ಲಿ ರೈತರು ಬೆಳೆದಿರುವ ಭತ್ತ, ಮೆಕ್ಕೆಜೋಳ, ಈರುಳ್ಳಿ, ರಾಗಿ, ತೊಗರಿ ಇತರೆ ಬೆಳೆಗಳನ್ನು ಖರೀದಿಸಲು ತಕ್ಷಣ ಮಾರುಕಟ್ಟೆಯಲ್ಲಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸುವುದು ಅವಶ್ಯವಿದೆ. ಇದು ವಿಳಂಬವಾದಲ್ಲಿ ಹೊರಗಿನ ದಲ್ಲಾಳಿಗಳು ರೈತರಿಂದ ಕಡಿಮೆ ಬೆಲೆಗೆ ಬೆಳೆಗಳನ್ನು ಖರೀದಿಸುವ ಸಂಭವ ಇರುವುದರಿಂದ ಕೂಡಲೇ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ಒತ್ತಾಯಿಸಿದರು.

ಕೇಂದ್ರ ಸರ್ಕಾರವು ಘೋಷಣೆ ಮಾಡಿರುವ ಬೆಂಬಲ ಬೆಲೆಗಿಂತ ಹೆಚ್ಚಿನ ಬೆಲೆಗೆ ದಲ್ಲಾಳಿಗಳು ಖರೀದಿಸದೇ ಕಡಿಮೆ ಬೆಲೆಗೆ ಬೆಳೆಗಳನ್ನು ರೈತರಿಂದ ಖರೀದಿಸಿದರೆ, ಇಂತಹ ವರ್ತಕರ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಖರೀದಿ ಕೇಂದ್ರವನ್ನು ತಕ್ಷಣ ತೆರೆಯದೇ ದಲ್ಲಾಳಿಗಳಿಗೆ ಲಾಭ ತಂದುಕೊಡಲು ಪ್ರಯತ್ನಿಸಿದರೆ ಸರ್ಕಾರದ ವಿರುದ್ಧ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಪ್ರತಿಭಟನೆಯಲ್ಲಿ ಅಧ್ಯಕ್ಷ ಕೆ.ಸಿ. ಬಸಪ್ಪ, ಡಿ.ಎಂ. ಕರಿಬಸಪ್ಪ, ಕೋಟಿ ಈರಪ್ಪ, ಹೆಚ್. ನಾಗರಾಜಪ್ಪ, ಹೆಚ್. ಆನಂದಪ್ಪ, ನೀಲಕಂಠಪ್ಪ, ಹೆಚ್.ಬಿ. ಬಸವರಾಜ ಸೇರಿದಂತೆ ಇತರರು ಭಾಗವಹಿಸಿದ್ದರು.

# ಕೊರೊನಾ ಬಗ್ಗೆ ಆಂತಕ ಬೇಡ

**ಶ್ರೀಧರ ಉಡುಪ**


ದಾವಣಗೆರೆ, ನ.3- ಕೋವಿಡ್ 19 ಸೋಂಕು ನೆಗಡಿಗೆ ಕಾರಣವಾಗುವ ಸೋಂಕಿನ ವರ್ಗಕ್ಕೆ ಸೇರಿದ್ದು, ಇದಕ್ಕೆ ಶಾಶ್ವತ ಲಸಿಕೆ ಕಂಡುಹಿಡಿಯುವುದು ಅಸಾಧ್ಯ. ಬಿಸಿ ನೀರು, ಕಷಾಯ ಕುಡಿಯುವ ಮೂಲಕ ಕೊರೊನಾ ರೋಗ ವಾಸಿ ಮಾಡಿಕೊಳ್ಳಬಹುದು ಎಂದು ಸಾಮಾಜಿಕ ಕಾರ್ಯಕರ್ತ ಡಾ.ಶ್ರೀಧರ ಉಡುಪ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇವಲ ನೂರು ರೂಪಾಯಿ ವೆಚ್ಚದಲ್ಲಿ ವಾಸಿ ಮಾಡಿಕೊಳ್ಳುವ ಕಾಯಿಲೆಗೆ ಲಕ್ಷಾಂತರ ರೂ. ಹಣ ಖರ್ಚು ಮಾಡುವ ಅಗತ್ಯವಿಲ್ಲ ಎಂದರು.

ಪೀಡಿತರಿಗೆ ಮನೆಯಲ್ಲೇ ಚಿಕಿತ್ಸೆ ನೀಡಿದರೆ ಬೇಗ ಗುಣಮುಖರಾಗುತ್ತಾರೆ. ಆಸ್ಪತ್ರೆ ವಾತಾವರಣದಲ್ಲಿ ರೋಗಿಯು ಇನ್ನಷ್ಟು ಹೆದರಲಿದ್ದು, ಇದರಿಂದ ವ್ಯಕ್ತಿಯ ರೋಗ ನಿರೋಧಕ ಶಕ್ತಿ ಕ್ಷೀಣಿಸುತ್ತದೆ. ಆತ್ಮವಿಶ್ವಾಸವಿದ್ದರೆ ಎಂತಹ ಕಾಯಿಲೆಯನ್ನಾದರೂ ಜಯಿಸಬಹುದು. ಆದ್ದರಿಂದ ಕೊರೊನಾ ಬಗ್ಗೆ ಯಾರೂ ಭಯಪಡುವ ಅಗತ್ಯವಿಲ್ಲ ಎಂದು ಅವರು ಸಲಹೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಶಿವರಾಮ್, ಆದಿತ್ಯ, ಉದಯ್ ಉಪಸ್ಥಿತರಿದ್ದರು.

# ಹರಿಹರ ಕಸಬಾ ಗ್ರಾಮದೇವತೆ ದೇವಸ್ಥಾನದ ಹುಂಡಿ ಹಣ ಎಣಿಕೆ



ಹರಿಹರ, ನ.3- ಹೊಸಭರಂಪುರ ಬಡಾವಣೆ ಶ್ರೀ ಕಸಬಾ ಗ್ರಾಮದೇವತೆ ಊರಮ್ಮ ದೇವಸ್ಥಾನದ ಹುಂಡಿಯಲ್ಲಿ 74 ಸಾವಿರ ರೂಪಾಯಿ ಸಂಗ್ರಹವಾಗಿದೆ ಎಂದು ಸಮಿತಿ ಅಧ್ಯಕ್ಷ ವೀರಣ್ಣ ಪೂಜಾರ್ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಮುಖಂಡರಾದ ಕೆ.ಬಿ. ರಾಜಶೇಖರ್, ಸುರೇಶ್ ಚಂದಾಪೂರ್, ರೇವಣಸಿದ್ದಪ್ಪ ಬೆಣ್ಣೆ, ಕೆ.ಜಿ. ಗುತ್ತಪ್ಪ, ಎಂ. ಚಿದಾನಂದ ಕಂಚಿಕೇರಿ, ಪರಮೇಶ್ವರಪ್ಪ ನೀಲಗುಂದ, ಚಂದ್ರಪ್ಪ ಮಜ್ಜಿಗಿ, ಬೆಣ್ಣೆ ಸಿದ್ದೇಶ್, ವೇದಮೂರ್ತಿ, ಈರಣ್ಣ ಹಾವನೂರು, ಅರ್ಚಕ ನಾಗರಾಜ್ ಇನ್ನಿತರರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ


ಡಿಸಿಎಂ ಫೀಡರ್ ವ್ಯಾಪ್ತಿಯ ಡಿಸಿಎಂ ಟೌನ್‌ಶಿಪ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಸಂತೆಬೆನ್ನೂರು ಸುತ್ತಮುತ್ತ ಈ ವರ್ಷ ಎರಡನೇ ಬೆಳೆ

# ಅಲಸಂದಿ ಬಂಪರ್ ಬೆಳೆ ನಿರೀಕ್ಷೆ

ಆಗಿನ್ನೂ ಅಡಿಕೆ ಬೆಳೆಯ ಸೆಳೆತ ನಮ್ಮ ರೈತರಿಗೆ ಇರಲಿಲ್ಲ. ಬೋರ್ ಹೊಂದಿದ್ದರೂ ಸಹ ಮೊದಮೊದಲು ಸಂತೆಬೆನ್ನೂರು, ಚಿಕ್ಕಜಾಜೂರು, ಹೊಳಲ್ಕೆರೆ, ಮಾಯಕೊಂಡ, ಆನಗೋಡು, ಭರಮ ಸಾಗರದ ಸುತ್ತ-ಮುತ್ತಲಲ್ಲಿ ಯಥೇಚ್ಛವಾಗಿ ಕಲ್ಲಂಗಡಿ ಬೆಳೆ (ನಾಮ್ದಾರಿ ಸೀಡ್ಸ್) ಬೆಳೆಯುತ್ತಿದ್ದರು. ಕೇವಲ 50-60 ದಿನಕ್ಕೆ ನಾಮ್ದಾರಿ ಕಲ್ಲಂಗಡಿ ಬರುವ ಕಾರಣ ಮಳೆಗಾಲ ಪ್ರಾರಂಭವಾಗುವ ಮೊದಲೇ ಒಳ್ಳೆಯ ಧಾರಣೆಗೆ ಬೇರೆ ಬೇರೆ ರಾಜ್ಯಗಳಿಗೆ ರವಾನಿಸಿ, ಮಾರಾಟ ಮಾಡಿ ಮುಂದಿನ ಮಳೆಗಾಲದ ಬೆಳೆಗೆ ಬಂಡವಾಳ ಕ್ರೋಡೀಕರಿಸಿಟ್ಟುಕೊಳ್ಳು ತ್ತಿದ್ದರು. ಇತ್ತೀಚಿಗೆ ಬೋರ್ ನೀರು ಬಿದ್ದ ಮಾರನೇ ದಿನವೇ ಅಡಿಕೆ ಕಟ್ಟುವ ಕಾರ್ಯಕ್ಕೆ ಮುಹೂರ್ತ ನಿಗದಿ ಮಾಡಿ ಅಡಿಕೆ ಕಟ್ಟಿ ನೀರು ಬಿಡುವ ಹೊಸ ಸಂಪ್ರದಾಯ ಶಾಶ್ವತವಾಗಿ ಪ್ರಾರಂಭಗೊಂಡ ಕಾರಣ ರೈತರ ಹಣದ ಸೊಂಟದ ಚೀಲಕ್ಕೆ ಬರೆ ಎಳೆದಂತಾಗಿದ್ದು ಸತ್ಯ. ಕಲ್ಲಂಗಡಿ, ಎಳ್ಳು, ಹೆಸರು, ಉದ್ದು ಇನ್ನಿತರೆ ಮುಂಗಾರು ಬೆಳೆಗಳಿಂದ ವಿಮುಖನಾದ ರೈತ ಅದರಂತೆ ಮುಂಗಾರೂ ಸಹ ಬಹಳ ವರ್ಷಗಳಿಂದ ಬಾರದೇ ಮರೆತು ಹೋದಂದಂತಾಗಿದ್ದೂ ಸತ್ಯ. ಮಧ್ಯಮ ಬೆಳೆಗಳಾದ ಹತ್ತಿ, ಜೋಳ, ಮೆಕ್ಕೇ ಜೋಳ ಬೆಳೆ ತೆಗೆದು ಪುನಃ ಹಿಂಗಾರು ಬಂತೆಂದರೆ ಬಿಳಿ ಜೋಳ, ಸೂರ್ಯಕಾಂತಿ, ಅಲಸಂದಿ ಪುನಃ ಕಲ್ಲಂಗಡಿ ಬಿತ್ತಿ ಬೆಳೆ ಬೆಳೆಯುತ್ತಿದ್ದರು.ಆದರೆ ಇತ್ತೀಚಿನ ವರ್ಷಗಳಲ್ಲಿ ಕಡಿಮೆ ಮಳೆ ಆಗುತ್ತಿರುವ ಕಾರಣ ಕಲ್ಲಂಗಡಿ, ತರಕಾರಿ, ಹೆಸರು, ಉದ್ದು, ಅಲಸಂದಿ ಇನ್ನಿತರೆ ಅಲ್ಪಾವಧಿ ಬೆಳೆಗಳಿಂದ ರೈತ ವಿಮುಖರಾಗುತ್ತಿರುವುದು ಸಹಜವಾಗಿದೆ. ವಾರ್ಷಿಕ ಮಳೆಯು ಕಮ್ಮಿ ಆಗುತ್ತಿರುವ ಕಾರಣ ಒಂದು ಬೆಳೆ ಬೆಳೆಯಲು ಸಹ ರೈತ ಕಷ್ಟಪಡುವ ಸ್ಥಿತಿ ಒದಗಿ ಬಂದಿದೆ.

ಈ ವರ್ಷ ಬೇಗನೆ ಮುಂಗಾರು ಬಾರದಿದ್ದರೂ ಸ್ವಲ್ಪ ತಡವಾಗಿ ಬಂದರೂ ಸಹ ಒಳ್ಳೆಯ ಮಳೆಯಾಗಿ ಪೂರಕ ಬೆಳೆಗೆ ಸಹಕಾರಿಯಾಗಿದೆ. ಮೆಕ್ಕೆಜೋಳ ಬೆಳೆಯಲ್ಲಿ "ಪಾಪ್ ಕಾರ್ನ್ "ಮೆಕ್ಕೆಜೋಳ ಬೇಗನೆ ಬರುವ ಕಾರಣ ಒಂದು ತಿಂಗಳ ಹಿಂದೆಯೇ ಪಾಪ್‌ಕಾರ್ನ್ ತೆನೆಗಳನ್ನು ಮುರಿದು ಈಗಾಗಲೇ ಒಕ್ಕಣಿಕೆ ಮಾಡಿ ಕೆಲವರು ಮಾರಾಟ ಮಾಡಿದ್ದಾರೆ. ಇನ್ನು ಹಲವಾರು ರೈತರು ಒಳ್ಳೆಯ ಧಾರಣೆ ಬರಲಿ ಎಂಬ ಕಾರಣಕ್ಕೆ ಚೀಲಗಳನ್ನು ತುಂಬಿ ಸುರಕ್ಷಿತವಾಗಿ ಶೇಖರಣೆ ಮಾಡಿದ್ದಾರೆ. ಪಾಪ್ ಕಾರ್ನ್ ಬೆಳೆದು ತೆನೆ ಮುರಿದ ರೈತರು ತಮ್ಮ ಹೊಲಗಳಿಗೆ ಈಗಾಗಲೇ ಹಲಸಂದಿ ಬಿತ್ತಿದ್ದಾರೆ. 80-90 ದಿನಕ್ಕೆ ಬರುವ ಬೆಳೆಯಾಗಿದ್ದು ಒಂದು ಎಕರೆಗೆ 10 ಕೆ.ಜಿ. ಬೀಜದೊಂದಿಗೆ 30-40 ಕೆ.ಜಿ. ರಾಸಾಯನಿಕ ಗೊಬ್ಬರ ಬೆರೆಸಿ ಹೊಲದ ತುಂಬೆಲ್ಲಾ ಉಗ್ಗಿ ಹೊಲ ಹಸನುಗೊಳಿಸುತ್ತಾರೆ. ಹವಾಗುಣದ ವೈಪರೀತ್ಯದಿಂದ ಕೀಟ ಅಥವಾ ರೋಗ ಬಾಧಿಸಿದರೆ ಕೀಟನಾಶಕ ಮತ್ತು ರೋಗನಾಶಕ ಒಂದೊಮ್ಮೆ ಸಿಂಪಡಿಸಿದರೆ ಸಾಕು ಅಲಸಂದಿ ಕಾಯಿ ಮುರಿಯುವ ಹಂತಕ್ಕೆ ಬರುತ್ತವೆ. ಕೆಲ ರೈತರು ಹಸೀ ಕಾಯಿ ಕಿತ್ತು ಮಾರುಕಟ್ಟೆಗಳಲ್ಲಿ, ಸಂತೆಗಳಲ್ಲಿ ಮಾರಾಟ ಮಾಡುತ್ತಾರೆ. ಆದರೆ ಅತಿ ಹೆಚ್ಚು ರೈತರು ಒಣಗಿಸಿ ಒಕ್ಕಣಿಕೆ ಮಾಡಿ ಮಾರುವುದು ಸಾಮಾನ್ಯ. ಎಕರೆಗೆ 5-6 ಕ್ವಿಂಟಾಲ್ ಬರುವ ಬೆಳೆ ಇದಾಗಿದ್ದು, ಕಡಿಮೆ ಖರ್ಚಿನಲ್ಲಿ ಮಳೆ ಇಲ್ಲದಿದ್ದರೂ ಬಿತ್ತುವಾಗ ಭೂಮಿ ಹಸಿ ಇದ್ದು ನಂತರ ಜಿಬುರು ಮಳೆಗೆ ಬರುವ ಬೆಳೆ ಇದಾಗಿದ್ದು ಮಾರುಕಟ್ಟೆಯಲ್ಲಿ 4000-4600/ರೂ. ವರೆಗೆ ಕ್ವಿಂಟಾಲ್‌ಗೆ ಧಾರಣೆ ಸಿಗುತ್ತದೆ ಎಂದು ಗ್ರಾಮದ ಓಬಳಪ್ಪ, ಬಸವರಾಜಪ್ಪ, ಕಲ್ಲೇಶಪ್ಪ ಬಹಳ ವರ್ಷಗಳ ನಂತರ ನಮಗೆ ಒಂದು ವರ್ಷದಲ್ಲಿ ಎರಡು ಬೆಳೆ ತೆಗೆಯುವ ಅವಕಾಶ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಇನ್ನೂ ಮೆಕ್ಕೆಜೋಳ ಮುರಿಯುವ ರೈತರು ಬಹಳವಿದ್ದು ಅದರ ಒಕ್ಕಣಿಕೆಯ ನಂತರ ಅಲ್ಪ-ಸ್ವಲ್ಪ ಮಳೆ ಬಂದರೂ ಹಿಂಗಾರು ಬೆಳೆ ಬೆಳೆಯಲು ರೈತರು ಸಿದ್ದತೆಗಳನ್ನು ಮಾಡಿಕೊಂಡಿದ್ದಾರೆ.ಹಿಂಗಾರು ಮಳೆಗಳು ಚೆನ್ನಾಗಿ ಬರುತ್ತಿರುವುದರಿಂದ ಈ ವರ್ಷ ಹಿಂಗಾರು ಬೆಳೆಯೂ ಸಹ ಭರ್ಪೂರ ಬರುವಂತಿದ್ದು, ಉತ್ತರ ಭಾರತದಲ್ಲಿರುವಂತೆ ಇ-ಮಾರುಕಟ್ಟೆ ವ್ಯವಸ್ಥೆಯೊಂದಿಗೆ ಮಾರಾಟ ಮಾಡುವ ವ್ಯವಸ್ಥೆಯ ಶಿಕ್ಷಣ, ಅನುಕೂಲತೆಗಳು ಇಲ್ಲದ ಕಾರಣದಿಂದ ರೈತರಿಗೆ ತಮ್ಮ ಶ್ರಮದ ಪ್ರತಿಫಲ ಪಡೆಯುವುದರಲ್ಲಿ ಸ್ವಯಂ ಬೆಳೆ ಬೆಳೆದು ಟವಲ್ ಹಾಸಿ ಬೆಂಬಲ ಬೆಲೆ ಕೇಳುವ ಪರಿಸ್ಥಿತಿ ಬರಬಹುದು ಎನ್ನುತ್ತಾರೆ ಚನ್ನಾಪುರ ಗ್ರಾಮದ ಪ್ರಗತಿಪರ ರೈತ ಶಿವರುದ್ರಪ್ಪ. ಸಂತೆ ಬೆನ್ನೂರು ಸುತ್ತ-ಮುತ್ತಲ ಪ್ರದೇಶದಲ್ಲಿ ಕೃಷಿ ಇಲಾಖೆ, ಖಾಸಗಿ ಬೀಜ ಮಾರಾಟ ಅಂಗಡಿ ಗಳಿಂದ 160-170 ಕ್ವಿಂಟಾಲ್ ಅಲಸಂದಿ ಬೀಜ ಮಾರಾಟವಾಗಿದ್ದು, ಕೆಲ ರೈತರು ಮನೆಯ ಬಿತ್ತನೆ ಬೀಜ ಸಹ ಬಳಸಿದ್ದಾರೆ.



ಸಂತೆಬೆನ್ನೂರು ಸುತ್ತಮುತ್ತ 'ಪಾಪ್ ಕಾರ್ನ್' ಬೆಳೆ ನಂತರ ಪುನಃ ಹಿಂಗಾರು ಮಳೆಗೆ ಅಲಸಂದಿ ಸಮೃದ್ದವಾಗಿ ಬೆಳೆದು ಕಂಗೊಳಿಸುತ್ತಿರುವುದು.

- ಕೆ.ಸಿರಾಜ್ ಅಹಮ್ಮದ್,
ಸಂತೇಬೆನ್ನೂರು.
sirajahmedsk0@gmail.com

**ಮಾರ್ಕ್ಸ್ ಕಾರ್ಡ್ ಕಳೆದಿದೆ**

ಸಂದೀಪ್ ಪಾಟೀಲ್ ಬಿ. ಹೆಸರಿನ II PUC (Reg No : 645592) ಮಾರ್ಕ್ಸ್‌ಕಾರ್ಡ್ ದಿನಾಂಕ : 3.11.2020 ರಂದು ಬಿಐಇಟಿ ಕಾಲೇಜು ರಸ್ತೆಯಲ್ಲಿ ಕಳೆದಿದ್ದು, ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಕೋರಲಾಗಿದೆ. ತಂದು ಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

**90604 70624, 90665 82577**

**ಸಾರ್ವಜನಿಕ ತಿಳುವಳಿಕೆ**

ನನ್ನ ಕಕ್ಷಿದಾರರಾದ ಶ್ರೀ ಜಯಪ್ಪ ಬಿನ್ ಲೇಟ್ ವೀರಪ್ಪ 8ನೇ ಮೇನ್, 2ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇವರು ಕೊಟ್ಟ ಮಾಹಿತಿ ಮತ್ತು ಅಧಿಕಾರದ ಮೇರೆಗೆ ನೀಡಲಾದ ಸಾರ್ವಜನಿಕ ಪ್ರಕಟಣೆ ಏನೆಂದರೆ:-
ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಲಾದ ಸ್ವತ್ತಿನ ಮಾಲೀಕರಾದ ಶ್ರೀಮತಿ ಶ್ವೇತಾ ಎಸ್.ಎ. ಕೋಂ ಶಾಂತಕುಮಾರ್ ಸಿ.ಎ. ರವರು ನಮ್ಮ ಕಕ್ಷಿದಾರರಿಂದ ಸಾಲವಾಗಿ ಹಣ ಪಡೆದುಕೊಂಡು ತಮ್ಮ ಮಾಲೀಕತ್ವದ ಈ ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ಆಧಾರವಾಗಿ ಇಟ್ಟು, ಆಧಾರ ಪತ್ರ (Mortgage Deed) ವನ್ನು ದಿನಾಂಕ 17.05.2019 ರಂದು ನಮ್ಮ ಕಕ್ಷಿದಾರರಿಗೆ ಬರೆದುಕೊಟ್ಟಿರುತ್ತಾರೆ. ತದ ನಂತರ ಸದರಿ ಶ್ವೇತಾ ಎಸ್.ಎ.ರವರು ಸಾಲ ತೀರುವಳಿ ಮಾಡಲು ವಿಫಲರಾಗಿದ್ದರಿಂದ ಸದರಿ ಸಾಲಕ್ಕೆ ಆಧಾರವಾಗಿದ್ದ (mortgaged) ಷೆಡ್ಯೂಲ್ ಆಸ್ತಿಯ ಮೇಲೆ ನಮ್ಮ ಕಕ್ಷಿದಾರರು ಸೂಕ್ತ ಕಾನೂನು ಕ್ರಮವನ್ನು ಜರುಗಿಸಲು ಕ್ರಮ ಕೈಗೊಳ್ಳುತ್ತಿರುವುದರಿಂದ ಸಾರ್ವಜನಿಕರು ಯಾರೇ ಆಗಿರಲೀ ಸದರಿ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ವ್ಯವರಿಸತಕ್ಕದ್ದಲ್ಲ. ಒಂದು ವೇಳೆ ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರಾದರೂ ವ್ಯವಹರಿಸಿದ ಪಕ್ಷದಲ್ಲಿ ಆದರಿಂದ ಉಂಟಾಗುವ ಹಾನಿಗೆ ಅವರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಎಂದು ನೀಡಲಾದ ಸಾರ್ವಜನಿಕ ತಿಳುವಳಿಕೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ಸಿಟಿ, 5ನೇ ವಾರ್ಡ್, 10ನೇ ಡಿವಿಜನ್‌ಗೆ ಸೇರಿದ ಈ ಹಿಂದೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದವರು ವಿಂಗಡಿಸಿರುವ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಬರತಕ್ಕ ಸೈಟುಗಳ ಪೈಕಿ ಸೈಟ್ ನಂಬರ್ 1160 (ಒಂದು ಸಾವಿರದ ನೂರ ಅರವತ್ತು) ಇದರ ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ. 1160 ಇದರ ಅಳತೆ 9.143 x 12.171 ಮೀಟರ್ = 111.46 ಚದುರ ಮೀಟರ್ ಇದ್ದು, ಪೂರ್ವ - ಪಶ್ಚಿಮ: ಮೂವತ್ತು ಅಡಿ, ಉತ್ತರ-ದಕ್ಷಿಣ : ನಲವತ್ತು ಅಡಿ (30x40) ಅಡಿವುಳ್ಳ

**ಖಾಲಿ ನಿವೇಶನಕ್ಕೆ ಚಕ್ಕುಬಂದಿ:-**

| | |
|---|---|
| ಪೂರ್ವಕ್ಕೆ : | ಸೈಟ್ ನಂ. 1161 |
| ಪಶ್ಚಿಮಕ್ಕೆ: | ಸೈಟ್ ನಂ. 1159 |
| ಉತ್ತರಕ್ಕೆ : | ಸೈಟ್ ನಂ. 1149 |
| ದಕ್ಷಿಣಕ್ಕೆ : | ರಸ್ತೆ |

**ಈ ಮಧ್ಯದ ಸೊತ್ತು ಒಂದು**

ಸ್ಥಳ : ದಾವಣಗೆರೆ
ದಿನಾಂಕ : 07.10.2020

ರಮೇಶ್ ಎಂ. ಕಲಾಲ್,
B.com, L.L.B (Spl)
ವಕೀಲರು.
ಶ್ರೀ ಸದ್ಗುರು ಸದನ, ಬ್ಲಡ್ ಬ್ಯಾಂಕ್ ಹಿಂಭಾಗ,
ಶಂಕರ್ ವಿಹಾರ್ ಲೇಔಟ್,
ದಾವಣಗೆರೆ-577006

## ಬಾಪೂಜಿ ಶಾಲೆಯಲ್ಲಿ ರಾಜ್ಯೋತ್ಸವ



ದಾವಣಗೆರೆ, ನ.3- ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ (ಸಿಬಿಎಸ್ಇ) ಶಾಲೆಯಲ್ಲಿ 65ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಶಾಲಾ ಪ್ರಾಂಶುಪಾಲ ಸಮರೇಂದ್ರ ಪಾಣಿಗ್ರಹಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಶಿಕ್ಷಕ ಪಿ.ವಿ. ಪ್ರಭು ಕನ್ನಡಿಗರ ವಿಶೇಷತೆಯನ್ನು ತಿಳಿಸಿದರು. ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಎಂ.ಜಿ. ಈಶ್ವರಪ್ಪ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದ್ದು, ಶಾಲೆಯ ಎಲ್ಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರ ಪರವಾಗಿ ಅಭಿನಂದನೆಗಳನ್ನು ತಿಳಿಸಲಾಯಿತು.

ಶಿಕ್ಷಕಿ ಡಿ.ಎಂ. ಹಂಸ ಕನ್ನಡ ಬಾವುಟ ಹಾಗೂ ಅದರ ಮಹತ್ವವನ್ನು ತಿಳಿಸಿದರು. ಶೈಕ್ಷಣಿಕ ಮಾರ್ಗದರ್ಶಕ ಸಿ. ಮಂಜಪ್ಪ, ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಸುಮ ಕುಲಕರ್ಣಿ, ಎಲ್ಸಿ ಲೂಯಿಸ್, ಶಾಲಾ ಬೋಧಕ-ಬೋಧಕೇತರ ವರ್ಗದವರು ಉಪಸ್ಥಿತರಿದ್ದರು. ಸಂಗೀತ ಶಿಕ್ಷಕಿ ರಾಧಿಕಾ ಅಂಬರ್‌ಕರ್ ಹಾಗೂ ಶಿಕ್ಷಕಿಯರ ತಂಡ ನಾಡಗೀತೆ ಹಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಗೀತ ಶಿಕ್ಷಕ ಎನ್.ಎಸ್. ಪ್ರಭುಶಂಕರ್ ಪ್ರಾರ್ಥಿಸಿದರು.

## ಬಾಪೂಜಿ ಸಿಬಿಎಸ್ಇ ಶಾಲೆಯಲ್ಲಿ ಪದಸ್ಥಾಪನಾ ಸಮಾರಂಭ




ದಾವಣಗೆರೆ, ನ.3- ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪದಸ್ಥಾಪನಾ ಸಮಾರಂಭವನ್ನು ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಗಿತ್ತು. ಶಾಲಾ ಪ್ರಾಂಶುಪಾಲ ಸಮರೇಂದ್ರ ಪಾಣಿಗ್ರಹಿ ಹಾಗೂ ಶೈಕ್ಷಣಿಕ ಮಾರ್ಗದರ್ಶಕ ಸಿ. ಮಂಜಪ್ಪ ಉಪಸ್ಥಿತಿಯಲ್ಲಿ ಪಿ.ವಿ. ಪ್ರಭು ಅವರು ಸಮೂಹ ನಾಯಕತ್ವದ ವರದಿ ವಾಚಿಸಿದರು. ಶಾಲಾ ಮುಖ್ಯಸ್ಥ ಮಂಜುನಾಥ ರಂಗರಾಜು ಮಾತನಾಡಿದರು. ವಿನುತಾ ಮತ್ತು ನಿತ್ಯಶ್ರೀ ನೃತ್ಯ ಪ್ರಸ್ತುತ ಪಡಿಸಿದರು. ನಾಯಕ ವಿದ್ಯಾರ್ಥಿಗಳು ಅನಿಸಿಕೆ ವ್ಯಕ್ತಪಡಿಸಿದರು.

ನರ್ಸರಿ ವಿಭಾಗದ ಮುಖ್ಯಸ್ಥೆ ಸುಮಂಗಲ, ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಎಲ್ಸಿ ಲೂಯಿಸ್ ಮತ್ತು ಸುಮ ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು. ಪ್ರೌಢಶಾಲಾ ಸಹ ಶಿಕ್ಷಕರಾದ ಎಂ. ವಾಸೀಂ ಪಾಷ ಸ್ವಾಗತಿಸಿದರು. ಎ.ವಿ. ವಿನಾಯಕ ವಂದಿಸಿದರು.

## ಪಂಚಮಸಾಲಿ ಪೀಠದ ದಾಸೋಹ ಮಂದಿರದ ಕಾಮಗಾರಿಗೆ ಚಾಲನೆ



ಹರಿಹರ, ನ.3- ಪಂಚಮಸಾಲಿ ಶ್ರೀ ಪೀಠದಲ್ಲಿರುವ ದಾಸೋಹ ಮಂದಿರದ ಪ್ರಥಮ ಅಂತಸ್ತಿನ ಮೇಲ್ಛಾವಣಿಗೆ ಕಾಂಕ್ರೀಟ್ ಹಾಕುವ ಕಾಯಕಕ್ಕೆ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕಾಮಗಾರಿ ಉಸ್ತುವಾರಿ ವಹಿಸಿರುವ ಹಿರಿಯರಾದ ಷಣ್ಮುಖಪ್ಪ, ಶ್ರೀಪೀಠದ ಮೇಲುಸ್ತುವಾರಿ ವಹಿಸಿಕೊಂಡಿರುವ ಶಿವಣ್ಣ ಬಂಕಾಪುರ ಮತ್ತು ಶ್ರೀಪೀಠದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಜಿಲ್ಲಾ ಮಹರ್ಷಿ ವಾಲ್ಮೀಕಿ ಮಹಿಳಾ ಸಂಘದಿಂದ ವಾಲ್ಮೀಕಿ ಜಯಂತಿ



ದಾವಣಗೆರೆ, ನ. 3 - ಜಿಲ್ಲಾ ಶ್ರೀ ಮಹರ್ಷಿ ವಾಲ್ಮೀಕಿ ಮಹಿಳಾ ಸಂಘದ ವತಿಯಿಂದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀಮತಿ ವಿಜಯಶ್ರೀ, ಕಾರ್ಯದರ್ಶಿ ಮೀನಾ, ಖಜಾಂಚಿ ಗೌರಮ್ಮ, ಸಂಘಟನಾ ಕಾರ್ಯದರ್ಶಿ ಸುಮಂಗಳ, ನಿರ್ದೇಶಕರಾದ ಸುಧಾ, ಸುನಿತಾ, ನಿಮಿಷಾಂಬಿಕ ಮತ್ತು ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

## ಹೊನ್ನಾಳಿ : ಅಂತರ್ಜಾಲದಲ್ಲಿ ಕನ್ನಡ ನುಡಿ ಹಬ್ಬ ಸಾಕಾರಗೊಳಿಸೋಣ



ಹೊನ್ನಾಳಿ, ನ.3- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಿರ್ಮಾಣವಾಗಿರುವ ಶ್ರೀ ಒಡೆಯರ ಚಂದ್ರಶೇಖರ ಶಿವಾಚಾರ್ಯ ಕನ್ನಡ ಭವನದ ಬಳಿ ಕನ್ನಡಾಂಬೆಯ ಧ್ವಜಾರೋಹಣವನ್ನು ಪರಿಷತ್ ಅಧ್ಯಕ್ಷ ಕತ್ತಿಗಿ ಗಂಗಾಧರಪ್ಪ ನೆರವೇರಿಸಿದರು.

ಕತ್ತಿಗಿ ಗಂಗಾಧರಪ್ಪ ಮಾತನಾಡಿ, ಪರಿಸ್ಥಿತಿಗೆ ಅನುಗುಣವಾಗಿ ಈ ದಿನಾಚರಣೆಗೆ ಮುಂದಾಗಿದ್ದು, ಬರುವ ದಿನಗಳಲ್ಲಿ ಉತ್ತಮವಾಗಿ ಆಚರಿಸುವಂತೆ ಕನ್ನಡಾಂಭೆಯು ಸರ್ವರಿಗೂ ಶಕ್ತಿ ನೀಡಲಿ, ಜಿಲ್ಲೆಯಲ್ಲಿ ಪರಿಷತ್‌ನಿಂದ ಒಂದು ತಿಂಗಳ ಕಾಲ ನಡೆಯಲ್ಲಿರುವ ಅಂತರ್ಜಾಲದ ಕನ್ನಡ ನುಡಿ ಹಬ್ಬವನ್ನು ಸಾಕಾರಗೊಳಿಸೋಣ ಎಂಬುದಾಗಿ ಕರೆ ನೀಡಿದರು.

ಪದಾಧಿಕಾರಿಗಳಾದ ಸಿದ್ದಯ್ಯ, ಗೋವಿಂದಪ್ಪ, ಬಸವರಾಜ್, ರತ್ನಮ್ಮ, ಜಯಣ್ಣ, ಮಹೇಶ್ವರಪ್ಪ, ರೇವಣಪ್ಪ, ಶೇಖರಪ್ಪ ಇದ್ದರು.

# ಸರ್ಕಾರಿ ನೌಕರರ ಹಿತ ಕಾಪಾಡಲು ಸರ್ಕಾರಿ ನೌಕರರ ಸಂಘ ಬದ್ಧ

### ಹರಪನಹಳ್ಳಿ : ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಷಡಾಕ್ಷರಿ



ಹರಪನಹಳ್ಳಿ,ನ.3 - ಸರ್ಕಾರಿ ನೌಕರರ ಹಿತ ಕಾಪಾಡಲು ರಾಜ್ಯ ಸರ್ಕಾರಿ ನೌಕರರ ಸಂಘ ಬದ್ಧವಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಷಡಾಕ್ಷರಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಿನ್ನೆ ಜರುಗಿದ ತಾಲ್ಲೂಕಿನ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯ ಸರ್ಕಾರಿ ನೌಕರರಿಗೆ ನಗದು ರಹಿತ ಚಿಕಿತ್ಸೆ ನೀಡುವ ನೂತನ ಆರೋಗ್ಯ ಯೋಜನೆ ಶೀಘ್ರ ಅನುಷ್ಠಾನಗೊಳ್ಳುವುದು ಎಂದ ಅವರು ನಗದು ರಹಿತ ಚಿಕಿತ್ಸೆಯ ಹೊಸ ಆರೋಗ್ಯ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದ್ದು, ಸರ್ಕಾರ ಶೀಘ್ರ ಅನುಷ್ಠಾನ ಗೊಳಿಸುವ ಭರವಸೆಯನ್ನು ನೀಡಿದೆ ಎಂದರು.

ಇದರಿಂದ 6 ಲಕ್ಷ ನೌಕರರು ಹಾಗೂ ಅವರ ಕುಟುಂಬ ಸೇರಿ ಒಟ್ಟು 22 ಲಕ್ಷ ಜನರಿಗೆ ಅನುಕೂಲವಾಗುತ್ತದೆ, ಇದರಿಂದ ಎಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು ಹಾಗೂ ಪ್ರತಿ ತಿಂಗಳು 1 ಸಾವಿರ ರೂ ಬೆಲೆ ಬಾಳುವ ಔಷಧಿಯನ್ನು ಸರ್ಕಾರಿ ನೌಕರರು ಪಡೆಯಬಹುದು ಎಂದ ಅವರು, ನೌಕರರು ತಮ್ಮ ವಿವಿಧ 38 ವಿಷಯಗಳಿಗೆ ಕಚೇರಿಗೆ ಅಲೆಯುವ ಅಗತ್ಯವಿಲ್ಲ. ಎಲ್ಲಾ ಮೊಬೈಲ್‌ನಲ್ಲಿಯೇ ಅರ್ಜಿ ಹಾಕಿ ಕೆಲಸ ಮಾಡಿಕೊಳ್ಳಬಹುದು ಇದು ಸಹ 8-9 ತಿಂಗಳಲ್ಲಿ ಜಾರಿಗೆ ಬರುತ್ತದೆ ಎಂದು ಅವರು ತಿಳಿಸಿದರು.

ಕೆಜಿಐಡಿ ಸ್ಕೀಂ ಸಹ ಅತ್ಯಾಧುನಿಕವಾಗಿ ಗಣಕೀಕರಣವಾಗಿದೆ, ಶೀಘ್ರ ಲೋಕಾರ್ಪಣೆಗೊಳ್ಳಲಿದೆ, ವೃಂದ ನೇಮಕಾತಿಗೆ ತಿದ್ದುಪಡಿ ಮಾಡಲಾಗಿದೆ ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರಿ ನೌಕರರಿಗೆ ಸರಿ ಸಮನಾಗಿ ವೇತನವನ್ನು ರಾಜ್ಯ ಸರ್ಕಾರಿ ನೌಕರರಿಗೂ ನೀಡಬೇಕು ಎಂಬ ಒತ್ತಾಯವಿದೆ, ಬೀದಿಗಿಳಿದು ಹೋರಾಟ ಮಾಡುವ ಪ್ರಸಂಗ ಬರುವುದಿಲ್ಲ ಎಂದು ಅವರು ವಿಶ್ವಾಸ ವ್ಯಕ್ತ ಪಡಿಸಿದರು.

ಎನ್‌ಪಿಎಸ್ ಸ್ಕೀಂ ರದ್ದು ಮಾಡುವ ಕುರಿತು ನೇಮಿಸಿರುವ ಕಮಿಟಿ ವರದಿ ಸಿದ್ಧ ಮಾಡಿದೆ. ಸರ್ಕಾರಕ್ಕೆ ವರದಿ ನೀಡಿದ ನಂತರ ನಮ್ಮ ಹೋರಾಟ ಇದೆ, ಹರಪನಹಳ್ಳಿಯಲ್ಲಿ ಸಮುದಾಯ ಭವನ ನಿರ್ಮಿಸಲು ಸ್ಥಳೀಯ ಶಾಸಕರ ಜೊತೆ ಚರ್ಚಿಸುತ್ತೇನೆ ಎಂದರು.

ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ್, ಬಳ್ಳಾರಿ ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಶಿವಾಜಿರಾವ್, ದಾವಣಗೆರೆ ಜಿಲ್ಲಾಧ್ಯಕ್ಷ ಪಾಲಾಕ್ಷಪ್ಪ, ಚಿತ್ರದುರ್ಗ ಜಿಲ್ಲಾಧ್ಯಕ್ಷ ಮಂಜುನಾಥ, ಹರಪನಹಳ್ಳಿ ತಾಲ್ಲೂಕು ಅಧ್ಯಕ್ಷ ಸಿದ್ದಲಿಂಗನಗೌಡ, ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಅಂಜಿನಪ್ಪ, ಹಡಗಲಿ, ಕೊಟ್ಟೂರು ತಾಲ್ಲೂಕುಗಳ ಅಧ್ಯಕ್ಷರು, ಸ್ಥಳೀಯ ಪದಾಧಿಕಾರಿಗಳಾದ ಕುಬೇಂದ್ರನಾಯ್ಕ, ಬಿ.ಎಚ್.ಚಂದ್ರಪ್ಪ, ರಾಮಪ್ಪ, ವೆಂಕಟೇಶ್ ಬಾಗಲಾರ, ಬಿ. ರಾಜಶೇಖರ್, ಷಣ್ಮುಖಪ್ಪ, ಪದ್ಮರಾಜ್ ಜೈನ್ ಉಪಸ್ಥಿತರಿದ್ದರು.

## ಕನ್ನಡಮ್ಮನ ಚರಣಕೆ

ಕನ್ನಡ ನಾಡಿನ ಮಣ್ಣಿನ ಕಣದಲಿ
ತುಂಬಿದೆ ಸಿರಿಗಂಧದ ಘಮವು
ಕನ್ನಡದಕ್ಷರ ನುಡಿ ನುಡಿಯಲಿ
ಬೆರೆತಿದೆ ಭಾವೈಕ್ಯತೆಯ ಬಲವು.

ಚೆಲುವಿನ ನಾಡು- ಚಿತ್ತಾರದ ಬೀಡು
ಬನದೊಳು ಸಮೃದ್ಧಿಯ ಮಲೆನಾಡು
ತುಂಬಿದೆ ಕಾಂತಿ- ಹರಡಿದೆ ಶಾಂತಿ
ಮರದೆಲೆಗಳು ಫಳಫಳನೆ ಹೊಳೆದು.

ಸಕ್ಕರೆ ನಾಡಿದು- ಚಿನ್ನದ ಬೀಡಿದು
ಸಂಸ್ಕೃತಿ ತುಂಬಿದ ತೊಟ್ಟಿಲಿದು
ಗುಡಿ ಕೈಗಾರಿಕೆಗಳು ಕುಶಲತೆಯಲ್ಲಿ
ಕರುನಾಡಿನ ಮಡಿಲಿನ ತುಂಬಾ !

ಕನ್ನಡದಕ್ಷರ ಮುತ್ತಿನ ಮಣಿಯಲಿ
ಚೆಲುವಿಗೆ ಸಾಕಾರವು ಕಣ್ತುಂಬಾ
ಇತಿಹಾಸದ ಪುಟದ ಸಾರದಲಿ
ವಿಜಯನಗರ ವೈಭವದ ಬಿಂಬ.

ಕರುನಾಡಿನ ಗುಡಿ ಗೋಪುರಗಳು
ಕಣ್ಮನ ಸೆಳೆಯುವ ಶಿಲ್ಪ ವೈಭವವು
ಜಗದಾಕರ್ಷಕ ಜೋಗದ ಸಿರಿಯು
ವಿಶ್ವೇಶ್ವರಯ್ಯನವರ ಶಕ್ತಿಯ ಫಲವು.

ಸಾಹಿತ್ಯ- ಸಂಗೀತ ಮನಮನದಲ್ಲಿ
ಹರಡಿದೆ ಕಂಪನು ಜಗದೆಡೆಯಲ್ಲು
ಹಿಂದೂಸ್ತಾನದ ಪುಣ್ಯ ಮಡಿಲಿನಲಿ
ಕರುನಾಡ ಕುಡಿ ಹೆಮ್ಮೆಯು ನಮಗಿಲ್ಲಿ.

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

## ಖನ್ನೂರ ವಿದ್ಯಾನಿಕೇತನದಲ್ಲಿ ಏಕತಾ ದಿವಸ್ ಆಚರಣೆ

**ರಾಣೇಬೆನ್ನೂರು**

ರಾಣೇಬೆನ್ನೂರು, ನ.3- ಖನ್ನೂರ ವಿದ್ಯಾನಿಕೇತನ ಸ್ಕೂಲ್‌ನಲ್ಲಿ ರಾಷ್ಟ್ರೀಯ ಏಕತಾ ದಿವಸ್ ಹಾಗೂ ವಾಲ್ಮೀಕಿ ಜಯಂತಿಯನ್ನು ಆನ್‌ಲೈನ್ ಮೂಲಕ ನಡೆಸಲಾಯಿತು.

ಖನ್ನೂರ ಸೊಸೈಟಿ ಕಾರ್ಯದರ್ಶಿ ಡಾ. ಪ್ರವೀಣ ಎಂ. ಖನ್ನೂರ ಹಾಗೂ ಖಜಾಂಚಿ ಡಾ. ಶೈಲಶ್ರೀ ಪಿ. ಖನ್ನೂರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ಮಹಾಂತೇಶ ಆರ್. ಕಮ್ಮಾರ ಸರ್ದಾರ್ ವಲ್ಲಭಬಾಯಿ ಪಟೇಲ್ ಕುರಿತು ಮಾತನಾಡಿದರು. ಪೂರ್ವ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಲೀಲಾವತಿ ಉಪಸ್ಥಿತರಿದ್ದರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

ವಿದ್ಯಾರ್ಥಿನಿಯರಾದ ಝೈಬಾನಾಜ್ ತಪಾಲಕಟ್ಟಿ ಸ್ವಾಗತಿಸಿದರು. ಯಾಸೀನ್ ತಪಾಲಕಟ್ಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಂಜಿತ್ ಶಾಸ್ತ್ರಿ ವಂದಿಸಿದರು. ಎಂ.ಎ. ಸಂಜನಾ ನಿರೂಪಿಸಿದರು.

## ನೀವೇನಂತೀರಿ ?

ಅಮರವಾಗಲಿ; ಜೀವನದ ವನದಿ ನೆಟ್ಟ ಮರ
ಅಮೃತವಾಗಲದು; ಮೃದು ವಚನದ ಮಧು
ಸಿಟ್ಟಾಗನು ದೇವರು; ಪೂಜೆಯ ಹೂ ಬಾಡಿದರೂ
ಅನುರಾಗವಳಿಯದು ವಿರಹದುರಿ ಕಾಡಿದರೂ
"ಮಣ್ಣಿನ ಸವಕಳಿಗಂಜದಳುಕದೀ ನೆಲ" ಅಂತಾನೆ
ಕೊಂಕೊತಿಮ್ಮ!?

- ಮಹಾಂತೇಶ್ ಬಿ.ನಿಟ್ಟೂರ್, ದಾವಣಗೆರೆ.

## ಸೌಹಾರ್ದ ಪ್ರಕಾಶನದಿಂದ ಹಳೆಗನ್ನಡ ಛಂದೋ ಕಾವ್ಯಗಳ ಸಂಕ್ಷಿಪ್ತ ಪರಿಚಯ



ದಾವಣಗೆರೆ, ನ.3- ಸೌಹಾರ್ದ ಪ್ರಕಾಶನ ವಾಟ್ಸಾಪ್ ಗುಂಪಿನ ವೇದಿಕೆಯಿಂದ ನವೆಂಬರ್ ತಿಂಗಳಿಡೀ ನಡೆಯುವ ಹಳಗನ್ನಡ ಛಂದೋ ಕಾವ್ಯಗಳ ಸಂಕ್ಷಿಪ್ತ ಪರಿಚಯ ಹಾಗೂ ಛಂದೋ ಪದ್ಯ ರಚನಾ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ನಡೆಯಿತು.

ಈ ಕಾರ್ಯಕ್ರಮದಲ್ಲಿ ಹಲವಾರು ಪಟ್ಟಣ ಗ್ರಾಮೀಣ ಪ್ರದೇಶದ ವನಿತೆಯರು ತಮ್ಮ ತಮ್ಮ ಮನೆಗಳಿಂದಲೇ ಕನ್ನಡ ರಾಜ್ಯೋತ್ಸವ ಪೂರಕ ಕಲ್ಪನೆಯ ಚಿತ್ರ ನಕ್ಷೆಗಳನ್ನು ಅಲಂಕರಿಸಿ, ಪ್ರದರ್ಶನ ನೀಡಿದ್ದು ಮನೋಹರವಾಗಿತ್ತು.

ನವೆಂಬರ್ ತಿಂಗಳಿಡೀ ನಡೆಯುವ ಕನ್ನಡ ಕಾರ್ಯಕ್ರಮಕ್ಕೆ ಡಾ।। ಹೆಚ್.ವಿ.ವಾಮದೇವಪ್ಪ, ಪ್ರೊ।। ವಿಠ್ಠಲ್ ರಾವ್ ಹಾಗೂ ಸುದರ್ಶನ್ ಮೊದಲಾದವರು ಶುಭ ಹಾರೈಸಿದರು. ದಾರುಕೇಶ್ ಅವರು ತಮ್ಮ ಕಂಠಸಿರಿಯಿಂದ ಸೊಗಸಾದ ಕನ್ನಡ ನಾಡ ಗೀತೆಯನ್ನು ಹಾಡಿ ಎಲ್ಲರ ಮನ ತಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿರ್ವಹಿಸಿದ ಹೆಚ್.ಕೆ.ಲಿಂಗರಾಜು ಅವರು ಬರಹ ಕಳಿಸಿ, ಕನ್ನಡ ಕಲಿಕೆಗೆ ಪ್ರೇರೇಪಿಸಿ ಪ್ರೋತ್ಸಾಹಿಸಿದರು.

ರೂಪ ಮಾಚನಾಯಕನಹಳ್ಳಿ, ಗೀತಾ ಮಂಜು ಬೆಣ್ಣೆಹಳ್ಳಿ ಪ್ರಾರ್ಥಿಸಿದರು. ಚಿನ್ನ ಮಲ್ಲಿಕಾರ್ಜುನ್ ಸ್ವಾಗತಿಸಿದರು. ಗಿರಿಜಾನಾಯಕ್ ಹೊರನಾಡು ವಂದಿಸಿದರು.

ಒಟ್ಟಾರೆ ಸೌಹಾರ್ದ ಪ್ರಕಾಶನದ ವಾಟ್ಸಾಪ್ ವೇದಿಕೆಯ ಕಾರ್ಯಕ್ರಮಕ್ಕೆ ಅರಿಶಿಣ ಕುಂಕುಮ ವರ್ಣ ನೀಡಿ, ಶೋಭಾಯಮಾನವಾಗುವಂತೆ ಆನಂದವಾಗುವಂತೆ ಚಟುವಟಿಕೆಗಳ ಮೂಲಕ ಯಶಸ್ಸು ನೀಡಿದ ಎಲ್ಲರನ್ನು ಸೌಹಾರ್ದ ಪ್ರಕಾಶನ ವಾಟ್ಸಾಪ್ ಗುಂಪಿನ ಸ್ಥಾಪಕರಾದ ಶ್ರೀಮತಿ ಎ.ಸಿ. ಶಶಿಕಲಾ ಶಂಕರಮೂರ್ತಿ ಶ್ಲಾಘಿಸಿ, ಅಭಿನಂದಿಸಿದರು.

## ಪರಿಸರ ಪ್ರೇಮ

ಎಲ್ಲರಿಗೂ ಇರಬೇಕು ಪರಿಸರ ಪ್ರೇಮ
ಆಗಲೇ ಬದುಕು ಸುಂದರ ಕವನ
ಸುತ್ತ ಮುತ್ತ ಇರಬೇಕು ಸ್ವಚ್ಛ
ಗಿಡಗಳ ಬೆಳೆಸಲು ಇರಬೇಕು ಇಚ್ಛ

ಗಿಡಗಳನ್ನು ನೋಡಬೇಕು ಮಕ್ಕಳಂತೆ
ರಸ್ತೆ ರಸ್ತೆ ಗಳಲ್ಲೂ ನೆಡಬೇಕು ಗಿಡಗಳ
ಇದಕ್ಕೆ ಸಾಲುಮರದ ತಿಮ್ಮಕ್ಕನೇ
ಉದಾಹರಣೆ ಬದುಕಲಿ ಬರಲ್ಲ ಬವಣೆ

ಆಮ್ಲಜನಕ ನೀಡುವವು ಮರಗಳು
ಹನಿ ನೀರು ಉಣಿಸಿದರೆ ನಾವು
ಅವನ್ನು ಕಾಣೋಣ ಜೀವಿಗಳಂತೆ
ದೇವರು ಕೊಟ್ಟ ಪ್ರಸಾದದಂತೆ

ತಾನು ಉರಿದು ಬೆಳಕು ನೀಡುವ
ಸೂರ್ಯ
ಪ್ರಪಂಚಕ್ಕೆ ಬೆಳದಿಂಗಳ ಕೊಡುತ್ತಾನೆ
ಚಂದಿರ
ನೋವಾದರೂ ಬೆಳೆ ನೀಡುವಳು
ಭೂತಾಯಿ
ಕಡಿದರು ಬೆಳೆ ನೀಡುವವು ಮರಗಳು

- ಕೋಮಲ ವಸಂತ್‌ಕುಮಾರ್

## ಯಂತ್ರದ ಮುಖಾಂತರ ಭತ್ತದ ನಾಟಿಯ ಕ್ಷೇತ್ರೋತ್ಸವ




ದಾವಣಗೆರೆ, ನ.3- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಯಂತ್ರದ ಮೂಲಕ ಭತ್ತ ನಾಟಿ ಮಾಡಿದ ತಾಕಿನಲ್ಲಿ ಕ್ಷೇತ್ರೋತ್ಸವವನ್ನು ಆಚರಿಸಲಾಯಿತು. ಪ್ರಗತಿಪರ ರೈತ ಗುರುಮೂರ್ತಿ ಅವರು ಯಂತ್ರದ ಮುಖಾಂತರ ನಾಟಿ ಮಾಡುವುದರಿಂದ ಇಳುವರಿಯಲ್ಲಿ ಯಾವುದೇ ವ್ಯತ್ಯಾಸವನ್ನು ಕಾಣುವುದಿಲ್ಲ ಹಾಗೂ ಖರ್ಚಿನಲ್ಲಿ ಪ್ರತಿ ಎಕರೆಗೆ ಸುಮಾರು ಐದರಿಂದ ಆರು ಸಾವಿರ ರೂ.ಗಳನ್ನು ಸಾಮಾನ್ಯ ಪದ್ಧತಿಗೆ ಹೋಲಿಸಿದರೆ, ಉಳಿತಾಯ ಮಾಡಬಹುದು ಎಂದರು. ಬೇಸಾಯ ತಜ್ಞರಾದ ಮಲ್ಲಿಕಾರ್ಜುನ್ ಅವರು ಮಾತನಾಡುತ್ತಾ ಇನ್ನು ಮುಂದಿನ ದಿನಗಳಲ್ಲಿ ನಾಟಿ ಮಾಡಲು ಕೂಲಿ ಕಾರ್ಮಿಕರ ಅಭಾವವಾಗುವುದರಿಂದ ಯಂತ್ರದ ಮುಖಾಂತರ ಭತ್ತದ ನಾಟಿ ಅನಿವಾರ್ಯವಾಗುತ್ತದೆ ಹಾಗೂ ಈ ಪದ್ಧತಿಯಿಂದ ಖರ್ಚನ್ನು ಕಡಿಮೆ ಮಾಡಬಹುದು. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬಹುದು.

ಪ್ರಗತಿಪರ ರೈತರಾದ ಚಂದ್ರಕಾಂತ್ ಮಾತನಾಡಿ, ಭತ್ತಕ್ಕೆ ಯಾವುದೇ ರೀತಿಯ ಔಷಧಿಗಳನ್ನು ವಿನಾಕಾರಣ ಸಿಂಪರಣೆ ಮಾಡದಿರುವುದರಿಂದ ಖರ್ಚು ಕಡಿಮೆಯಾಗಿದೆ ಹಾಗೂ ವಿಜ್ಞಾನಿಗಳು ಹೇಳಿದ ರೀತಿಯಲ್ಲಿ ಬೇಸಾಯ ಕ್ರಮಗಳನ್ನು ಅನುಸರಿಸಿದ್ದೇವೆ ಎಂದರು. ಕಾರ್ಯಕ್ರಮದಲ್ಲಿ ಕೃಷಿ ಅಧಿಕಾರಿ ವಿಜಯಕುಮಾರ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಮಲ್ಲಿಕಾರ್ಜುನ ಸ್ವಾಮಿ ಪ್ರಗತಿಪರ ರೈತರು ವಂದಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ರಘುರಾಜ್ ಹಾಗೂ ಹೆಚ್.ಎಂ.ಸಣ್ಣ ಗೌಡರು ಹಾಗೂ ಪ್ರಗತಿಪರ ರೈತರು ಭಾಗವಹಿಸಿದ್ದರು.

## ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಜ್ಯೋತ್ಸವ

ದಾವಣಗೆರೆ, ನ.3- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 65ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾಲೇಜು ಪ್ರಾಂಶುಪಾಲ ತೂ.ಕ. ಶಂಕರಯ್ಯ ನಾಡು-ನುಡಿ ಕುರಿತು ಮಾತನಾಡಿದರು. ಪ್ರಾಧ್ಯಾಪಕರುಗಳಾದ ಪ್ರೊ. ಭೀಮಣ್ಣ ಸುಣಗಾರ್, ವೀರೇಶ್, ಶಂಕರ್ ಶೀಲಿ, ದಾದಾಪೀರ್, ದಿನೇಶ್, ತಿಪ್ಪಾರೆಡ್ಡಿ, ಮಂಜಣ್ಣ, ಪ್ರಕಾಶ್ ಕೊರಮರ, ರಾಜಮೋಹನ್, ಚನ್ನಬಸಪ್ಪ, ಜೆ.ಎಂ. ಮಂಜುನಾಥ್, ಶಂಭು, ನಲ್ಲನವರ್, ಕೊಟ್ರಪ್ಪ, ಸುರೇಶ್, ಜಯಣ್ಣ, ನಿಂಗಪ್ಪ, ಧರ್ಮಾನಾಯ್ಕ್, ಖಾನ್, ನಾಗರಾಜ್, ಸತೀಶ್ ಹಾಜರಿದ್ದರು.

## ಸಮೃದ್ಧಿ ಮನುಷ್ಯನ್ನು ಪರೀಕ್ಷೆ ಮಾಡುತ್ತದೆ

ಮನುಷ್ಯನಿಗೆ ಸಮೃದ್ಧಿ ಬೇಕು. ಆದರೆ, ಸಮೃದ್ಧಿಯಂತಹ ಇನ್ನೊಬ್ಬ ವೈರಿ ಇಲ್ಲವೆಂದು ಅವನು ತಿಳಿಯಬೇಕು. ಸಮೃದ್ಧಿ ಬಂದಾಗ ಮನುಷ್ಯನು ತನ್ನ ಕೈಯಲ್ಲಿ ಸಮೃದ್ಧಿಯನ್ನು ಉಳಿಸಿಕೊಳ್ಳುವುದಿಲ್ಲ. ಸಮೃದ್ಧಿಯ ಕೈಯಲ್ಲಿ ಅವನು ಸಿಕ್ಕಿ ಬೀಳುತ್ತಾನೆ.

ಸಮೃದ್ಧಿಯು ಮನುಷ್ಯನಿಗೆ ಸ್ವೈರ ಭಾವವನ್ನು ಕಲಿಸಿಕೊಡುತ್ತದೆ. ದುಷ್ಟತನದ ಧೈರ್ಯವನ್ನು ಅವನಿಗೆ ತಂದು ಕೊಡುತ್ತದೆ. ತಾನು ಅತ್ಯಾಧುನಿಕವೆನಿಸಬೇಕೆಂದು, ನವೀನತೆಯ ಬೆನ್ನು ಹತ್ತಿ ಹೋಗಿ ಅವನು ತನ್ನನ್ನು ತಾನೇ ಹಾಳು ಮಾಡಿಕೊಳ್ಳುತ್ತಾನೆ.

**ಇದನ್ನೆಲ್ಲಾ ಅರಿತೇ ಜರ್ಮನ್ ಕವಿ ಗಯಟೆ ಹೇಳುತ್ತಿದ್ದ :** ಜಗತ್ತಿನಲ್ಲಿ ಬೇರೆ ಏನನ್ನಾದರೂ ಸಹಿಸಿಕೊಳ್ಳಬಹುದು. ಸಂತಸವಾದ ಸಮೃದ್ಧಿಯನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ತನಗೆ ಸಮೃದ್ಧಿ ಬಂದಾಗಲೇ ಮನುಷ್ಯನು ತಾನೆಂಥ ಮೂರ್ಖನೆನ್ನುವುದನ್ನು ತೋರಿಸಿ ಕೊಡುತ್ತಾನೆ. ಬಡತನವು ಮನುಷ್ಯನ ಶ್ರೇಷ್ಠತೆಯನ್ನು ಪ್ರದರ್ಶಿಸಿದರೆ, ಸಮೃದ್ಧಿಯು ಅವನ ಕನಿಷ್ಠತನವನ್ನು ಎತ್ತಿ ತೋರಿಸುತ್ತದೆ.

ಮನುಷ್ಯನು ಸಮೃದ್ಧಿ ಪಡೆಯುತ್ತಾ ಹೋದಂತೆ ಅವನ ದೊಡ್ಡತನ ಜನರಿಗೆ ಕಾಣಬೇಕು. ಆದರೆ, ಅವನ ಕನಿಷ್ಠತನ ಮೇಲೆದ್ದು ಕುಣಿಯತೊಡಗುತ್ತದೆ.

ಭಾರೀ ಸಮೃದ್ಧವಾದ ಒಬ್ಬ ಮನುಷ್ಯನನ್ನು ಯಾರೊಬ್ಬರೂ ಅವನೊಬ್ಬ ಮನುಷ್ಯನೆಂದು ಪ್ರೀತಿಸುವುದಿಲ್ಲ. ಜನರು ಅವನ ಶ್ರೀಮಂತಿಕೆಯನ್ನು ಮೆಚ್ಚಿಕೊಂಡಿರುತ್ತಾರೆ. ಅವರು ತನ್ನನ್ನೇ ಮೆಚ್ಚಿಕೊಂಡಿರುವರೆಂದು ಆ ಶ್ರೀಮಂತ ತಿಳಿದುಕೊಂಡಿರುತ್ತಾನೆ.

ಯಾವನೊಬ್ಬನ ಪರೀಕ್ಷೆ ಅವನಿಗೆ ಬಡತನ ಬಂದಾಗ ಆಗುವುದಿಲ್ಲ. ಶ್ರೀಮಂತಿಕೆ ಬಂದಾಗ ಆಗುತ್ತದೆ. ಬಡತನವನ್ನು ಸಹಿಸಿಕೊಳ್ಳುವ ಜನರು ಸಿಕ್ಕುತ್ತಾರೆ. ಆದರೆ, ಶ್ರೀಮಂತಿಕೆಯನ್ನು ಸಹಿಸಿಕೊಳ್ಳುವ ಜನರು ಸಿಗುವುದು ಕಷ್ಟ. ತನ್ನಲ್ಲಿ ಅನೇಕ ಅರ್ಹತೆಗಳಿರುವ ಭ್ರಮೆಯನ್ನು ಮನುಷ್ಯನಿಗೆ ಅವನ ಶ್ರೀಮಂತಿಕೆ ತಂದು ಕೊಡುತ್ತದೆ. ಆಗ ಅವನ ಕಣ್ಣಿಗೆ ಪ್ರತಿಭಾವಂತರು, ದೊಡ್ಡ ಜನರು ಯಾರೊಬ್ಬರೂ ಕಾಣುವುದಿಲ್ಲ.

ಉರಿ ಬರಲಿ, ಸಿರಿ ಬರಲಿ, ಮನುಷ್ಯನು ಎಲ್ಲ ಕಾಲಗಳಲ್ಲಿಯೂ ಒಂದೇ ಬಗೆಯಾಗಿದ್ದರೆ, ದೈವದಿಂದಲೂ ಕೂಡ ಅವನನ್ನು ಏನೂ ಮಾಡುವುಕ್ಕೆ ಆಗುವುದಿಲ್ಲ. ದೈವವು ಶ್ರೀಮಂತ ಮನುಷ್ಯನ ಮೇಲೆ ತಿರುಗಿ ಬಿದ್ದರೆ, ಅದು ಅವನನ್ನು ಸಂಪೂರ್ಣ ಮುಗಿಸಿ ಬಿಡುತ್ತದೆ. ತಾವು ದೊಡ್ಡವರೆಂದು ಉನ್ನತರಾದವರು ಇದೇ ರೀತಿಯಿಂದ ಕೊನೆಗೊಳ್ಳುತ್ತಾರೆ.

– ಸಂಗ್ರಹ : ಜೆ.ಸೋಮನಾಥ್

## ಕನ್ನಡ ನಾಡು

ಕ : ಕನ್ನಡ ನಾಡು
ಕಾ: ಕಾನನದ ಬೀಡು
ಕಿ : ಕಿಂಪುರುಷರ ನಾಡು
ಕೀ: ಕೀರ್ತನೆಗಳ ಬೀಡು
ಕು: ಕುಶಲ ಕಲೆಗಳ ನಾಡು
ಕೂ: ಕೂಗಿ ಕರೆವ ಬೀಡು
ಕೃ: ಕೃತಿಗಳ ನಾಡು
ಕೆ: ಕೆಳದಿಯ ಬೀಡು
ಕೇ: ಕೇದಿಗೆಯ ನಾಡು
ಕೈ: ಕೈ ಬೀಸಿ ಕರೆವ ಬೀಡು
ಕೊ: ಕೊಡಗಿನ ವೀರರ ನಾಡು
ಕೋ: ಕೋಟೆ ಕೊತ್ತಲಗಳ ಬೀಡು
ಕೌ: ಕೌತುಕದ ನಾಡು
ಕಂ: ಕಂಪು ಸೂಸುವ ಬೀಡು
ಕಃ: ಕಃಗೊಳಿಸುವ ನಾಡು
ಕ ಯಿಂದ ಕಃ ತನಕ
ಕನ್ನಡ ನಾಡಿನ ವರ್ಣನೆ
ಕನ್ನಡವೇ ಸತ್ಯ ಕನ್ನಡವೇ ನಿತ್ಯ
ಕನ್ನಡ ನುಡಿ ಶ್ರೀ ಗಂಧದ ಗುಡಿ
ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

- ಹೆಚ್.ಕೆ.ಸತ್ಯಭಾಮಾ ಮಂಜುನಾಥ, ದಾವಣಗೆರೆ.

## ಕನ್ನಡತನ ಮೆರೆಸುವ

ಕರುನಾಡ ದೀವಿಗೆ ಪ್ರಖರವಾಗಿ ಬೆಳಗಿಸೆ
ಕನ್ನಡದ ಸಿರಿಯ ಉಳಿಸಿ ಬೆಳೆಸೆ
ಎಂದೆನುವ ಪಣ ತೊಡಬೇಕು ನಾವಿಂದು
ಕನ್ನಡ ಮಾತೆಯ ಋಣ ತೀರಿಸುವ ಛಲವಿರಬೇಕು ಎಂದೆಂದೂ

ಕನ್ನಡಾಂಬೆಯ ನೆಲಜಲದಾಸಾರೆಯಲಿ ನಾವು
ಅವಳೇ ಅನ್ನ ನೀಡಿರುವ ದೈವವು
ನಾಡ ನುಡಿಯ ಸಂಸ್ಕೃತಿಗೆ ಜೀವ ಸವೆಸಿದವರೆಷ್ಟೋ
ಅದನ ರಕ್ಷಿಸುವ ಹೊಣೆಬೇಕು ನಮಗೆ ಸಾಕಷ್ಟು

ಎಲ್ಲೆಡೆ ಮೊಳಗಲಿ ಕನ್ನಡದ ಕಹಳೆ
ನಿಗ್ರಹಿಸುವ ನಮ್ಮೊಡನಿರುವ ಅನ್ಯ ಭಾಷಿಕರ ರಗಳೆ
ಸುತ್ತಲ ಜನರೆಲ್ಲರ ಸ್ವೀಕರಿಸಿಹಳು ಕನ್ನಡಾಂಬೆ
ವಿಶಾಲ ಹೃದಯ ಹೊಂದಿಹಳು ಜಗದಾಂಬೆ

ಕನ್ನಡದ ಕಲಿಕೆಗೆ ಮೊದಲ ಆದ್ಯತೆ ನೀಡುತ
ಕನ್ನಡ ಮಾಧ್ಯಮ ಶಾಲೆಗಳ ಉಳಿಸುತ
ಕನ್ನಡ ಸಾಹಿತ್ಯ, ದೇಸಿ ಕಲೆಯ ಮೆರೆಸುತ
ಕನ್ನಡ ಮಂತ್ರವ ಜಪಿಸುವ ಅನವರತ

ಕನ್ನಡದ ಉತ್ಸವ ಅನುದಿನದ ಆಚರಣೆಯಾಗಬೇಕು ಎಮ್ಮಲಿ
ಹಲವು ಭಾಷೆಗಳ ಜನರಿಹರು ನಮ್ಮಲಿ
ಗೆಳೆತನವ ಬಿಡದೆ, ತಡೆಯುವ ಅವರ ಅಧಿಪತ್ಯವ
ಉಳಿಸಿಕೊಳ್ಳುವ ನಮ್ಮತನವ, ಮೆರೆಸುವ ನಮ್ಮ ಕನ್ನಡವ

- ಎಂ.ಎಸ್. ಮಂಜುಳಾ ಮಂಜಪ್ಪ, ದಾವಣಗೆರೆ.

## ಎಲೆಬೇತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಜ್ಯೋತ್ಸವ



ದಾವಣಗೆರೆ, ನ.3- ಎಲೆಬೇತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 65ನೇ ಕನ್ನಡ ರಾಜ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ನಿರ್ದೇಶಕ ಎಂ.ಷಡಕ್ಷರಪ್ಪ ಮಾತನಾಡಿ, ನಾವು ಕನ್ನಡಿಗರು ನಮ್ಮ ಮಾತೃಭಾಷೆ ಕನ್ನಡ. ಆದ್ದರಿಂದ ಪ್ರತಿ ಮನೆ ಮನೆಯಲ್ಲೂ ಕನ್ನಡವನ್ನು ಪ್ರತಿನಿತ್ಯ ಮಾತನಾಡಬೇಕು. ಅದೇ ರೀತಿ ಶಾಲಾ-ಕಾಲೇಜುಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ, ಬ್ಯಾಂಕುಗಳಲ್ಲಿ ಕನ್ನಡ ಬಳಕೆಯಾಗಬೇಕು. ಕನ್ನಡ ನಾಡು ಸಂಸ್ಕೃತಿ, ಸಂಪದ್ಭರಿತ ನಾಡು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಫಕ್ಕೀರಪ್ಪ, ಶಾಲಾ ಮುಖ್ಯೋಪಾಧ್ಯಾಯರಾದ ಶಿವಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

## ಜಿಗಳಿಯಲ್ಲಿ ಕನ್ನಡ ರಾಜ್ಯೋತ್ಸವ



ಮಲೇಬೆನ್ನೂರು, ನ.1- ಜಿಗಳಿ ಗ್ರಾಮದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಕೋವಿಡ್ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲಾಯಿತು.

ಗ್ರಾ.ಪಂ. ಕಚೇರಿಯಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು. ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ.ಎಂ. ದೇವೇಂದ್ರಪ್ಪ, ಬಿ.ಕೆ. ಮಹೇಶ್ವರಪ್ಪ, ಎಂ.ವಿ. ನಾಗರಾಜ್, ಡಿ.ಎಂ. ಹರೀಶ್, ಕೆ.ಎಂ. ರಾಮಪ್ಪ, ನಿಟ್ಟುವಳ್ಳಿ ಕರಿಬಸಪ್ಪ, ಪಿಡಿಓ ದಾಸರ ರವಿ, ಗ್ರಾ.ಪಂ.ನ ಬಿ. ದಾನಪ್ಪ, ಬಿ. ಮೌನೇಶ್, ಶೇಖರನಾಯ್ಕ, ಮುತ್ತು, ಬಸವರಾಜಯ್ಯ, ರಂಗನಾಥ್, ಬಸವರಾಜ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸ.ಹಿ.ಪ್ರಾ ಶಾಲೆಯಲ್ಲಿ 65ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಭುವನೇಶ್ವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಶಿಕ್ಷಕ ಮಲ್ಲಿಕಾರ್ಜುನ್ ಅವರು ಕನ್ನಡ ನಾಡು, ನುಡಿ ಕುರಿತು ಮಾತನಾಡಿ, ನಂತರ ಗಂಧದ ಗುಡಿ ಚಲನಚಿತ್ರದ ಹಾಡು ಹಾಡಿ ಗಮನ ಸೆಳೆದರು.

ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕ ಕರಿಬಸಪ್ಪ, ಶಿಕ್ಷಕರಾದ ಶ್ರೀನಿವಾಸ್ ರೆಡ್ಡಿ, ಗುಡ್ಡಪ್ಪ, ಲೋಕೇಶ್, ಲಿಂಗರಾಜ್, ದೀಪಾ, ವೀಣಾ, ಕುಸುಮಾ ಪಾಲ್ಗೊಂಡಿದ್ದರು.

## ರಾಣೇಬೆನ್ನೂರಿನ ಭುವನೇಶ್ವರಿ ಆದರ್ಶ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ



ರಾಣೇಬೆನ್ನೂರು, ನ.3- ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆ ಕೊಡಿಯಾಲ ಹೊಸಪೇಟೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಪುಟ್ಟಮ್ಮ ಹಿರೇಮಠ, ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ್ ಬಾವಿಕಟ್ಟಿ, ಸಹ ಶಿಕ್ಷಕರುಗಳಾದ ಶಿವಯ್ಯ ಹಿರೇಮಠ, ದೇವರಾಜ್ ಮಲ್ಲಾಪುರ, ಎಸ್.ರೇಣುಕಮ್ಮ, ಸಿ.ರೇಖಾ ಮತ್ತು ಅಡುಗೆ ಸಹಾಯಕರಾದ ಯಶೋದಮ್ಮ ಚಕ್ರಸಾಲಿ, ಅನುಸೂಯಮ್ಮ, ಹಾಲಮ್ಮನವರ್ ಉಪಸ್ಥಿತರಿದ್ದರು.

## ದಾವಣಗೆರೆ ವಿವಿಯಲ್ಲಿ ರಾಷ್ಟ್ರೀಯ ಏಕತೆ ದಿನ ಮತ್ತು ವಾಲ್ಮೀಕಿ ಜಯಂತಿ



ದಾವಣಗೆರೆ, ನ.3- ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಏಕತೆ ದಿನ-2020 ಮತ್ತು ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು.

ವಿವಿಯ ರಿಜಿಸ್ಟ್ರಾರ್ ಡಾ.ಬಸವರಾಜ ಬಣಕಾರ್ ಅವರು, ಶ್ರೀ ವಾಲ್ಮೀಕಿ ಮತ್ತು ಶ್ರೀ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಮೌಲ್ಯಗಳನ್ನು ಪ್ರಸ್ತುತ ಪಡಿಸಿದರು ಮತ್ತು ಈ ಮಹಾನ್ ವ್ಯಕ್ತಿಗಳ ಮೌಲ್ಯಗಳನ್ನು ಪ್ರಸ್ತುತ ಪೀಳಿಗೆಯಲ್ಲಿ ಹೇಗೆ ಉಪಯುಕ್ತವಾಗಿವೆ ಎಂಬುದರ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ವಿವಿಯ ಡೀನ್ ಪ್ರೊ.ರಂಗಪ್ಪ ಮತ್ತು ಪ್ರೊ.ವಿಶ್ವನಾಥ್ ಅವರೂ ಸಹ ಮಾತನಾಡಿದರು.

ಕಾರ್ಯಕ್ರಮದಲ್ಲಿ ಡೀನ್ ಪ್ರೊ.ವಿ.ಕುಮಾರ್ ಮತ್ತು ಪ್ರೊ.ಲಕ್ಷ್ಮಣ್, ಪ್ರೊ. ಗೋವಿಂದಪ್ಪ, ಡಾ.ಶಶಿಧರ್, ಡಾ.ಮಲ್ಲಿಕಾರ್ಜುನ್, ಕುಮಾರ್ ಸಿದ್ದಮಲ್ಲಪ್ಪ ಹಾಗೂ ಇತರೆ ಬೋಧಕ ಮತ್ತು ಬೋಧಕೇತರ ಮತ್ತು ಏಜೆನ್ಸಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಗುರುಕುಲ ರೆಸಿಡೆನ್ಷಿಯಲ್ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ




ದಾವಣಗೆರೆ, ನ.3- ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ಬಕ್ಕೇಶ್ವರ ಕಲ್ಯಾಣ ಮಂಟಪದ ಮುಂಭಾಗದಲ್ಲಿರುವ ಗುರುಕುಲ ರೆಸಿಡೆನ್ಷಿಯಲ್ ಸ್ಕೂಲ್‌ನಲ್ಲಿ 65ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕೆ.ಜಿ. ಯಲ್ಲಪ್ಪ, ಮಹಬೂಬ್ ಬಾಷಾ, ಸ್ಕೂಲ್‌ನ ಆಡಳಿತಾಧಿಕಾರಿ ನಸ್ರೀನ್‌ಖಾನ್, ಕಾರ್ಯದರ್ಶಿ ಅಬ್ದುಲ್ಲಾ, ಮುಖ್ಯೋಪಾಧ್ಯಾಯರಾದ ರೇಖಾ ಪಾಟೀಲ್, ನಾಗರತ್ನ, ಸಂದೀಪ್, ಶ್ವೇತಾ ಸೇರಿದಂತೆ ಸಹ ಶಿಕ್ಷಕರು ಮತ್ತು ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ಕನ್ನಡ ಚಳುವಳಿಗಳಿಗೆ ಶಕ್ತಿ ತುಂಬಿದ ನೆಲ ದಾವಣಗೆರೆ

ಮಧ್ಯ ಕರ್ನಾಟಕದ ದಾವಣಗೆರೆಯು ಕನ್ನಡ ನಾಡಿನ ಏಕೀಕರಣ ಮತ್ತು ಗೋಕಾಕ್ ಚಳವಳಿಗೆ ಶಕ್ತಿ ತುಂಬಿದ ನೆಲ. ಕನ್ನಡಕ್ಕಾಗಿ ಇಲ್ಲಿ ನಿರಂತರ ಹೋರಾಟ, ಸತ್ಯಾಗ್ರಹಗಳಾಗಿವೆ ಎಂಬ ಚರಿತ್ರೆಯೇ ರೋಮಾಂಚನಕಾರಿ.

ಈ ಭಾಗದ ಅನೇಕ ಮಹನೀಯರು ಕನ್ನಡಕ್ಕಾಗಿ ಸಮರ್ಪಣಾ ಮನೋಭಾವ ದಿಂದ ಹೋರಾಡಿದ್ದಾರೆ. ವೈಯಕ್ತಿಕ ಬದುಕು ಬದಿಗಿಟ್ಟು ನಿಸ್ವಾರ್ಥ ಕೆಲಸ ಮಾಡಿದ್ದಾರೆ. ಉಪವಾಸ ಮಾಡುವುದರಿಂದ ಹಿಡಿದು ಜೈಲು ಪಾಲಾಗುವವರೆಗೂ ಕನ್ನಡವನ್ನೇ ಉಸಿರಾಡಿದ್ದಾರೆ !!.



ಸಂಗ್ರಹ ಚಿತ್ರ

ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿ ದಂತೆ ದಾವಣಗೆರೆಯಲ್ಲಿ ನಡೆದ ಎರಡು ಮಹಾ ಅಧಿವೇಶನಗಳು ಮಹತ್ವದ ತಿರುವನ್ನು ನೀಡಿದ್ದವು. ಅಖಂಡ ಕರ್ನಾಟಕ ನಿರ್ಮಾಣ ಪರಿಷತ್ ನೇತೃತ್ವದಲ್ಲಿ 1946 ಮತ್ತು 1951 ರಲ್ಲಿ ರಾಜನಹಳ್ಳಿ ಹನುಮಂತಪ್ಪ ಛತ್ರದಲ್ಲಿ ಸಮಾವೇಶಗೊಂಡಿದ್ದ ಅಧಿವೇಶನಗಳಲ್ಲಿ ಮಹತ್ವದ ನಿರ್ಣಯಗಳನ್ನು ಅಂಗೀಕರಿಸಿ ಹೋರಾಟ ಚುರುಕುಗೊಳಿಸಲಾಗಿತ್ತು. ನಾಡೋಜ ಪಾಟೀಲ್ ಪುಟ್ಟಪ್ಪ, ಜಯದೇವಿ ತಾಯಿ ಲಿಗಾಡೆ, ಹಳ್ಳಿಕೇರಿ ಗುದ್ಲೆಪ್ಪ ಮುಂತಾದವರು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಏಕೀಕರಣ ಹೋರಾಟದ ವಿಷಯ ಪ್ರಸ್ತಾಪವಾದಾಗಲೆಲ್ಲ ದಾವಣಗೆರೆಯ ಪ್ರಥಮ ಶಾಸಕಿ ಬಳ್ಳಾರಿ ಸಿದ್ದಮ್ಮ, ನಗರಸಭೆಯ ಮಾಜಿ ಅಧ್ಯಕ್ಷ ಕಾರಡಗಿ ವೀರಭದ್ರಪ್ಪ, ಗುರುದೇವ್ ನಿಶಾನಿಮಠ, ಅ.ಹಿ.ಶಿವಾನಂದಸ್ವಾಮಿ, ಜಗಳೂರಿನ ಜೆ.ಅಹ್ಮದ್ ಇಮಾಂ ಅವರ ಹೆಸರು ನೆನಪಾಗುತ್ತದೆ. 20 ಕ್ಕೂ ಹೆಚ್ಚು ಇಂಥ ಪ್ರಮುಖರು ಏಕೀಕರಣದ ಹೋರಾಟದಲ್ಲಿ ಸಕ್ರಿಯರಾಗಿದ್ದರು.

ಕನ್ನಡ ಅಡಳಿತ ಭಾಷೆಯಾಗಬೇಕು ಎನ್ನುವ ವಿಷಯದಲ್ಲಿ 80 ರ ದಶಕದಲ್ಲಿ ನಡೆದ ಗೋಕಾಕ್ ಚಳುವಳಿಯಲ್ಲಂತೂ ದಾವಣಗೆರೆಯಲ್ಲಿ ನಡೆದ ಹೋರಾಟ ಇಡೀ ನಾಡಿಗೇ ಮಾದರಿಯಾಗಿತ್ತು. ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿ ನೀಡಿದ್ದ ಕರೆಗೆ ಓಗೊಟ್ಟು ಇಲ್ಲಿನ ಕನ್ನಡಪರ ಹೋರಾಟಗಾರರು, ಸಾಹಿತಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಚಳುವಳಿಗೆ ಧುಮುಕಿದ್ದರು. 1982-83 ರಲ್ಲಿ ಇಲ್ಲಿನ ಈಗಿನ ಮಹಾನಗರ ಪಾಲಿಕೆಯ ಮುಂಭಾಗದಲ್ಲಿ ನಡೆದ ಗೋಕಾಕ್ ಚಳುವಳಿ ಹೋರಾಟ ಶಿಬಿರವು ನಿರಂತರ 63 ದಿನಗಳ ಕಾಲ ಮುಂದುವರೆದು ಚರಿತ್ರೆಯನ್ನು ಸೃಷ್ಟಿಸಿತ್ತು, ಎಲ್ಲೆಲ್ಲೂ ಘೇರಾವ್, ರಸ್ತೆ ತಡೆ, ಶಾಸಕರ ಮನೆ ಮುಂದೆ ಧರಣಿ, ಉಪವಾಸ ಸತ್ಯಾಗ್ರಹಗಳು ನಡೆದು ಪರಿಣಾಮಕಾರಿ ಹೋರಾಟವಾಗಿ ರೂಪುಗೊಂಡಿತ್ತು ಕನ್ನಡಪರ ಹೋರಾಟಗಾರ ಬಂಕಾಪುರ ಚನ್ನಬಸಪ್ಪ , ಮಾಜಿ ಶಾಸಕ ಕೆ. ಮಲ್ಲಪ್ಪ, ಬಿ.ವಿ.ವೀರಭದ್ರಪ್ಪ, ಡಾ. ಎಂ.ಜಿ.ಈಶ್ವರಪ್ಪ, ಬಾ.ಮ.ಬಸವರಾಜಯ್ಯ, ಎಂ. ಚಂದ್ರಪ್ಪ, ರಿದಂ ಪ್ರಕಾಶ್, ಸೋಮನಾಥಯ್ಯ, ಶಿವಲಿಂಗಪ್ಪ ಮುಂತಾದವರು ಭಾಗಿಯಾಗಿದ್ದರು.

ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ವೈದ್ಯರು, ವಕೀಲರು, ವರ್ತಕರು, ತರಕಾರಿ ವ್ಯಾಪಾರಸ್ಥರು, ಬ್ಯಾಂಕ್ ಸಿಬ್ಬಂದಿಗಳು, ಹೋಟೆಲ್ ಸಂಘದವರು, ಆಟೋ ಚಾಲಕರು, ಕಾರ್ಮಿಕರು, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದ ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಆ ಸಂದರ್ಭದಲ್ಲಿ ಸಮಾಜವಾದಿ ಧುರೀಣ, ಮಾಜಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲರನ್ನೂ ಈ ಗೋಕಾಕ್ ಹೋರಾಟಕ್ಕೆ ಕನ್ನಡಪರ ಚಳುವಳಿಗಾರರು ಕರೆ ತಂದಿದ್ದರು. ನಗರದ ರೈಲು ನಿಲ್ದಾಣದ ಹಳಿಗಳ ಮೇಲೆ ಯುವ ಹೋರಾಟಗಾರರೊಂದಿಗೆ ಕುಳಿತು ಜೆ.ಹೆಚ್. ಪಟೇಲರು ಭಾಷೆಯ ಉಗಮ ಮತ್ತು ಬೆಳೆದು ಬಂದ ರೀತಿಯ ಬಗ್ಗೆ ಉಪನ್ಯಾಸ ನೀಡಿದ್ದರಂತೆ. ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ನಡೆದ ಗೋಕಾಕ್ ಚಳುವಳಿ ಕಾರ್ಯಕ್ರಮದಲ್ಲಿ ವರನಟ ಡಾ.ರಾಜ್ ಕುಮಾರ್, ವಿಷ್ಣುವರ್ಧನ್, ಅನಂತನಾಗ್, ಅಶೋಕ್, ಲೋಕೇಶ್ ಮುಂತಾದ ಚಲನಚಿತ್ರ ನಟರು ಪಾಲ್ಗೊಂಡು ಹೋರಾಟದ ಕಿಚ್ಚು ಹಚ್ಚಿದರು. ಹಿರಿಯ ಪತ್ರಕರ್ತ ನಾಡೋಜ ಪಾಟೀಲ್ ಪುಟ್ಟಪ್ಪ, ಸಾಹಿತಿ ಚಂದ್ರಶೇಖರ್ ಪಾಟೀಲರಂಥವರೂ ಚಳುವಳಿಯ ಭಾಗವಾಗಿದ್ದರು. ಅಂದಿನ ಕಾರ್ಯಕ್ರಮಕ್ಕಾಗಿ 1 ಟ್ರ್ಯಾಕ್ಟರ್ ಎಳನೀರು, ಸುಮಾರು 200 ಪಾಕೆಟ್ ಊಟ ತರಲಾಗಿತ್ತಂತೆ.

1982ರ ಅಂತ್ಯದಲ್ಲಿ ಗೋಕಾಕ್ ಚಳುವಳಿಯಲ್ಲಿ ಬಾಯಿಗೆ ಬಟ್ಟೆ ಕಟ್ಟಿಕೊಂಡು ಮೌನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ದಾವಣಗೆರೆಯ ಬಿ.ವಿ ವೀರಭದ್ರಪ್ಪ, ಡಾ.ಎಂ.ಜಿ.ಈಶ್ವರಪ್ಪ, ಬಾ.ಮ ಬಸವರಾಜಯ್ಯ, ಮೋತಿ ಜಯಪ್ರಕಾಶ್, ರಿದಂ ಪ್ರಕಾಶ್, ಶಂಕರ್ ಎಲಿಗಾರ್, ಪ್ರಕಾಶ್ ಬೆಳಗಾವಿ, ಟಿ.ಜಿ.ಶಿವಯೋಗಪ್ಪ, ಹೆಚ್.ಎಂ ಸೋಮನಾಥಯ್ಯ, ಎಂ ಚಂದ್ರಪ್ಪ, ಕೆ.ಎಂ. ಜಯದೇವಪ್ಪ, ಹೆಚ್.ಶಿವಾಜಿರಾವ್ ಸಾಳುಂಕೆ ಸೇರಿದಂತೆ ಸುಮಾರು 77 ಮಂದಿಯನ್ನು ಬಂಧಿಸಿ ಬಳ್ಳಾರಿ ಜೈಲಿಗೆ ಎರಡು ಬಸ್ಸಿನಲ್ಲಿ ಕಳುಹಿಸಲಾಗಿತ್ತು.

ಬಳ್ಳಾರಿ ಜೈಲಿಗೆ ಹೋಗುವ ಮಾರ್ಗವಾದ ಜಗಳೂರು, ಚಳ್ಳಕೆರೆ, ನಾಯಕನಹಟ್ಟಿ, ಈ ಎಲ್ಲಾ ಸ್ಥಳಗಳಲ್ಲಿ ಸ್ಥಳಿಯ ಜನರು ಹಣ್ಣುಗಳು, ಬಿಸ್ಕತ್, ಚಾಕಲೇಟ್ ಗಳನ್ನು ನೀಡಿ ಹೋರಾಟಗಾರರಿಗೆ ಶುಭಾಶಯಗಳನ್ನು ಹೇಳಿದ್ದರಂತೆ. ಕೆಲವು ದಿನಗಳ ಜೈಲುವಾಸದ ನಂತರ ಜಾಮೀನಿನ ಮೇಲೆ ಬಿಡುಗಡೆಯಾಗಿ ಹೊರ ಬಂದಾಗ ಒಂದು ಪ್ರತ್ಯೇಕ ಬಸ್‌ನಲ್ಲಿ ಅವರನ್ನು ಕರೆದುಕೊಂಡು ಬರಲಾಯಿತು. ಗೋಕಾಕ್ ಚಳುವಳಿಯು ಗ್ರಾಮಾಂತರ ಪ್ರದೇಶಗಳಿಗೂ ಹರಡಿಕೊಂಡಿತ್ತು. ಹಳ್ಳಿಗಳಿಂದ ಜನರು ಸ್ವಯಂಪ್ರೇರಿತರಾಗಿ ಬಂದು ವಾದ್ಯಗಳ ಸಮೇತ ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರಂತೆ.

ಒಟ್ಟಿನಲ್ಲಿ ಕನ್ನಡ ಕಟ್ಟುವ, ಬೆಳಸುವ ಕೈಂಕರ್ಯದಲ್ಲಿ ಹಾಗೂ ನಾಡಿನ ನೆಲ- ಜಲ- ಭಾಷೆಗೆ ಧಕ್ಕೆ ಬಂದಾಗ ಒಕ್ಕೊರಲಿನಿಂದ ಹೋರಾಟ ಮಾಡುವ ವಿಷಯದಲ್ಲಿ ದಾವಣಗೆರೆಯ ಪಾತ್ರ ಗಮನಾರ್ಹವಾಗಿದೆ.



- ಎಲ್.ಜಿ.ಮಧುಕುಮಾರ್,
ಲೇಖಕರು. ಬಸವಾಪಟ್ಟಣ
9448786664,
8861655989

## ನಂದಿಗುಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಾಲ್ಮೀಕಿ ಜಯಂತಿ



ಹರಿಹರ, ನ.3- ಪ್ರಾಥಮಿಕ ಆರೋಗ್ಯ ಕೇಂದ್ರ ನಂದಿಗುಡಿಯಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಡಾ. ಕಾರ್ತಿಕ್, ಶುಶ್ರೂಷಕಿ ಶ್ರುತಿ, ಹಿರಿಯ ಪುರುಷ ಆರೋಗ್ಯ ಸಹಾಯಕರಾದ ಮಂಜುನಾಥ, ಕಿರಿಯ ಪುರುಷ ಆರೋಗ್ಯ ಸಹಾಯರಾದ ಶಿವಶಂಕರ್, ಫಾರ್ಮಾಸಿಸ್ಟ್ ಸಿ.ಜಿ. ಪವನಕುಮಾರ್ ಹಾಜರಿದ್ದರು.

## ರಾಣೇಬೆನ್ನೂರಿನ ಶ್ರೀ ಮಾತಾ ಪಬ್ಲಿಕ್ ಶಾಲೆ : ರಾಜ್ಯೋತ್ಸವ




ರಾಣೇಬೆನ್ನೂರು, ನ.3- ನಗರದ ಶ್ರೀ ಮಾತಾ ಪಬ್ಲಿಕ್ ಶಾಲೆಯಲ್ಲಿ 65 ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಶಾಲಾ ಸದಸ್ಯ ಗಣೇಶ ಕರಬಣ್ಣನವರ, ಮುಖ್ಯಸ್ಥರಾದ ಎಸ್. ಚನ್ನಬಸಪ್ಪ, ಶಿಕ್ಷಕಿಯರಾದ ಶ್ಯಾಮಿಲಿ ಕಡೂರ, ಬಿ.ಕೆ. ಶಿಲ್ಪಾ, ಕೆ. ಪುಷ್ಪಲತಾ ಹಾಜರಿದ್ದರು.

## ಕರವೇಯಿಂದ ರಾಜ್ಯೋತ್ಸವ

ದಾವಣಗೆರೆ, ನ.3- ನಗರದ ಎಂ.ಸಿ. ಮೋದಿ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ 65ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆಯಾ ರಾಜ್ಯ ಭಾಷೆಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು. ಧ್ವಜಾರೋಹಣವನ್ನು ಪತ್ರಕರ್ತ ಚನ್ನಬಸವ ಶೀಲವಂತ್ ನಡೆಸಿ ಮಾತನಾಡಿ, ಆಂಗ್ಲ ಭಾಷೆಯ ನಾಮಫಲಕಗಳ ವಿರುದ್ಧ ಹೋರಾಟ ನಡೆಸುತ್ತಾ ಬಂದಿದ್ದರೂ, ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿ ಎಂದರು.

ವಾಸುದೇವ ರಾಯ್ಕರ್, ಮಲ್ಲಿಕಾರ್ಜುನ, ಕೆ.ಜಿ. ಬಸವರಾಜ, ಸುರೇಶ್, ಲೋಕೇಶ್, ಹನುಮಂತ, ಸಂತೋಷ, ರಾಘವೇಂದ್ರ, ತುಳಜಾರಾಮ್, ಧೀರೇಂದ್ರ, ಗೋಪಾಲ ದೇವರಮನಿ, ಖಾದರ್, ಜೈನ್ ಭಾರತಿ, ಗಜೇಂದ್ರ, ಮಂಜುನಾಥ, ಬಸವರಾಜ್, ಕರಿಬಸವರಾಜ್, ಗಿರೀಶ್ ಕುಮಾರ್, ಬಸಮ್ಮ, ಮಂಜುಳಮ್ಮ, ಹೇಮಲತಾ, ರೇಖಾ, ಮಂಜುಳಾ, ರಾಮು, ಉಮೇಶ, ರವಿಕುಮಾರ, ಪರಮೇಶ್ ಇನ್ನಿತರರಿದ್ದರು.

## ಕೊಂಡಜ್ಜಿ ಶಾಲೆಯಲ್ಲಿ ರಾಜ್ಯೋತ್ಸವ

ಹರಿಹರ, ನ.3- ಕೊಂಡಜ್ಜಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 65ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಚರಿಸಲಾಯಿತು.

ಕನ್ನಡಾಂಬೆ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಮಾಲೆ ಅರ್ಪಿಸುವುದರೊಂದಿಗೆ ಪೂಜೆ ಸಲ್ಲಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಹೆಚ್. ಗಂಗಾಧರ್, ಉಪಾಧ್ಯಕ್ಷ ಜಿ. ಪರಮೇಶ್ವರಪ್ಪ, ಸದಸ್ಯರಾದ ಜಿ.ಎನ್. ಪರಶುರಾಮ, ಮಂಜುಳಾ ಬಾಯಿ, ಗ್ರಾಮದ ಹಿರಿಯರಾದ ಈರಣ್ಣ ಭಾಗವಹಿಸಿದ್ದರು.

ಶಿಕ್ಷಕರುಗಳಾದ ಜೆ. ಶಾಂತಕುಮಾರಿ, ಕೆ. ಸಾವಿತ್ರಮ್ಮ, ಸಿ. ಜ್ಯೋತಿ, ಜಾಕೀರ್ ಹುಸೇನ್, ಹೆಚ್. ಅಂಜನಾದೇವಿ, ಬಿ. ಚಂದ್ರಮ್ಮ, ಎಸ್. ಉಷಾ ಭಾಗವಹಿಸಿದ್ದರು. ಮುಖ್ಯ ಶಿಕ್ಷ ಬಿ. ಹನುಮಂತಪ್ಪ ಶುಭಾಶಯ ತಿಳಿಸಿದರು.

## ಕೊಂಡಜ್ಜಿಯಲ್ಲಿ ವಾಲ್ಮೀಕಿ ಜಯಂತಿ

ಹರಿಹರ, ನ.2- ತಾಲ್ಲೂಕಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಎಸ್‌ಡಿಎಂಸಿ ಸದಸ್ಯರಾದ ಜಿ. ಪರಮೇಶ್ವರಪ್ಪ, ಜಿ.ಹೆಚ್. ಪರಶುರಾಮ ಮತ್ತು ಶಿಕ್ಷಕರುಗಳಾದ ಜೆ. ಶಾಂತಕುಮಾರಿ, ಸಿ. ಜ್ಯೋತಿ, ಜಾಕೀರ್ ಹುಸೇನ್, ಹೆಚ್. ಅಂಜನಾದೇವಿ, ಬಿ. ಚಂದ್ರಮ್ಮ, ಎಸ್. ಉಷಾ ಹಾಗೂ ಮುಖ್ಯ ಶಿಕ್ಷಕ ಬಿ. ಹನುಮಂತಪ್ಪ ಭಾಗವಹಿಸಿದ್ದರು.

## ಏಕೀಕರಣದ ರೂವಾರಿಗಳ ಸ್ಮರಣೆ ಅತ್ಯಗತ್ಯ

ಕನ್ನಡ ರಾಜ್ಯೋತ್ಸವ ನವೆಂಬರ್ 1 ರಂದು ಕರ್ನಾಟಕ ಏಕೀಕರಣದ ರೂವಾರಿಗಳ ಸ್ಮರಣೆ ಅತ್ಯಗತ್ಯ. ನಮ್ಮ ಶಾಲಾ ವಿದ್ಯಾರ್ಥಿಗಳು ನಮ್ಮ ಕನ್ನಡ ರಾಜ್ಯೋತ್ಸವದ ಏಕೀಕರಣಕ್ಕಾಗಿ ಹೋರಾಡಿ ಮಡಿದವರ ಬಗ್ಗೆ ಸ್ವಲ್ಪಮಟ್ಟಿಗಾದರೂ ತಿಳಿದುಕೊಳ್ಳುವುದು ಅವಶ್ಯ. ನಾಡಿನ ಏಕೀಕರಣದ ರೂವಾರಿಗಳ ತ್ಯಾಗ, ಬಲಿದಾನದ ಪ್ರತೀಕವೇ ನಮ್ಮ ರಾಜ್ಯ ಕನ್ನಡಮಯ ಕರ್ನಾಟಕವಾದುದು.




ಇಂದು ನಾವೆಲ್ಲ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ನಮ್ಮದು ಕೃಷ್ಣ, ಕಾವೇರಿ, ತುಂಗೆಯರ ನಾಡು, ಕಲೆ ಸಂಸ್ಕೃತಿಗಳ ಬೀಡು. ಭವ್ಯ ಪ್ರಾಕೃತಿಕ ಪರಂಪರೆಗಳ ವೈವಿಧ್ಯತೆಯಲ್ಲಿ ಏಕತೆಯ ಸಾಕ್ಷಾತ್ಕಾರದ ಈ ನಾಡು ಕನ್ನಡ ಕರುನಾಡು. ಇಂತಹ ಕನ್ನಡ ನಾಡಿನ ಸಾಕ್ಷಾತ್ಕಾರ, ಉದ್ಭವ, ರಚನೆಯ ಬಗೆಗೆ ಹಾಗೂ ಈ ನಾಡಿನ ಏಕೀಕರಣಕ್ಕೆ ಕಾರಣರಾದವರನ್ನು ಇಂದು ಗುರು ದ್ರೋಣಾಚಾರ್ಯ ಸಮ್ಮಾನ ಪುರಸ್ಕೃತ ಚಿತ್ರಕಲಾವಿದ ಡಾ. ಜಿ.ಜೆ. ಮೆಹೆಂದಳೆಯವರು ಕೋಲ್ಯಾಜ್ ಚಿತ್ರ ರಚನೆಯ ಮೂಲಕ ಮುಂದಿನ ಪೀಳಿಗೆಗೆ ಇವರನ್ನು ನೆನಪಿಸುವ ಪ್ರಯತ್ನ ಮಾಡುತ್ತಿದ್ದಾರೆ.

ನಮ್ಮ ದೇಶ ಅಗಸ್ಟ್ 15, 1947 ರಂದು ಸ್ವಾತಂತ್ರ್ಯ ಪಡೆಯಿತು. ಆಗ ಇಡೀ ದೇಶ ಸಂಭ್ರಮಿಸಿತು. ದೇಶದ ಮುಂದೆ ಹಲವಾರು ಸಮಸ್ಯೆಗಳು ತಲೆದೋರಿದ್ದವು. ಒಂದೆಡೆ ನಿರಾಶ್ರಿತರ ಸಮಸ್ಯೆ, ಸಂವಿಧಾನ ರಚನೆ, ಭಾಷಾ ಸಮಸ್ಯೆ ಹೀಗೆ ಹತ್ತು ಹಲವಾರು. ಆಗಿನ ಪ್ರಧಾನಿ ಜವಾಹರಲಾಲ್ ನೆಹರೂರವರು ಬಾಷಾ ಸಮಸ್ಯೆ ಪರಿಹಾರಕ್ಕೆ ಡಾ.ಫಜಲ್ ಅಲಿಯವರ ನಾಯಕತ್ವದಲ್ಲಿ ಒಂದು ಆಯೋಗವನ್ನು ರಚಿಸಿದರು. ಆ ಆಯೋಗ ಸತತ ಮೂರು ವರ್ಷಗಳ ಕಾಲ ಅಧ್ಯಯನ ನಡೆಸಿ 1956 ನವೆಂಬರ್‌ನಲ್ಲಿ ಭಾಷಾವಾರು ಪ್ರಾಂತದ ರಚನೆಗೆ ಶಿಫಾರಸು ಮಾಡಿತು. ಅದರ ಪ್ರಕಾರ ಕನ್ನಡ ಮಾತನಾಡುವವರನ್ನು ಒಳಗೊಂಡ ಪ್ರದೇಶವನ್ನು ಮೈಸೂರು ರಾಜ್ಯವೆಂದು ಹೆಸರಿಸಲಾಯಿತು. ಅದರ ರಚನೆಗೆ ಶ್ರಮಿಸಿದವರು ಹಲವರು. ಅಂತಹವರನ್ನು ನೆನಪಿಸಿಕೊಳ್ಳುವುದು ಇಂದು ನಮ್ಮೆಲ್ಲರ ಕರ್ತವ್ಯ. ನಂತರ 1973 ರಲ್ಲಿ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಡಿ. ದೇವರಾಜ ಅರಸುರವರು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದರು.

ಇಂದು ನಮ್ಮ ಕರ್ನಾಟಕ ಜಗತ್ತಿನ ಭೂಪಟದಲ್ಲಿ ರಾರಾಜಿಸುತ್ತಿದೆ. ಮುಂದೊಂದು ದಿನ ಇದೇ ಕನ್ನಡ ನಾಡಿನಲ್ಲಿ ಕನ್ನಡಿಗರೇ ಅಲ್ಪ ಸಂಖ್ಯಾತರಾಗುವ ದಿನ ದೂರವಿಲ್ಲ. ಹಾಗಾಗಿ ನಮ್ಮ ಕನ್ನಡದ ಕನ್ನಡ ಪರ ಸಂಘಟನೆಗಳು ಕನ್ನಡಕ್ಕೆ ಎಲ್ಲೇ ಚ್ಯುತಿ ಉಂಟಾದರೂ ಕನ್ನಡ ಭಾಷೆ, ನೆಲ, ಜಲಕ್ಕಾಗಿ ಹೋರಾಡಲು ಸದಾ ಸಿದ್ದರಾಗಿದ್ದಾರೆ. ನಾವು ನಮ್ಮ ಈ ನಾಡು ಏಕೀಕರಣಕ್ಕಾಗಿ ಹೋರಾಡಲು ಶ್ರಮಿಸಿದವರನ್ನು ನೆನಪಿಸಿಕೊಂಡು ನಮಿಸೋಣ.

-ಡಾ. ಜಿ.ಜೆ. ಮೆಹೆಂದಳೆ

## ಬಿಜೆಪಿ ಎಸ್ಟಿ ಮೋರ್ಚಾದಿಂದ ವಾಲ್ಮೀಕಿ ಜಯಂತಿ

ದಾವಣಗೆರೆ, ನ.3- ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾ ವತಿಯಿಂದ ವಾಲ್ಮೀಕಿ ಜಯಂತಿಯನ್ನು ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಎಸ್ಟಿ ಮೋರ್ಚಾ ಅಧ್ಯಕ್ಷ ಕೆ.ಎಸ್. ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಒಬಿಸಿ ಜಿಲ್ಲಾ ಅಧ್ಯಕ್ಷ ಬಸವರಾಜಪ್ಪ, ಯುವ ಮುಖಂಡರಾದ ಶ್ರೀನಿವಾಸ್ ದಾಸಕರಿಯಪ್ಪ, ಪಾಲಿಕೆ ನಾಮ ನಿರ್ದೇಶಿತ ಸದಸ್ಯರಾದ ತರಕಾರಿ ಶಿವು, ಪ್ರಧಾನ ಕಾರ್ಯದರ್ಶಿ ದುರುಗೇಶ್ ಸಿದ್ದಪ್ಪ ಉಪಸ್ಥಿತರಿದ್ದರು.

ಎಸ್.ಟಿ. ಮೋರ್ಚಾ ಮಂಡಲಿ ಅಧ್ಯಕ್ಷರುಗಳಾದ ಪೇಟೆ ಹನುಮಂತಪ್ಪ, ಜೆಸಿಬಿ ಹನುಮಂತಪ್ಪ, ಹಾಲೇಶ್ ಬೇವಿನಹಳ್ಳಿ, ಮುಖಂಡರುಗಳಾದ ಆನಗೋಡು ಅನಿಲ್, ಗುಮ್ಮನೂರು ಶ್ರೀನಿವಾಸ್, ಸುರೇಶ ಗೋಶಾಲೆ, ಚಂದಪ್ಪ ತಿಮ್ಮೇನಹಳ್ಳಿ, ಓಂಕಾರಪ್ಪ, ಹೆಬ್ಬಾಳ್ ಮಹೇಂದ್ರ, ಉಪ ಮೇಯರ್ ಸೌಮ್ಯ ನರೇಂದ್ರ ಕುಮಾರ್ ಇನ್ನಿತರರಿದ್ದರು.

### ದಿನದ ಚುಟುಕು

ಕಾಣದ ವೈರಾಣುವಿನಾಟಕೆ
ಕಲಿತೆವು ಪಾಠವು ಕಾರಣಕೆ
ಕುಗ್ಗಿತೆಂದು ಮೈ
ಮರೆಯದಿರಿ
ಹಿಗ್ಗುವುದಂತೆ
ಜಾಗ್ರತೆಯಲ್ಲಿರಿ.

- ವೀಕೆಎಂ

ಸುಭದ್ರ ಆರ್ಥಿಕ ಭವಿಷ್ಯತ್ತಿಗಾಗಿ

ಆತ್ಮೀಯರೇ, ಸಾಲದ EMI ನಿಂದ ಮುಕ್ತರಾಗಿ ಉಳಿತಾಯದ ಹೆಜ್ಜೆಗೆ ಸಾಗಲು ಸುಭದ್ರ ಹೂಡಿಕೆಯ ಮುಖಾಂತರ ಮಕ್ಕಳ ವಿದ್ಯಾಭ್ಯಾಸ, ಮದುವೆ ಹಾಗೂ ನಿವೃತ್ತಿ ಜೀವನದ ನೆಮ್ಮದಿಯ ಆರ್ಥಿಕ ಜೀವನಕ್ಕಾಗಿ ದುಡ್ಡನ್ನೇ ದುಡಿಸುವ ಮುಖಾಂತರ ಆರ್ಥಿಕವಾಗಿ ಮತ್ತು ಆರೋಗ್ಯಯುತವಾಗಿ ಸದೃಢರಾಗಲು ಒಮ್ಮೆ ಸಂಪರ್ಕಿಸಿ

ANVITH ENTERPRISES-MPK- Financial Advisor
P.J. Extenstion, Davanagere-577002
(M) - 99809 16126

WANTED

Required Cashier (Male) for Textile Business with Basic Knowledge of Managing and Cash Handling. salary Negotiable Interested can Apply with proper Resume along with Photo Attested.

ASHUJI DISTRIBUTORS
#323, Binny Company Road. Davanagere.

### ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಪಿ ಅಂಡ್ ಎಸ್. ಸಿ ನಂ. 09/2020

**ಅರ್ಜಿದಾರರು : ಶ್ರೀಮತಿ ಮಂಜಮ್ಮ ಕೋಂ ನಾಗಪ್ಪ,**
ವಯಸ್ಸು ಸುಮಾರು 28 ವರ್ಷ ವಾಸ: ಡೋರ್ ನಂ.135, ಕುರುಬರ ಬೀದಿ, ಆಲೂರು ಗ್ರಾಮ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

**ವಿರುದ್ಧ**

**ಎದುರುದಾರರು :** ಯಾರೂ ಇಲ್ಲ

**ಭಾರತೀಯ ಉತ್ತರಾಧಿಕಾರಿ ಅಧಿನಿಯಮ ಕಲಂ 373 (1) (ಬಿ) ರ ಅಡಿಯಲ್ಲಿ ನೀಡಲಾದ ಸಾರ್ವಜನಿಕ ಪ್ರಕಟಣಾ ನೋಟಿಸು**

**ಶ್ರೀಮತಿ ಕೆಂಚಮ್ಮ ಕೋಂ ಲೇಟ್** ನಿಬಗೂರು ಬಸಪ್ಪ ಇವರ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ವಿಲ್ಲನ್ನು ದಿನಾಂಕ : 27.11.2018 ರಲ್ಲಿ ಉಪ ನೋಂದಣಾಧಿಕಾರಿಗಳು, ಜಗಳೂರು ತಾಲ್ಲೂಕು ಇಲ್ಲಿ ನೋಂದಣಿಯಾಗಿರುವ ನೋಂದಾಯಿತ ವಿಲ್ ಯಾನೇ ಮರಣ ಶಾಸನ ಪತ್ರವನ್ನು ಮಾಡಿಸಿಟ್ಟಿದ್ದು ಇರುತ್ತದೆ. ನಂತರ ಸದರಿ ಶ್ರೀಮತಿ ಕೆಂಚಮ್ಮ ಕೋಂ ಲೇಟ್ ನಿಬಗೂರು ಬಸಪ್ಪ ಇವರು ದಿನಾಂಕ : 26.02.2019 ರಂದು ಮರಣ ಹೊಂದಿರುತ್ತಾರೆ.

ಕಾರಣ ಮೇಲ್ಕಂಡ ಪ್ರಕರಣದ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಪ್ರೊಬೆಟ್ ಆದೇಶ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ಶ್ರೀಮತಿ ಕೆಂಚಮ್ಮ ಕೋಂ ಲೇ. ನಿಬಗೂರು ಬಸಪ್ಪರವರ ವಾರಸುದಾರು ಯಾರಾದರೂ ಇದ್ದಲ್ಲಿ ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 5.12.2020 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

**ಷೆಡ್ಯೂಲ್**

ಜಗಳೂರು ತಾಲ್ಲೂಕು, ಬಿಳಿಚೋಡು ಹೋಬಳಿ, ಮರಿಕುಂಟೆ ಗ್ರಾಮಕ್ಕೆ ಸೇರಿದ ರಿ.ಸ.ನಂ.25/ಪಿ ರ ವಿಸ್ತೀರ್ಣ 2-33 ಎಕರೆ ಖರಾಬು 00-07 ಗುಂಟೆ ನಿಕ್ಕಿ ವಿಸ್ತೀರ್ಣ 2-26 (ಎಕರೆ ಎರಡು, ಗುಂಟೆ ಇಪ್ಪತ್ತಾರು) ಆಕಾರ ರೂ. 1-40 ಪೈಸೆ ಉಳ್ಳ ಜಮೀನಿಗೆ ಚಕ್ಕುಬಂದಿ:-

**ಪೂರ್ವಕ್ಕೆ : ಹಳ್ಳೇರ ನಾಗಪ್ಪ ಇವರ ಜಮೀನು, ಪಶ್ಚಿಮಕ್ಕೆ : ಪೋಸ್ಟ್ ಕಲ್ಲಪ್ಪ ಇವರ ಜಮೀನು**
**ಉತ್ತರಕ್ಕೆ : ಲೆಕ್ಕದರ ವೀರಪ್ಪನವರ ಜಮೀನು, ದಕ್ಷಿಣಕ್ಕೆ : ಹೊಟ್ಟೆ ನಿಂಗಪ್ಪಇವರ ಜಮೀನು**

**ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಈ ದಿನಾಂಕ 2.11.2020 ರಂದು ನೀಡಲಾಗಿದೆ.**
**ನ್ಯಾಯಾಲಯದ ಆದೇಶದ ಮೇರೆಗೆ,**

**ಅರ್ಜಿದಾರರ ಪರ ವಕೀಲರು**
(ಕೆ.ವಿ.ರುದ್ರೇಶ್), (ಎಸ್.ಎಂ.ಅಜ್ಜಯ್ಯ)
ಸ್ಥಳ : ದಾವಣಗೆರೆ

**ಮುಖ್ಯ ಆಡಳಿತಾಧಿಕಾರಿ,**
ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಾವಣಗೆರೆ
ದಿನಾಂಕ : 2/11/2020

### ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಪಿ ಅಂಡ್ ಎಸ್. ಸಿ ನಂ. 11/2020

**ಅರ್ಜಿದಾರರು :** 1) **ಬಸಪ್ಪ ಯಾನೇ ಬಸಣ್ಣ ಬಿನ್ ಲೇಟ್ ಹನುಮಂತಪ್ಪ,** ವಯಸ್ಸು ಸುಮಾರ 65 ವರ್ಷ,
2) **ಶರಣಪ್ಪ ಬಿನ್ ಲೇಟ್ ಹನುಮಂತಪ್ಪ,** ವಯಸ್ಸು ಸುಮಾರು 62 ವರ್ಷ
3) **ಜಯ್ಯಪ್ಪ ಬಿನ್ ಲೇಟ್ ಹನುಮಂತಪ್ಪ,** ವಯಸ್ಸು ಸುಮಾರು 57 ವರ್ಷ
4) **ರತ್ನಮ್ಮ ಬಿನ್ ಲೇಟ್ ಹನುಮಂತಪ್ಪ ಕೋಂ ನಾಗಪ್ಪ** ವಯಸ್ಸು ಸುಮಾರು 53 ವರ್ಷ
5) **ಲಕ್ಕಮ್ಮ ಕೋಂ ಲೇಟ್ ಹನುಮಂತಪ್ಪ** ವಯಸ್ಸು ಸುಮಾರು 75 ವರ್ಷ, ಎಲ್ಲರ ವಾಸ : ಉದ್ದಗಟ್ಟ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.

**ವಿರುದ್ಧ**

**ಎದುರುದಾರರು :** ಯಾರೂ ಇಲ್ಲ

**ಭಾರತೀಯ ಉತ್ತರಾಧಿಕಾರಿ ಅಧಿನಿಯಮ ಕಲಂ 373 (1) (ಬಿ) ರ ಅಡಿಯಲ್ಲಿ ನೀಡಲಾದ ಸಾರ್ವಜನಿಕ ಪ್ರಕಟಣಾ ನೋಟಿಸು**

ಭೀಮಪ್ಪ ಬಿನ್ ಚಿಕ್ಕಪ್ಪ ಇವರು ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ವಿಲ್ಲನ್ನು ಹನುಮಂತಪ್ಪ ಬಿನ್ ಸಣ್ಣ ಭೀಮಯ್ಯ ಇವರಿಗೆ ದಿನಾಂಕ : 20.07.1981 ರಂದು ಉಪ ನೋಂದಣಾಧಿಕಾರಿಗಳು, ಜಗಳೂರು ತಾಲ್ಲೂಕು ಇಲ್ಲಿ ನೋಂದಣಿಯಾಗಿರುವ ನೋಂದಾಯಿತ ವಿಲ್ ಯಾನೇ ಮರಣ ಶಾಸನ ಪತ್ರವನ್ನು ಮಾಡಿಸಿಟ್ಟಿದ್ದು ಇರುತ್ತದೆ. ಈಗ ಸದರಿ ಭೀಮಪ್ಪ ಬಿನ್ ಸಣ್ಣ ಚಿಕ್ಕಪ್ಪ ಇವರು ದಿನಾಂಕ : 01.03.2008 ರಂದು ಹಾಗೂ ಹನುಮಂತಪ್ಪ ಬಿನ್ ಸಣ್ಣ ಭೀಮಯ್ಯ ಇವರು ದಿನಾಂಕ 10.06.1995 ರಂದು ಮರಣ ಹೊಂದಿರುವುದರಿಂದ ಮೇಲ್ಕಂಡ ಪ್ರಕರಣದ ಅರ್ಜಿದಾರರು ಸದರಿ ಹನುಮಂತಪ್ಪನ ವಾರಸುದಾರರಾಗಿರುವದರಿಂದ ಘನ ನ್ಯಾಯಾಲಯದಲ್ಲಿ ಪ್ರೊಬೆಟ್ ಆದೇಶ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ಹನುಮಂತಪ್ಪ ಬಿನ್ ಸಣ್ಣ ಭೀಮಯ್ಯ ಇವರ ವಾರಸುದಾರರು ಯಾರಾದರೂ ಇದ್ದಲ್ಲಿ ಹಾಗೂ ಸಾರ್ವಜನಿಕವಾಗಿ ಯಾರದಾದರೂ ತಕರಾರು ಇದ್ದಲ್ಲಿ ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ 5/12/2020 ರಂದು ಬೆಳಗ್ಗೆ 11-00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

**ಷೆಡ್ಯೂಲ್**

ಜಗಳೂರು ತಾಲ್ಲೂಕು, ಕಸಬಾ ಹೋಬಳಿ, ಉದ್ದಗಟ್ಟ ಗ್ರಾಮಕ್ಕೆ ಸೇರಿದ ರೀ.ಸರ್ವೆ.ನಂ.49/4 ರ ಖುಷ್ಕಿ ಜಮೀನು ವಿಸ್ತೀರ್ಣ 1 ಎಕರೆ 18 ಗುಂಟೆ ಜಮೀನಿಗೆ ಚಕ್ಕುಬಂದಿ:-

**ಪೂರ್ವಕ್ಕೆ : ಶಿವಸಂತಿ ಈಶ್ವರಪ್ಪ ಇವರ ಜಮೀನು, ಪಶ್ಚಿಮಕ್ಕೆ : ಮುದಕಪ್ಪರ ಪುಟ್ಟವ್ವಳ ಜಮೀನು**
**ಉತ್ತರಕ್ಕೆ : ಮುದಿ ಗುರುಸಿದ್ದಯ್ಯನ ಜಮೀನು, ದಕ್ಷಿಣಕ್ಕೆ ; ನಾಗಪ್ಪನ ಜಮೀನು**

**ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಈ ದಿನಾಂಕ 3.11.2020 ರಂದು ನೀಡಲಾಗಿದೆ.**
**ನ್ಯಾಯಾಲಯದ ಆದೇಶದ ಮೇರೆಗೆ,**

ಅರ್ಜಿದಾರರ ಪರ ವಕೀಲರು
**(ಕೆ.ವಿ.ರುದ್ರೇಶ್), (ಎಸ್.ಎಂ.ಅಜ್ಜಯ್ಯ)**
ಸ್ಥಳ : ದಾವಣಗೆರೆ

ಮುಖ್ಯ ಆಡಳಿತಾಧಿಕಾರಿ,
**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಾವಣಗೆರೆ**
ದಿನಾಂಕ : 3/11/2020

# ಪದವಿ ಪರೀಕ್ಷೆಗೆ ಗೈರಾದವರಿಗೆ ಮತ್ತೊಂದು ಅವಕಾಶಕ್ಕಾಗಿ ಒತ್ತಾಯ

## ಕುಲಸಚಿವರಿಗೆ ಎಬಿವಿಪಿ ಮನವಿ ಸಲ್ಲಿಕೆ

ದಾವಣಗೆರೆ, ನ.3- ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟ ಅಂತಿಮ ಪದವಿ ಪರೀಕ್ಷೆಗೆ ಗೈರಾದವರಿಗೆ ಮತ್ತೊಮ್ಮೆ ಪರೀಕ್ಷೆ ಬರೆಯುವ ಅವಕಾಶ ನೀಡುವಂತೆ ಕೋರಿ ವಿ.ವಿ. ಕುಲಪತಿ ಹಾಗೂ ಕುಲಸಚಿವರಿಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಮನವಿ ಸಲ್ಲಿಸಲಾಯಿತು.

ಪರೀಕ್ಷೆ ವೇಳೆ ಕೊರೊನಾ ಪೀಡಿತರಾಗಿಯೋ ಅಥವಾ ಬಸ್ಸುಗಳ ಕೊರತೆಯಿಂದಾಗಿಯೋ ಪರೀಕ್ಷೆಯಿಂದ ವಂಚಿತರಾಗಿ ಭವಿಷ್ಯದಲ್ಲಿ ಸಂಕಷ್ಟವನ್ನು ಅನುಭವಿಸುವಂತಾಗಿದೆ. ಇವರುಗಳಿಗೆ ಮತ್ತೊಮ್ಮೆ ಪರೀಕ್ಷಾ ಅವಕಾಶವನ್ನು ಕಲ್ಪಿಸಿಕೊಟ್ಟಲ್ಲಿ ಅವರ ಭವಿಷ್ಯಕ್ಕೆ ತೊಡಕುಂಟಾಗುವುದಿಲ್ಲ. ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕೂಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷಾ ವಂಚಿತರಿಗೆ ಸಪ್ಲಿಮೆಂಟರಿ ಬರೆಯುವವರೊಂದಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿತ್ತು.

ಅದರಂತೆ ದಾವಣಗೆರೆ ವಿವಿ ಕೂಡ ವಂಚಿತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಕೋರಿ ಮನವಿ ಸಲ್ಲಿಸಿತು. ಮನವಿ ಸ್ವೀಕರಿಸಿದ ಕುಲಪತಿಗಳು ಹಾಗೂ ಕುಲಸಚಿವರು ಅಧಿಕಾರಿಗಳೊಂದಿಗೆ ಚರ್ಚಿಸಿ ಸದ್ಯದಲ್ಲೇ ಪರೀಕ್ಷಾ ವಂಚಿತರಿಗೆ ಸಪ್ಲಿಮೆಂಟರಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಪರಿಷತ್ ನಗರಾಧ್ಯಕ್ಷ ಪವನ್ ರೇವಣಕರ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ರಾಜೇಂದ್ರ, ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಕೇಶ್, ಚಿತ್ರದುರ್ಗ ಜಿಲ್ಲಾ ಸಂಚಾಲಕ ಸತೀಶ್, ದಾವಣಗೆರೆ ನಗರ ಕಾರ್ಯದರ್ಶಿ ಆಕಾಶ್ ಇಟಗಿ, ಕಾರ್ಯಕರ್ತರಾದ ಜಯಂತ್, ಹರೀಶ್, ಮಧು, ರಂಜಿತ್, ಭಾವನ, ಅಮೃತವರ್ಷಿಣಿ, ಕಿರಣ ಇನ್ನಿತರರಿದ್ದರು.

# ಯಲವಟ್ಟಿ : ಇನಾಯತ್‌ಗೆ ಸನ್ಮಾನ



ಮಲೇಬೆನ್ನೂರು, ನ. 3- ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ದಾಶ್ರಮದಲ್ಲಿ ಸೋಮವಾರ ಶ್ರೀ ಯೋಗಾನಂದ ಸ್ವಾಮೀಜಿ ಅವರು ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯ ಟಿ.ಇನಾಯತ್ ಉಲ್ಲಾ ಅವರನ್ನು ಸತ್ಕರಿಸಿದರು, ಸಿರಿಗನ್ನಡ ವೇದಿಕೆ ಅಧ್ಯಕ್ಷ ಕುಂದೂರು ಮಂಜಪ್ಪ, ಕಲಾವಿದ ಎಂ.ಶಿವಕುಮಾರ್, ವಿ.ಎನ್.ಮಂಜುನಾಥ್, ಅನಿಲ್ ಕ್ಲೆಮೆಂಟಾ ಈ ಸಂದರ್ಭದಲ್ಲಿ ಹಾಜರಿದ್ದರು,

# ಅವಳಲ್ಲವೇ



ಹೆತ್ತವಳವಳಲ್ಲವೇ
ಹೊತ್ತವಳವಳಲ್ಲವೇ
ತುತ್ತಿಟ್ಟವಳವಳಲ್ಲವೇ
ಮುತ್ತಿಟ್ಟವಳವಳಲ್ಲವೇ.

ಹಾಲುಣಿಸಿದವಳವಳಲ್ಲವೇ
ಲಾಲಿ ಹಾಡಿದವಳವಳಲ್ಲವೇ
ಜೋಲಿ ತೂಗಿದವಳವಳಲ್ಲವೇ
ಲಾಲಿಸಿ ಪಾಲಿಸಿದವಳವಳಲ್ಲವೇ.

ಹಡೆದವಳವಳಲ್ಲವೇ
ಒಡಹುಟ್ಟಿದವಳವಳಲ್ಲವೇ
ಒಡನಾಡಿಯಾದವಳವಳಲ್ಲವೇ
ನಡೆನುಡಿ ಕಲಿಸಿದವಳವಳಲ್ಲವೇ.


ಮನೆಯ ದೀಪವಳಲ್ಲವೇ
ಮನೆಯ ಬೆಳಗುವಳವಳಲ್ಲವೇ
ಮನೆಗೆಮಹಾಲಕ್ಷ್ಮೀಅವಳಲ್ಲವೇ
ಮನೆತನ ವೃಕ್ಷಕ್ಕೆ ಬೇರವಳಲ್ಲವೇ.

ಪ್ರಕೃತಿಯ ಪ್ರತಿರೂಪ ಅವಳಲ್ಲವೇ
ಸಂಸ್ಕೃತಿಯ ಜ್ಯೋತಿ ಅವಳಲ್ಲವೇ
ಅವಳಿಲ್ಲದೇ ನಾವ್ಯಾರಿಲ್ಲ ಅಲ್ಲವೇ
ಅವಳ ರಕ್ಷಣೆ ಹೊಣೆ ನಮ್ಮದಲ್ಲವೇ..

**- ಶಿವಮೂರ್ತಿ.ಹೆಚ್.**, ಕನ್ನಡ ಶಿಕ್ಷಕರು
ಶ್ರೀ ತರಳಬಾಳು ಜಗದ್ಗುರು
ರೆಸಿಡೆನ್ಸಿಯಲ್ ಸ್ಕೂಲ್
ಅನುಭವ ಮಂಟಪ, ದಾವಣಗೆರೆ.
shivamurthyh2012@gmail.com

# ಪದಗಳ ಒಳಗಿರುವ ಅನುಭಾವ ದರ್ಶನ ಮಾಡಿಸುವುದೇ ಕವಿತೆ

## ಕನ್ನಡಕಬ್ಬ-ಉಗಾದಿಹಬ್ಬ ಉಪನ್ಯಾಸದಲ್ಲಿ ಲೋಕೇಶ್ ಅಗಸನಕಟ್ಟೆ



ದಾವಣಗೆರೆ, ನ.3- ಕವಿತೆ ಎಂದರೇನು? ಅದನ್ನು ಯಾಕೆ ಬರೆಯಬೇಕು? ಹೇಗೆ ಬರೆಯಬೇಕು? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಾಗ ಆತ್ಮಾನುಸಂಧಾನದ ಬ್ರಹ್ಮಾನಂದ ಸಹೋದರ ಈ ಕವಿತೆ, ಒಂದು ಸಾಲಿನ ಕೆಳಗೆ ಮತ್ತೊಂದು ಸಾಲನ್ನು ಬರೆದು ಆ ಪದಗಳ ಒಳಗೆ ಇರುವ ಪದಾರ್ಥವನ್ನು ನಾವು ಕವಿತೆಯೆಂದು ಹೇಳಬಹುದು.

ಕೇವಲ ಪದಗಳ ಜೋಡಣೆಯ ಚಮತ್ಕಾರದಿಂದ ನೇರ ಸಮ್ಮೋಹನ ಮಾಡುವಾಗ, ಆಗುವ ಅನುಭವದ ಚಿತ್ರ ಹೇಳುವುದು ಕವಿತೆಯಲ್ಲ, ಆ ಪದಗಳ ಒಳಗಿರುವ ಅನುಭಾವವನ್ನು ದರ್ಶನ ಮಾಡಿಸುವುದು ಕವಿತೆಯೆಂದು ಖ್ಯಾತ ಕವಿ ಮತ್ತು ವಿಮರ್ಶಕರಾದ ಡಾ.ಲೋಕೇಶ್ ಅಗಸನಕಟ್ಟೆ ಅವರು ತಿಳಿಸಿದರು.

ಗ್ರಂಥ ಸರಸ್ವತಿ ಪ್ರತಿಭಾ ರಂಗವು ರಾಜ್ಯೋತ್ಸವದ ನಿಮಿತ್ತ ಹಮ್ಮಿಕೊಂಡಿದ್ದ ಅಂತರ್ಜಾಲ ಕನ್ನಡಕಬ್ಬ-ಉಗಾದಿಹಬ್ಬ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಕವಿತೆಯ ಹುಟ್ಟು ಮತ್ತು ಬೆಳವಣಿಗೆಯು ಓದುಗನಲ್ಲಿ ಮಾಡುವ ಪರಿಣಾಮ ಕುರಿತು ವಿವರಿಸಿದರು.

ದೊಡ್ಡ ಸಂಘ-ಸಂಸ್ಥೆಗಳು ಸರ್ಕಾರ ಮಾಡಬೇಕಾದ ಇಂತಹ ಕಾರ್ಯಕ್ರಮ ಗಳನ್ನು ಒಬ್ಬ ವ್ಯಕ್ತಿ ತನ್ನ ಕುಟುಂಬದ ಜೊತೆ ಸೇರಿ ಮಾಡುತ್ತಿರುವುದು ಕನ್ನಡಿಗರಾದ ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಮಧ್ಯ ಕರ್ನಾಟಕದ ಪ್ರಸಿದ್ಧ ನಗರಿ ದಾವಣಗೆರೆ ಯಲ್ಲಿ ಇರುವ ಗ್ರಂಥ ಸರಸ್ವತಿ ಪ್ರತಿಭಾ ರಂಗ ಎಂಬ ಸಂಸ್ಥೆ ಅದ್ಭುತ ಕಾರ್ಯಕ್ರಮವನ್ನು ಕಳೆದ ಮೂರು ವರ್ಷಗಳಿಂದ ಅವಿರತವಾಗಿ ಮಾಡಿಕೊಂಡು ಬರುತ್ತಿದೆ.

ಕೊರೊನಾ ಕಾರಣದಿಂದ ನಿಂತಿದ್ದ ಈ ಕಾರ್ಯಕ್ರಮವನ್ನು ಶಿವಕುಮಾರಸ್ವಾಮಿ ಕುರ್ಕಿಯವರು ಛಲಬಿಡದೇ ಜನರಿಗೆ ತಲುಪಿಸುವ ಸಲುವಾಗಿ ಅಂತರ್ಜಾಲದಲ್ಲಿ ಈ ಕಾರ್ಯಕ್ರಮವನ್ನು ಮುಂದಿನ 30 ದಿನಗಳ ಕಾಲ ನಡೆಸಿಕೊಡುವ ಮೂಲಕ 6 ಕೋಟಿ ಕನ್ನಡಿಗರ ಮನೆ ಮತ್ತು ಮನಗಳನ್ನು ತಲುಪಲು ಉತ್ತಮ ಕಾರ್ಯಕ್ರಮವನ್ನು ರೂಪಿಸಿದ್ದಾರೆ.

ಅದರ ಮೊದಲ ದಿನದ ಕಾರ್ಯಕ್ರಮದ ಉಪನ್ಯಾಸವನ್ನು ಡಾ. ಲೋಕೇಶ್ ಅಗಸನಕಟ್ಟೆ ಖ್ಯಾತ ಕವಿಗಳು ಮತ್ತು ವಿಮರ್ಶಕರು ಇವರು ನಡೆಸಿಕೊಟ್ಟರು.

65ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಅವರು ನೀಡಿದ ಉಪನ್ಯಾಸದಲ್ಲಿ ಕಾವ್ಯದ ದಿಕ್ಕು-ದೆಸೆಯ ಬಗ್ಗೆ ಮಾತನಾಡಿದರು.

ಶ್ರೀಯುತರು ಕವಿತೆ ಎಂದರೇನು? ಕವಿತೆ ಯಾರಿಗೆ, ಯಾಕೆ ಮತ್ತು ಯಾವಾಗ ಹುಟ್ಟಬೇಕು ಎಂಬುದನ್ನು ವಿವರವಾಗಿ ತಿಳಿಸಿದರು. ಪಂಪನಿಂದ ಹಿಡಿದು ಬೇಂದ್ರೆಯವರೆಗಿನ ಕವಿಗಳ ಅನುಭವ ಮತ್ತು ಅನುಭಾವದ ಬಗ್ಗೆ ಪ್ರಸ್ತಾಪಿಸಿದರು.

ಕವಿತೆ ಹೇಗಿರಬೇಕು ಎಂಬುದನ್ನು ಬೇಂದ್ರೆಯವರ ಭೃಂಗದ ಬೆನ್ನೇರಿ ಕವಿತೆಯ ಮೂಲಕ ವಿವರಿಸಿದರು. ಆನಂದ ಮತ್ತು ಸಂತೋಷಗಳು ಮನುಷ್ಯರಿಗೆ ಮಾತ್ರವಲ್ಲ. ಪ್ರಕೃತಿಗೂ ಇದೆ ಎಂಬುದನ್ನು ತಿಳಿಸಿದರು. ಬುದ್ಧ ಅಲ್ಲಮರನ್ನು ಪ್ರಸ್ತಾಪಿಸಿದ ಅವರು, ಶಬ್ದದೊಳಗಿನ ನಿಶ್ಯಬ್ದದ ಬಗ್ಗೆ ಹೇಳಿದರು.

ಕೊನೆಯದಾಗಿ ಈಗಿನ ಕವಿಗಳು ಮತ್ತು ಕವಿತೆಗಳ ಬಗ್ಗೆ ಮಾತನಾಡಿದ ಅವರು, ಈಗ ಬರೆಯುವವರ ಸಂಖ್ಯೆ ಹೆಚ್ಚಾಗಿದೆ. ಇದು ಖುಷಿಯ ವಿಚಾರವೇ ಆದರೂ ಅವು ಜನರ ಮನಸ್ಸಿನಲ್ಲಿ ಉಳಿಯದಿರುವುದಕ್ಕೆ ಕಾರಣ ಸ್ವಂತಿಕೆ ಇಲ್ಲದಿರುವುದು ಎಂದು ಹೇಳಿದರು.

ಕವಿ ಲೇಖಕ ಅಥವಾ ಬರಹಗಾರರ ಬದುಕು ಮತ್ತು ಬರಹಕ್ಕೆ ಸಾಮ್ಯತೆ ಇರಬೇಕು ಎಂದು ಹೇಳುವ ಮೂಲಕ ಕವಿಯ ನೈತಿಕತೆಯನ್ನು ಪ್ರಶ್ನಿಸಿದರು.

ಕು|| ಸ್ವರ್ಣಗೌರಿ ಸ್ವಾಗತಿಸಿದರು. ಶ್ರೀಮತಿ ಯಶಾ ದಿನೇಶ್ ಸುಮಧುರವಾಗಿ ಕನ್ನಡ ಗೀತೆಯನ್ನು ಹಾಡಿದರು ಮತ್ತು ಸುಶ್ರಾವ್ಯ ತಂಡದಿಂದ ಹಚ್ಚೇವು ಕನ್ನಡದ ದೀಪ ಹಾಡಲಾಯಿತು.

# ಸುವರ್ಣ ಕರ್ನಾಟಕ ವೇದಿಕೆಯಿಂದ 65 ನೇ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ.3- ಸುವರ್ಣ ಕರ್ನಾಟಕ ವೇದಿಕೆಯಿಂದ 65ನೇ ಕನ್ನಡ ರಾಜ್ಯೋತ್ಸವವನ್ನು ನಿಟುವಳ್ಳಿಯ ಶ್ರೀ ರಾಜೇಶ್ವರಿ ಬಡಾವಣೆಯಲ್ಲಿ ಸರಳವಾಗಿ ಆಚರಿಸಲಾಯಿತು.

ಧ್ವಜಾರೋಹಣವನ್ನು ವಕೀಲರಾದ ಮನೋಜ್‌ಕುಮಾರ್, ಪರಮೇಶ್ವರಪ್ಪ ಕುಂದೂರು ನೆರವೇರಿಸಿದರು. ಈ ಸಂದರ್ಭದಲ್ಲಿ ಪರಮೇಶ್ವರಪ್ಪ ಮಾತನಾಡಿ, ವರ್ಷಕ್ಕೆ ಒಮ್ಮೆ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಾರೆ. ಆದರೆ ಕೆಲವು ವಿದ್ಯಾವಂತರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಓದಿಸುತ್ತಿರುವುದರಿಂದ ಸರ್ಕಾರಿ ಶಾಲೆಗಳು ಅಳಿವಿನಂಚಿಗೆ ಹೋಗುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹೆಚ್. ಪರಶುರಾಮ್ ರಾಜ್ಯ ಉಪಾಧ್ಯಕ್ಷರು, ಮಂಜುನಾಥ್ ಇ., ಶಿವು, ಶಾಂತ್‌ಕುಮಾರ್, ಕಣಿವೇಶ್, ಪರಮೇಶ್, ಆಕಾಶ್, ಅಪ್ಪು ಮತ್ತಿತರರು ಭಾಗವಹಿಸಿದ್ದರು.

# ಮಾರ್ಕೆಟ್‌ನಲ್ಲಿ ಮಾಸ್ಕ್ ಅಭಿಯಾನ

**(1ನೇ ಪುಟದಿಂದ)** ವ್ಯಾಪಾರಿಗಳು, ವ್ಯಾಪಾರಿಗಳು, ಗ್ರಾಹಕರು, ಆಟೋ - ಬೈಕ್ ಸಂಚಾರಿಗಳು, ಪಾದಚಾರಿಗಳೂ ಸೇರಿದಂತೆ ಮಾಸ್ಕ್ ಧರಿಸದ 80ಕ್ಕೂ ಹೆಚ್ಚು ಜನರಿಗೆ ತಲಾ 250 ರೂ.ಗಳ ದಂಡ ವಿಧಿಸಲಾಯಿತು.

ಕೆಲವು ಬಟ್ಟೆ ಅಂಗಡಿಗಳಲ್ಲಿ ಸಾಮಾಜಿಕ ಅಂತರ ಇಲ್ಲದೇ ಇರುವುದು, ಜನ ಜಂಗುಳಿ ಹೆಚ್ಚಾಗಿರುವುದನ್ನು ಗಮನಿಸಿದ ಜಿಲ್ಲಾಧಿಕಾರಿ ಬೀಳಗಿ, ಸರದಿಯಲ್ಲಿ ಗ್ರಾಹಕರನ್ನು ಒಳಗೆ ಬಿಡಬೇಕು. ಮಾಸ್ಕ್‌ನಷ್ಟೇ ಅಂತರವೂ ಮುಖ್ಯ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನು ಮಂತರಾಯ, ನಗರಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಸೇರಿದಂತೆ ವಿವಿಧ ಅಧಿಕಾರಿಗಳು ಮಾಸ್ಕ್ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

## ಹೆಚ್ಚು ದಂಡ

**(1ನೇ ಪುಟದಿಂದ) ಪ್ರದೇಶದಲ್ಲಿ ಜಾಗೃತಿ ಮೂಡಿಸಲು ಅಭಿಯಾನ ನಡೆಸಲಾಗಿದೆ. ನಿರಂತರವಾಗಿ ಈ ಅಭಿಯಾನ ಮುಂದುವರೆಸಲಾಗುವುದು ಎಂದವರು ಹೇಳಿದ್ದಾರೆ. ಇದುವರೆಗೂ ಮಾಸ್ಕ್ ಹಾಗೂ ಅಂತರ ನಿಯಮಗಳನ್ನು ಪಾಲಿಸದ ಕಾರಣಕ್ಕಾಗಿ ಜಿಲ್ಲೆಯಲ್ಲಿ ಕೋಟಿ ರೂ.ಗಳಿಗೂ ಹೆಚ್ಚು ದಂಡ ವಸೂಲಿ ಮಾಡಲಾಗಿದೆ ಎಂದು ಬೀಳಗಿ ತಿಳಿಸಿದ್ದಾರೆ.**

## ಮನಸ್ಸಿಗೆ ಸೂಚನೆ ಕಾಲಬರುತಿಹುದು ಕಾಯೋ ಮುಂದೆ

ಕಾಲಬರುತಿಹುದು ಕಾಯೋ ಮುಂದೆ
ಹಲುಬುತ್ತ ಕೂರದಿರು ನೀನು ಹಿಂದೆ
ಶಿಲೆಯಂತೆ ಎದುರಿಸು ಸೋಲನಿಂದೆ
ಬಲವಾಗಿ ಗೆಲ್ಲು ಎಲ್ಲವನು ಮುಂದೆ

ಆಶಾ ಬೆಳಕು ಹೊಳೆಯುತಿರಲಿ
ನಿರಾಸೆ ಕಗ್ಗತ್ತಲನು ದೂಡುತಿರಲಿ
ಪರಮ ಶಕ್ತಿಯನು ನೀಡುತಿರಲಿ
ನಿರತ ಸನ್ಮಾರ್ಗದಿ ನಡೆಸುತಿರಲಿ

ಮನದ ದೃಢತೆಯ ಬೇರು ಜೀವನಕ್ಕೆ
ಮನ ಬಂಧ ಮೋಹಕವು ಈ ಜೀವಕೆ
ಮನದಲಿಡು ವಿಶ್ವಾಸ ಗೆಲ್ಲುವುದಕೆ
ಮನ ತುಡಿಯಲಿ ಗುರಿ ಮುಟ್ಟುವುದಕೆ

ಅವಸರವ ಬಿಟ್ಟು ಸಾಧಿಸೋ ಬಿಡದೆ
ತವಕ ತುಡಿತಗಳ ದೂಕು ಹಿಂದೆ
ನವ ಉತ್ಸಾಹದಲಿ ಚಿಮ್ಮುಮುಂದೆ
ಕಾವ ಸಿರಿಹರಿಯನು ನಂಬಿ ಇಂದೆ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಶೀಘ್ರದಲ್ಲೇ ಇನ್ನೊಂದು ಆರ್ಥಿಕ ಪ್ಯಾಕೇಜ್

**(1ನೇ ಪುಟದಿಂದ)** ನಡೆಸುತ್ತಿದ್ದೇವೆ ಎಂದವರು ತಿಳಿಸಿದ್ದಾರೆ.

ಬಂಡವಾಳ ಹೆಚ್ಚಿಸುವ ಸಲುವಾಗಿ ಹಣಕಾಸು ಸಚಿವಾಲಯ ಕಳೆದ ತಿಂಗಳು ಹಲವಾರು ಕ್ರಮಗಳನ್ನು ಪ್ರಕಟಿಸಿತ್ತು.

# ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರುಗೆ ಪ್ರಶಸ್ತಿ



ದಾವಣಗೆರೆ, ನ.3- ದಿ ನ್ಯೂಸ್ ಪೇಪರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ನ್ಯಾಷನಲ್ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಇವರ ಜಂಟಿ ಆಶ್ರಯದಲ್ಲಿ ಅಂತರರಾಷ್ಟ್ರೀಯ ಶುಶ್ರೂಷಕಿಯರ ದಿನಾಚರಣೆ ಸಂದರ್ಭದಲ್ಲಿ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವವರಿಗೆ ಪ್ರತಿಷ್ಠಿತ ಅಂತರರಾಷ್ಟ್ರೀಯ ನೋಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ಮದರ್ ತೆರೇಸಾ ರಾಷ್ಟ್ರೀಯ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದ್ದು, 2020ನೇ ಸಾಲಿನ ಈ ಪ್ರಶಸ್ತಿಗೆ ನಾಡಿನ ಹಿರಿಯ ಪತ್ರಕರ್ತರೂ ಆದ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಭಾಜನರಾಗಿದ್ದಾರೆ.

ಮದರ್ ತೆರೇಸಾ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾಗಿರುವ ಶಿವಾನಂದ ತಡಗೂರು ಅವರನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ, ಪ್ರಧಾನ ಕಾರ್ಯದರ್ಶಿ ಇ.ಎಂ. ಮಂಜುನಾಥ, ಖಜಾಂಚಿ ಮಾಗನೂರು ಮಂಜಪ್ಪ, ರಾಜ್ಯ ಘಟಕದ ನಿರ್ದೇಶಕ ಕೆ. ಚಂದ್ರಣ್ಣ ಅವರುಗಳು ಅಭಿನಂದಿಸಿದ್ದಾರೆ.

ನಿರಂತರ ಮತ್ತು ಸಕ್ರಿಯವಾಗಿ ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುವುದರ ಜೊತೆಗೆ ಪತ್ರಕರ್ತರ ಸಮಸ್ಯೆಗಳಿಗೆ ನೇರ ಸ್ಪಂದನೆ ನೀಡಿ ಅವರ ಬೇಕು-ಬೇಡಿಕೆಗಳ ಈಡೇರಿಕೆಗಾಗಿ ಶ್ರಮಿಸುತ್ತಿರುವ ಶಿವಾನಂದ ತಡಗೂರು ಅವರ ಸೇವೆ ಶ್ಲಾಘನೀಯ ಎಂದು ವೀರಪ್ಪ ಬಾವಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್ಪಿ ಆಫೀಸ್, ಆರ್‌ಟಿಒ ಆಫೀಸ್, ವಿಜಯನಗರ ಬಡಾವಣೆ, ರಾಜೀವ್‌ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಂಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕಪಕ್ಕ ಹಾಗೂ ಟೀಚರ್ಸ್ ಕಾಲೋನಿ ಮತ್ತು ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಗೂಡಂಗಡಿಗಳ ತೆರವು

**(1ನೇ ಪುಟದಿಂದ)** ಕಾಮಗಾರಿ ಪ್ರಗತಿಯಲ್ಲಿಯಲ್ಲಿರುವುದರಿಂದ ತೆರವು ಕಾರ್ಯ ನಡೆಸಲಾಗುತ್ತಿದೆ ಎನ್ನಲಾಗಿದೆ.

ಇಂದು ಬೆಳಿಗ್ಗೆ ತಾಲ್ಲೂಕು ದಂಡಾಧಿಕಾರಿ ಡಾ.ನಾಗವೇಣಿ ಮತ್ತು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರಾಜು ಡಿ.ಬಣಕಾರ್. ಪೊಲೀಸ್ ಉಪ ನಿರೀಕ್ಷಕ ಉಮೇಶ್ ಬಾಬು ಮತ್ತು ಪೊಲೀಸ್ ಸಿಬ್ಬಂದಿಗಳು, ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ಜೆಸಿಬಿಯೊಂದಿಗೆ ಅಂಗಡಿಗಳನ್ನು ತೆರವು ಗೊಳಿಸುವ ಕಾರ್ಯಾಚರಣೆ ನಡೆಸಿದರು.

# ಹರಿಹರದ ಜಿ.ಟಿ.ಟಿ.ಸಿ. ಸಹಯೋಗದಲ್ಲಿ ಇಂಟರ್ನ್‌ಶಿಪ್ ತರಬೇತಿ



ದಾವಣಗೆರೆ, ನ. 3- ಸರ್ಕಾರದ ಸಂಸ್ಥೆಯಾದ ಜಿಟಿಟಿಸಿ ಹರಿಹರದಲ್ಲಿ ಜಿ.ಎಂ.ಐ.ಟಿ. ಯಾಂತ್ರಿಕ ವಿಭಾಗದ ವಿದ್ಯಾರ್ಥಿಗಳಿಗೆ ಇಂಟರ್ನ್ ಶಿಪ್ ತರಬೇತಿ ನಡೆಯಿತು. ಜಿಟಿಸಿಸಿ ಪ್ರಾಂಶುಪಾಲ ಲಕ್ಷ್ಮಣನಾಯ್ಕ, ಜಿ.ಎಂ.ಐ.ಟಿ. ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್, ಯಾಂತ್ರಿಕ ವಿಭಾಗದ ಮುಖ್ಯಸ್ಥ ಡಾ. ಸಿ.ವಿ. ಶ್ರೀನಿವಾಸ ಮಾತನಾಡಿದರು. ಯಾಂತ್ರಿಕ ವಿಭಾಗದ ಸಹ ಪ್ರಾಧ್ಯಾಪಕ ಎಸ್.ಜಿ. ದಿಲೀಪ್ ಕುಮಾರ್ ಅವರು ಕಾರ್ಯಕ್ರಮವನ್ನು ಜಿ.ಟಿ.ಟಿ.ಸಿ. ಸಹಯೋಗದಲ್ಲಿ ಆಯೋಜಿಸಿದ್ದರು.


**ಸೈಟ್, ಮನೆ, ಮಾರಾಟಕ್ಕೆ ಖರೀದಿಗೆ**
ಸಿದ್ದವೀರಪ್ಪ ಬಡಾವಣೆ :- ಮನೆ, ಸೈಟ್
ಆಂಜನೇಯ ಬಡಾವಣೆ :- ಮನೆ, ಸೈಟ್
ಎಂ.ಸಿ.ಸಿ. 'ಎ' ಬ್ಲಾಕ್ :- ಮನೆ
ಡಾಲರ್ಸ್ ಕಾಲೋನಿ :- ಸೈಟ್
ರಶ್ಮಿಲೇಔಟ್ :- ಸೈಟ್
ವಿವೇಕಾನಂದ ಬಡಾವಣೆ :- ಬಾಡಿಗೆ ಬರುವ ಮನೆ
ವೀರೇಶ್
76768 57676

**ಮನೆಗಳು ಮಾರಾಟಕ್ಕಿವೆ**
1) ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್‌ರೂಂ, 44 ಲಕ್ಷಕ್ಕೆ
2) K.H.B. ಯಲ್ಲಿ 30x50 ಮನೆ North, 38 ಲಕ್ಷಕ್ಕೆ
3) ಜಯನಗರದಲ್ಲಿ 30x50 West, 75 ಲಕ್ಷಕ್ಕೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
# 853/6, ಶಿವಕುಮಾರ ಸ್ವಾಮಿ ಬಡಾವಣೆ ಮೊದಲನೇ ಹಂತ, 2ನೇ ಮೇನ್, 6ನೇ ಕ್ರಾಸ್‌ನಲ್ಲಿರುವ ಸಿಂಗಲ್ ಬೆಡ್ ರೂಂ ಮನೆ ಸಿ.ಎಂ.ಸಿ ಹಾಗೂ ಬೋರ್ ನೀರಿನ ಎರಡೂ ವ್ಯವಸ್ಥೆ ಇರುವ ವಿಶಾಲವಾದ ಪಾರ್ಕಿಂಗ್ ಇರುವ ಮನೆ. ಸಂಪರ್ಕಿಸಿ:
82773 91585
63618 93176

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ,
20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಚಿತ್ರದುರ್ಗದಲ್ಲಿರುವ ಸೈಟ್ ಮಾರಾಟಕ್ಕಿದೆ**
ಅಳತೆ 30x40, ಪಶ್ಚಿಮ ದಿಕ್ಕು KSRTC ಬಸ್ ಸ್ಟ್ಯಾಂಡ್‌ನಿಂದ 2.ಕಿ.ಮೀ ದೂರದಲ್ಲಿದೆ ಮರುಳಪ್ಪ ಬಡಾವಣೆ, ಮೆದೆಹಳ್ಳಿ ರಸ್ತೆ, ಚಿತ್ರದುರ್ಗ.
ಸಂಪರ್ಕಿಸಿ:
94488 43914

**ಸೈಟು ಮಾರಾಟಕ್ಕಿದೆ**
No. 58, 74x31 ಅಳತೆಯ ಬಸಾಪುರ ಸರ್ಕಲ್ ಹತ್ತಿರ ವಾರ್ಡ್ ನಂ.21 (ಅಂಜನಾದ್ರಿ ಮೆಡಿಕಲ್ ಶಾಪ್ ಪಕ್ಕ) ಇರುವ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ :
99000 94055

**ಮಾರಾಟಕ್ಕಿವೆ**
ತೋಟ ಹಾಗೂ ಹೊಲಕ್ಕೆ ಉಪಯುಕ್ತವಾಗುವ 5 ಅಡಿ, 10 ಅಡಿ, 12 ಅಡಿ, 18 ಅಡಿಯ ಸಿಮೆಂಟ್ ಮುರಿದಿರುವ (Fensing) ಕಂಬ ಮಾರಾಟಕ್ಕಿವೆ.
99649 44063

**ಬೇಕಾಗಿದ್ದಾರೆ**
PUC ಆದ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ಷಾ ಆಪ್ಟಿಕಲ್
ದೃಷ್ಟಿ ಕಣ್ಣಿನ ಆಸ್ಪತ್ರೆ ಎದುರು, ಶಾಮನೂರು ಷುಗರ್ಸ್ ಪಕ್ಕ, ಪಿ.ಜೆ. ಬಡಾವಣೆ, ದಾವಣಗೆರೆ

**ಮಾರಾಟಕ್ಕೆ**
ದಾವಣಗೆರೆ ಬಂಬೂ ಬಜಾರ್ ಮೇನ್ ರೋಡ್‌ನಲ್ಲಿರುವ 20x40 ಅಳತೆಯ ಶಾಪ್ ಮಾರಾಟಕ್ಕಿದೆ. ಸಂಪರ್ಕಿಸಿ:
98440 61464

**ಬೇಕಾಗಿದ್ದಾರೆ**
Sales Executive ಬಾಯ್ಸ್
Any Degree ನೇರವಾಗಿ ಸಂದರ್ಶನ
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
ವಾಸನ್ ಐ ಕೇರ್ ಹತ್ತಿರ, ಆಲೂರು ಮಂಜುನಾಥ ಹಾಸ್ಪಿಟಲ್ ಪಕ್ಕ
77601 57691
95139 15590

**WALL PAPER**
@ offer Price
₹ 10 per Sq.Ft
(600 - 900 per Roll)
Contact :
INTERIOR HIVE
98860-04771
63635-61331

**ಮಾರ್ಕ್ಸ್ ಕಾರ್ಡ್ ಕಳೆದಿದೆ**
ಸಂದೀಪ್ ಪಾಟೀಲ್ ಬಿ. ಹೆಸರಿನ II PUC (Reg No : 645592) ಮಾರ್ಕ್ಸ್‌ಕಾರ್ಡ್ ದಿನಾಂಕ : 3.11.2020 ರಂದು ಬಿಐಇಟಿ ಕಾಲೇಜು ರಸ್ತೆಯಲ್ಲಿ ಕಳೆದಿದ್ದು, ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಕೋರಲಾಗಿದೆ. ತಂದು ಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.
90604 70624, 90665 82577

**ಹೋಂ ನರ್ಸಿಂಗ್ ಸೇವೆ & ಕೆಲಸ**
ಆಸ್ಪತ್ರೆಗಳಿಗೆ, ಮನೆಗಳಿಗೆ, ವೃದ್ದರು, ರೋಗಿಗಳನ್ನು ಆರೈಕೆ ಮಾಡಲು ಅನುಭವವಿರುವ ಹೋಂ ನರ್ಸ್‌ಗಳನ್ನು ಕಳುಹಿಸಲಾಗುವುದು. ಮಹಿಳೆಯರಿಗೆ, ಪುರುಷರಿಗೆ ಹೋಂ ನರ್ಸಿಂಗ್ ಕೆಲಸ ಲಭ್ಯವಿದೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಊಟ,ವಸತಿ ಉಚಿತ.
95139 17777
95136 58555

**ಮನೆ ಬಾಡಿಗೆಗೆ**
ನಿಟ್ಟುವಳ್ಳಿ ಹೊಸ ಬಡಾವಣೆ, ಮಣಿಕಂಠ ಸರ್ಕಲ್ ಹತ್ತಿರ 12 1/2 X 40 ಅಳತೆಯ ಪೂರ್ವ ದಿಕ್ಕಿನ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ (3500/-ರೂ ಬಾಡಿಗೆಗೆ)
ಆಸಕ್ತರು ಸಂಪರ್ಕಿಸಿ:
98440 25005

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಸೀಮೆಎಣ್ಣೆ ಬಂಕ್ ಎದುರು, ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಂ, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ.
73495 98347, 94481 25056

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್‌ನಲ್ಲಿ 30x56 ಪೂರ್ವ, 30x40 ಪಶ್ಚಿಮ. ಡಾಲರ್ಸ್ ಕಾಲೋನಿಯಲ್ಲಿ 30x40 ಉತ್ತರ, 30x50 ಪಶ್ಚಿಮ 30x50 ದಕ್ಷಿಣ. ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 40x60 ಪೂರ್ವ, 30x40 ಪೂರ್ವ, 30x50 ಪೂರ್ವ.
ಶಾಮನೂರು ಧನ್ಯಕುಮಾರ್, ಏಜೆಂಟ್
97415 62589

**FOR RENT**
Commercial Building 2000 Sqft With 400 Sqft Office With 24X7 Water And Toilet Facility Near Court Circle Behind Raj Bhavan Hotel Rent For Business.
Contact: 87468 12999

**TELECALLERS**
ಗೆ ಹುಡುಗಿಯರು ಬೇಕಾಗಿದ್ದಾರೆ.
2 day Interview
November 4th and 5th
Time: 10.30 am to 5 pm
95385 75469

**ಸಂಘ-ಸಂಸ್ಥೆಗಳ NGO-ಟ್ರಸ್ಟ್‌ಗಳ ನೋಂದಣಿ ನವೀಕರಣ ಮಾಡಿಕೊಡುತ್ತೇವೆ.**
94838 62779

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, Duroflex Bed, ಕಿಟಕಿಗೆ Aluminium door ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜ ಪೇಟೆ, ದಾವಣಗೆರೆ
98445 81966

**ಮಾರಾಟಕ್ಕಿವೆ**
ಉತ್ತಮ ಸ್ಥಿತಿಯಲ್ಲಿರುವ ಹಳೆಯ ಟೈಲರಿಂಗ್ ಮಿಷನ್‌ಗಳು ಮಾರಾಟಕ್ಕಿವೆ. ಆಸಕ್ತರು ಸಂಪರ್ಕಿಸಿ:
ಶ್ರೀ ಲಕ್ಷ್ಮೀ ರಂಗನಾಥ ಮಹಿಳಾ ಹೊಲಿಗೆ ತರಬೇತಿ ಕೇಂದ್ರ
1ನೇ ಮೇನ್, 16ನೇ ಕ್ರಾಸ್, ನಾಗರಕಟ್ಟೆ ದೇವಸ್ಥಾನ ಹತ್ತಿರ, ವಿನೋಬನಗರ, ದಾವಣಗೆರೆ.
ಮೊ: 98804 48379

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಡಿಲೆವರಿ ಮಾಡಲು Tata ACE Driver (ಡ್ರೈವರ್) ಬೇಕಾಗಿದ್ದಾರೆ.
ಕೆಲಸದ ಸಮಯ : ಬೆಳಿಗ್ಗೆ 9 ರಿಂದ ರಾತ್ರಿ 9 ರವರೆಗೆ, ತಮ್ಮ ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ
94807 95548

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

ನಮ್ಮಲ್ಲಿ ವಯೋ ವೃದ್ಧರಿಗೆ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು
ಸಂಪರ್ಕಿಸಿ: ಜ್ಯೋತಿ ನಿರಂತರ ಸೇವಾ ಚಾರಿಟಬಲ್ ಟ್ರಸ್ಟ್ (ರಿ)
76250 15036
8971192936

**ಬೇಕಾಗಿದ್ದಾರೆ**
ತಿಂಗಳ ಸಂಬಳ 6000ದ ಮೇರೆಗೆ ಕಾರ್ ಡ್ರೈವರ್ ಬೇಕಾಗಿದ್ದಾರೆ. ಊಟ, ತಿಂಡಿ ಪ್ರತ್ಯೇಕ ಕೊಡಲಾಗುವುದು ಮತ್ತು ಯಾವುದೇ ತರಹದ ಬ್ಯಾಟಾ ಇರುವುದಿಲ್ಲಾ (Out side) All over Karnataka Business Tour weekly 6 Days Duty (Sunday Holiday)
89700 11711

**ನೇರ ಪರೀಕ್ಷೆಗಳು**
S.S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369

**ಬೇಕಾಗಿದ್ದಾರೆ**
ಗಡಿಯಾರ ಕಂಬದ ಹತ್ತಿರ ಇರುವ ಪೂಜಾರ್ ಡಿ.ಟಿ.ಪಿ. ಸೆಂಟರ್‌ಗೆ ಕನ್ನಡ ಮತ್ತು ಇಂಗ್ಲಿಷ್ ನಮೂನೆಯಲ್ಲಿ ನುರಿತ ಅನುಭವ ಇರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಮೊ ನಂ. 89703 96509

**ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧ, ಬೆಡ್‌ರಿಡನ್, ಮಾನಸಿಕ, ಅಂಗವಿಕಲ, ಬುದ್ದಿ ಮಾಂದ್ಯರನ್ನು ನಮ್ಮಲ್ಲಿ ಊಟ ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು.
ನಿಟ್ಟುವಳ್ಳಿ, ಹೊಸ ಬಡಾವಣೆ, ದಾವಣಗೆರೆ.
89711 92936
76250 15036

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**PG ಬಿಲ್ಡಿಂಗ್ ಬಾಡಿಗೆಗೆ ಇದೆ**
16 ಸುಸಜ್ಜಿತ ಅಟ್ಯಾಚ್ಡ್ ಬಾತ್‌ರೂಂ ಇರುವ ಹಾಗೂ 1000sq feet ಡೈನಿಂಗ್ ಹಾಲ್ ಹಾಗೂ ನಲ್ಲಿ ಮತ್ತು ಬೋರ್ ನೀರು ಸೌಕರ್ಯ ಇರುವ BIET ಕಾಲೇಜ್ ರೋಡ್ , ದವನ್ ಕಾಲೇಜ್ ಹತ್ತಿರ, ದಾವಣಗೆರೆ.
94484 42694
99725 35329

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ರೊಟ್ಟಿ, ಚಪಾತಿ, ತಾಲೀಪಟ್ಟು ಮಾಡುವ ಮಷಿನ್ ದೊರೆಯುತ್ತದೆ. ಸ್ಟಾಕ್ ಲಭ್ಯವಿದೆ**
ಸಂಪರ್ಕಿಸಿ: 98860 26813

**ಮಳಿಗೆಗಳು ಬಾಡಿಗೆಗೆ**
ಎವಿಕೆ ಕಾಲೇಜ್ ರಸ್ತೆ, ಹಳೆಮನೆ ಹೋಟೆಲ್ ಎದುರು 900 ಚ.ಅಡಿಯ ಮೂರು ಮಳಿಗೆಗಳು (ಗ್ರೌಂಡ್, 1ನೇ, 2ನೇ ಮಹಡಿ) ಬಾಡಿಗೆಗೆ ದೊರೆಯುತ್ತವೆ.
94816 89201, 98440 94100

**Wanted**
Sales Person 5 No's
PUC, Any Degree
Accountant - 5 No's
Qualifiction - BBM, MBA, B.Com, M.Com
Hullumane Properties & Power Pvt Ltd
95135 03000

**ಪರ್ಸ್ ಕಳೆದಿದೆ**
ಡಿ.ಎಲ್. ಆಧಾರ್ ಕಾರ್ಡ್, ಪಾನ್ ಕಾರ್ಡ್ ಇತ್ಯಾದಿ ಕಾರ್ಡ್ ಗಳಿರುವ ಪರ್ಸ್ ದಿನಾಂಕ 30.10.2020 ರಂದು ದಾವಣಗೆರೆ ಸಿ.ಜಿ. ಆಸ್ಪತ್ರೆ ರಸ್ತೆಯಲ್ಲಿ ರಾತ್ರಿ ವೇಳೆ ಕಳೆದಿದೆ ಯಾರಿಗಾದರು ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರಿಗೆ ಮಾಹಿತಿ ನೀಡಲು ವಿನಂತಿ.
97319 84350

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481-59303, 80509 52637

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 05.11.2020ರ ಗುರುವಾರ ಮತ್ತು 06.11.2020ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ
ವಧು-ವರರ ಕೇಂದ್ರ,
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**SSLC, PUC ಪಾಸ್/ಫೇಲ್ ಮುಂದೇನು?**
ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್ 6 ತಿಂಗಳ ಟ್ರೈನಿಂಗ್ ನಂತರ ನರ್ಸ್ ಕೆಲಸ.
ನೇರ ಪರೀಕ್ಷೆಗಳು : NTC, SSLC, PUC
ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಫೋ. : 86602 35013

**Basic - 1500/-**
**DTP-1500/-**
**Photoshop-3500/-**
**Door To Door Coaching**
97426 10385

# ರಾಜ್ಯೋತ್ಸವಕ್ಕೆ ಗೈರಾದ ಉಸ್ತುವಾರಿ ಸಚಿವರ ವಿರುದ್ಧ ಕರವೇ ಆಕ್ರೋಶ



ದಾವಣಗೆರೆ, ನ.3- ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ಏರ್ಪಡಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಗೈರು ಹಾಜರಿಗೆ ಕರ್ನಾಟಕ ರಕ್ಷಣಾ ವೇದಿಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ರಾಜ್ಯೋತ್ಸವದಲ್ಲಿ ಭಾಗವಹಿಸದೇ ಇರುವುದು ಕನ್ನಡಿಗರಿಗೆ, ಕನ್ನಡಕ್ಕೆ ಮಾಡಿದ ಅಪಮಾನ ಎಂದು ಆರೋಪಿಸಿದ ರಕ್ಷಣಾ ವೇದಿಕೆ ಕಾರ್ಯಕರ್ತರು, ಕೆ.ಬಿ.ಬಡಾವಣೆಯಲ್ಲಿ ಜಿಲ್ಲಾಧ್ಯಕ್ಷ ಎಂ.ಎಸ್.ರಾಮೇಗೌಡ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಸಚಿವರ ಪ್ರತಿಕೃತಿ ದಹಿಸಿ, ಸಚಿವರ ವಿರುದ್ಧ ಘೋಷಣೆ ಕೂಗಿದರು.

ಇದಕ್ಕೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಮೇಗೌಡ, ಸಚಿವ ಭೈರತಿ ಬಸವರಾಜ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಅನಾರೋಗ್ಯದ ಕುಂಟು ನೆಪ ಹೇಳಿ ನ. 1 ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸದೇ ಇದ್ದದ್ದು ಕನ್ನಡಕ್ಕೆ ಮಾಡಿದ ಅವಮಾನ. ಇವರ ಗೈರು ನೋಡಿದರೆ ಇವರಿಗೆ ಎಷ್ಟರ ಮಟ್ಟಿಗೆ ಕನ್ನಡ ಪ್ರೇಮ ಇದೆ ಎಂಬುದು ಸಾಬೀತಾಗಿದೆ ಎಂದರು.

ಪ್ರತಿ ಜಿಲ್ಲೆಯಲ್ಲಿ ಕನ್ನಡ ರಾಜ್ಯೋತ್ಸವದಂದು ರಾಷ್ಟ್ರಧ್ವಜದೊಂದಿಗೆ ನಾಡಧ್ವಜಾರೋಹಣವನ್ನೂ ಮಾಡಬೇಕು. ಆದರೆ, ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ರಾಷ್ಟ್ರಧ್ವಜಾರೋಹಣ ಮಾಡಿ ನಾಡ ಧ್ವಜಾರೋಹಣ ಮಾಡದೇ ಕನ್ನಡ ನಾಡಧ್ವಜಕ್ಕೆ ಅವಮಾನ ಮಾಡಿದ್ದಾರೆ. ಆದ್ದರಿಂದ ಜಿಲ್ಲಾಧಿಕಾರಿ ಕನ್ನಡಿಗರ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕ.ರ.ವೇ. ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಬಸಮ್ಮ, ಕೆ.ಜಿ. ಬಸವರಾಜು, ಮಂಜುಳಾ ಬಿ., ಗೋಪಾಲ ದೇವರಮನೆ, ರಮೇಶ, ಪರಮೇಶ, ಹಮೀದಾಬಾನು ಮತ್ತಿತರರು ಉಪಸ್ಥಿತರಿದ್ದರು.

# ಶ್ರೀನಿವಾಸ್ ದಾಸಕರಿಯಪ್ಪ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ



ದಾವಣಗೆರೆ,ನ.3- ನಗರದ ಯುವ ಮುಖಂಡ ಶ್ರೀನಿವಾಸ್ ದಾಸಕರಿಯಪ್ಪ ಅವರು ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಈ ಸಂಬಂಧ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಅವರ ಸೂಚನೆಯ ಮೇರೆಗೆ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಆದೇಶ ಹೊರಡಿಸಿದ್ದಾರೆ.

**ಸಂತಸ :** ಶ್ರೀನಿವಾಸ್ ದಾಸಕರಿಯಪ್ಪ ಅವರು ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾಗಿ ನೇಮಕಗೊಂಡಿರುವುದು ಸಂತಸವನ್ನುಂಟು ಮಾಡಿದೆ ಎಂದು ವಕೀಲರೂ ಆಗಿರುವ ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಕಾನೂನು ಮತ್ತು ಸಂಸದೀಯ ಪ್ರಕೋಷ್ಠ ಉಪಾಧ್ಯಕ್ಷ ಹೆಚ್. ದಿವಾಕರ್, ವಕೀಲರೂ ಆಗಿರುವ ಸಂಚಾಲಕ ಎ.ಸಿ. ರಾಘವೇಂದ್ರ ತಿಳಿಸಿದ್ದಾರೆ.

ಸಂಘಟಕರಾದ ಶ್ರೀನಿವಾಸ್ ದಾಸಕರಿಯಪ್ಪ ಅವರನ್ನು ಬಿಜೆಪಿಯಲ್ಲಿ ಸ್ಥಾನ ಮಾನ ನೀಡಿರುವುದರಿಂದ ಪಕ್ಷಕ್ಕೆ ಬಲ ಬಂದಂತಾಗಿದೆ ಎಂದು ಅವರು ಹೇಳಿದ್ದಾರೆ.

# ಸಾಹಿತಿ ಶಶಿಕಲಾ ಶಂಕರಮೂರ್ತಿ ಅವರಿಗೆ ಸನ್ಮಾನ



ದಾವಣಗೆರೆ, ನ.3- ಕಲಾಕುಂಚ ಪ್ರತಿಭಾವಂತ ಮಕ್ಕಳ ಸನ್ಮಾನ ಕಾರ್ಯಕ್ರಮದಲ್ಲಿ ಕಲಾಕುಂಚದಿಂದ ಪ್ರಪ್ರಥಮ ಬಾರಿಗೆ ಈ ಸಾಲಿನಿಂದ ಪ್ರಾರಂಭಿಸಿದ ವಿದ್ಯಾ ಸರಸ್ವತಿ ಪ್ರಶಸ್ತಿಯನ್ನು ಪಡೆದ ಶಿಕ್ಷಕಿ, ಸಾಹಿತಿ ಶ್ರೀಮತಿ ಎ.ಸಿ.ಶಶಿಕಲಾ ಶಂಕರಮೂರ್ತಿ ಅವರನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಆರ್.ಪರಮೇಶ್ವರಪ್ಪ (ಆಡಳಿತ) ಹಾಗೂ ಡಯಟ್ ಉಪನಿರ್ದೇಶಕ ಹೆಚ್.ಕೆ. ಲಿಂಗರಾಜು ಅವರು ಗೌರವಿಸಿ, ಹಾರೈಸಿದರು.

# ನಗರದಲ್ಲಿ ಇಂದು ಕು. ದೀಪ್ತಿ ಜೋಷಿ ಅವರ ಕಲಾಕೃತಿ ಪ್ರದರ್ಶನ

ದಾವಣಗೆರೆಯ ಸಂಕಲನ ಸಮೂಹ ಸಂಸ್ಥೆಯ ಕಲಾ ಕೇಂದ್ರದಲ್ಲಿ ತರಬೇತಿ ಪಡೆದ ಕು. ದೀಪ್ತಿ ಜೋಷಿ ಅವರು ರಚಿಸಿರುವ ಆಯ್ದ ಚಿತ್ರ ಕಲಾಕೃತಿಗಳ ಏಕವ್ಯಕ್ತಿ ಚಿತ್ರಗಳ ದೃಶ್ಯ ದರ್ಶನ ಕಲಾಪ್ರದರ್ಶನವು ಇಂದು ಬೆಳಿಗ್ಗೆ 11 ಗಂಟೆಗೆ ಸಂಕಲನ ಚಿತ್ರ ಕುಟೀರದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಶ್ರೀಮತಿ ನಳಿನಿ ಅಚ್ಯುತ್ ಉದ್ಘಾಟಿಸುವರು. ಕಾರ್ಯಕ್ರಮದಲ್ಲಿ ದೃಶ್ಯಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕ ಡಾ. ಸಂತೋಷಕುಮಾರ್ ಕುಲಕರ್ಣಿ ಅವರಿಗೆ ಸನ್ಮಾನಿಸಲಾಗುವುದು. ಸ್ಥಳೀಯ ಕಲಾ ಆಸಕ್ತರೊಂದಿಗೆ ಜಾಗತಿಕವಾಗಿಯೂ ಕಲಾ ಪ್ರದರ್ಶನವನ್ನು ವೀಕ್ಷಣೆಗೆ ಅಂತರ್‌ಜಾಲದಲ್ಲಿ ಆರಂಭಿಸುವ ಕಾರ್ಯವನ್ನು ಪ್ರಸ್ತುತ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರು ಮತ್ತು ಚಿತ್ರ ಕಲಾವಿದರಾದ ರವೀಂದ್ರ ಅರಳಗುಪ್ಪಿ ನಡೆಸಿಕೊಡುವರು.

ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಉಷಾ ಎಂ.ಜಿ ಅವರ ಚಿತ್ರಕಲಾ ಪ್ರದರ್ಶನವು ಎಂ.ಸಿ.ಸಿ 'ಬಿ' ಬ್ಲಾಕ್‌ನ ಹಳೇ ಆರ್.ಟಿ.ಓ ಕಚೇರಿಯ ಎದುರುಗಡೆ ಇರುವ ಸಂಕಲನ ಚಿತ್ರ ಕುಟೀರದಲ್ಲಿ ಇಂದಿನಿಂದ ಇದೇ ದಿನಾಂಕ 18 ರವರೆಗೆ ಪ್ರತಿದಿನ ಬೆಳಿಗ್ಗೆ 11 ರಿಂದ 1 ಹಾಗೂ ಸಂಜೆ 4 ರಿಂದ 7 ರವರೆಗೆ ಸಾರ್ವಜನಿಕರಿಗೆ ವೀಕ್ಷಣೆಗೆ ತೆರೆದಿರುತ್ತದೆ.

## ಕರಡಿ ದಾಳಿ : ಓರ್ವನಿಗೆ ಗಾಯ

ದಾವಣಗೆರೆ, ನ.3- ಹೊಲದಲ್ಲಿ ದನ ಮೇಯಿಸುತ್ತಿದ್ದ ವ್ಯಕ್ತಿಯೋರ್ವನ ಮೇಲೆ ಕರಡಿ ದಾಳಿ ನಡೆಸಿದ ಪರಿಣಾಮ ಆತ ಗಂಭೀರವಾಗಿ ಗಾಯಗೊಂಡಿರುವ ಘಟನೆ ಚನ್ನಗಿರಿ ತಾಲ್ಲೂಕಿನ ಹರೋನಹಳ್ಳಿ ಗ್ರಾಮ ಪಂಚಾಯತಿಯ ಹನುಮಂತನಗರ ಗ್ರಾಮದ ಹೊರವಲಯದಲ್ಲಿ ಇಂದು ಮಧ್ಯಾಹ್ನ ನಡೆದಿದೆ.

ಹನುಮಂತನಗರ ಗ್ರಾಮದ ಮಂಜಪ್ಪ (50) ಕರಡಿ ದಾಳಿಗೆ ತುತ್ತಾದ ವ್ಯಕ್ತಿ. ಗಂಭೀರವಾಗಿ ಗಾಯಗೊಂಡ ಮಂಜಪ್ಪ ಅವರನ್ನು ಚಿಕಿತ್ಸೆಗಾಗಿ ಚನ್ನಗಿರಿ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಹೆಚ್ಚಿನ ಚಿಕಿತ್ಸೆಗೆಂದು ಶಿವಮೊಗ್ಗ ಆಸ್ಪತ್ರೆಗೆ ರವಾನಿಸಲಾಗಿದೆ.

## ಹತ್ತಿದ ಮೆಟ್ಟಿಲು ಮರೆಯಲೇ ಬೇಡ



ಹತ್ತಿದ ಮೆಟ್ಟಿಲ ಮರೆಯಲೇ ಬೇಡ
ಮತ್ತದೆ ಮೆಟ್ಟಿಲು ಇಳಿಯಲು ಬೇಕು
ಕೆಳಗಿನ ಮೆಟ್ಟಿಲು ಎತ್ತಿತು ಎತ್ತರಕೆ
ನಿನ್ನಯ ಒಳಿತನೆ ಬಯಸುತ
ಇಲ್ಲೇ ಇರುವೆನು ಕಾಯುತ ಎಂದೂ!
ಎತ್ತರ ಏರುತ ಏರುತ ಬಳಿಯಲಿ
ಉಳಿಯರು ಹಿತವನು ಬಯಸುವ
ಗೆಳೆಯರು ನೀನಿರುವೆತ್ತರದಲ್ಲಿ
ಉಳಿದರು ಅವರು ಶುಭವನು ಕೋರುತ
ಕೆಳಗಡೆಯೇ, ಮರೆಯಾದರು ನಿನಗೆ
ಒಂಟಿಯ ನೆಂಟನು ನೀನಾದೆ
ಅಂಟಿದ ಗಂಟನು ಕಿತ್ತೆಸೆದೆ
ಕಂಟಕ ಬಂದರು ನೆಂಟರು ಇಲ್ಲ
ಎತ್ತರ ಜೀವನ ಉತ್ತರವೀಯದು
ಹತ್ತಿರ ಬರುವ ಪೀಡೆಯ ಬಿಡಿಸಲು
ಮತ್ತದೆ ಪಯಣ ಗತ್ತಲಿ ಮೆಟ್ಟಿದ
ಹತ್ತಿದ ಮೆಟ್ಟಿಲು ಮತ್ತದು ಬೇಕಾಯ್ತು
ಉತ್ತರವಿದಕೆ ತಿಳಿಯಲಿ ನಿನಗೆ
ಹತ್ತಿರವಿರಲು ಗೊತ್ತಿನ ಜನರು
ಬತ್ತದು ಬತ್ತಿ ನಿನಗದು ಶಕ್ತಿ.

**- ಅಣ್ಣಾಪುರ್ ಶಿವಕುಮಾರ್**
ashivakumar@yahoo.com

# ಆಂಗ್ಲ ಭಾಷೆಯಿಂದಲೇ ಎಲ್ಲವನ್ನೂ ಸಾಧಿಸುತ್ತೇವೆಂಬ ಮನೋಭಾವನೆಯಿಂದ ಹೊರಬರಬೇಕು : ಡಿಡಿಪಿಐ



## ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ನ.3- ಕನ್ನಡಿಗರಾದ ನಾವುಗಳು ಆಂಗ್ಲ ಭಾಷೆಯಿಂದಲೇ ಎಲ್ಲವನ್ನೂ ಸಾಧಿಸುತ್ತೇವೆ ಎಂಬ ಮನೋಭಾವನೆ ಹೊಂದಿದ್ದೇವೆ. ಅದರಿಂದ ಹೊರಬರಬೇಕಿದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಆರ್. ಪರಮೇಶ್ವರಪ್ಪ ತಿಳಿಸಿದರು.

ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಹಯೋಗದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 125ಕ್ಕೆ 125 ಅಂಕ, 625ಕ್ಕೆ 600ಕ್ಕೂ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಕನ್ನಡ ಕೌಸ್ತುಭ, ಸರಸ್ವತಿ ಪುರಸ್ಕಾರ ರಾಜ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯುರೋಪಿಯನ್ ದೇಶಗಳಲ್ಲಿ ಇಂಗ್ಲೀಷ್ ಭಾಷೆಗೆ ಮಾನ್ಯತೆಯೇ ನೀಡುವುದಿಲ್ಲ. ಆಯಾ ರಾಷ್ಟ್ರಗಳಲ್ಲಿ ಮಾತೃ ಭಾಷೆಗೆ ಮಹತ್ವ ನೀಡಿ ಅದರಲ್ಲೇ ಪ್ರಗತಿಯನ್ನು ಕಾಣುತ್ತಿದ್ದಾರೆ. ಕನ್ನಡ ಸಾವಿರಾರು ವರ್ಷಗಳ ಇತಿಹಾಸವಿರುವ ಭಾಷೆ. ಈ ತಾಯಿ ಭಾಷೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಹೊಣೆಗಾರಿಕೆ ನಮ್ಮೆಲ್ಲರದ್ದಾಗಿದೆ ಎಂದು ಅವರು ಆಶಿಸಿದರು.

ದೇಶದಲ್ಲಿನ ಸಾಧಕರಲ್ಲಿ ಹೆಚ್ಚಿನವರು ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ಈಗಲೂ ಗ್ರಾಮೀಣ ಪ್ರದೇಶದ ಅದರಲ್ಲೂ ಕುಗ್ರಾಮದಿಂದ ಬಂದಿರುವ ಅದೆಷ್ಟೋ ಮಕ್ಕಳು ಸಾಧನೆ ಮಾಡಿರುವುದು ಮಾತೃ ಭಾಷೆಯಲ್ಲಿ ಅನ್ನುವುದನ್ನು ನಾವುಗಳು ತಿಳಿಯಬೇಕಿದೆ ಎಂದು ಪೋಷಕರಿಗೆ ಕಿವಿಮಾತು ಹೇಳಿದರು.

ಡಯಟ್ ಪ್ರಾಂಶುಪಾಲ ಪ್ರೊ. ಹೆಚ್.ಕೆ. ಲಿಂಗರಾಜ್ ಮಾತನಾಡಿ, ಹತ್ತಿ, ಎಣ್ಣೆ, ಟೆಕ್ಸ್‌ಟೈಲ್ ಮಿಲ್, ಗುಡಿ ಕೈಗಾರಿಕೆ ಸೇರಿದಂತೆ ನಾನಾ ಕೈಗಾರಿಕೆಗಳಿಂದಾಗಿ ಕರ್ನಾಟಕದ ಮ್ಯಾಂಚೆಸ್ಟರ್ ಖ್ಯಾತಿ ಹೊಂದಿದ್ದ ದಾವಣಗೆರೆ ಕ್ರಮೇಣ ಕಾರ್ಖಾನೆಗಳು ಬಂದ್ ಆದ ನಂತರ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡುವ ಮೂಲಕ ಕರ್ನಾಟಕದ ಕೇಂಬ್ರಿಡ್ಜ್ ಎಂಬ ಶ್ರೇಯಕ್ಕೆ ಪಾತ್ರವಾಗಿದೆ. ನಾಡಿನ ಕೇಂದ್ರ ಬಿಂದುವಾದ ಈ ಊರು ದಾನಿಗಳ ತವರಾಗಿದೆ. ಒಂದು ಕಾಲದ ಕೈಗಾರಿಕೆಗಳ ಊರು ಇಂದು ಶಿಕ್ಷಣ ಸಂಸ್ಥೆಗಳ ಮೂಲಕ ಗಮನ ಸೆಳೆಯುತ್ತಿದೆ ಎಂದರು.

ಕೈಗಾರಿಕಾ ಕ್ಷೇತ್ರಕ್ಕೆ ಪರ್ಯಾಯವಾಗಿ ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಇತ್ತ ತಲೆ ಎತ್ತುತ್ತಾ ಬಂದಿವೆ. ಕೈಗಾರಿಕೆಗಳಿಂದ ರಾಜ್ಯ, ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿದ್ದ ಈ ಊರು ಈಗ ಶೈಕ್ಷಣಿಕ ಕ್ಷೇತ್ರದಲ್ಲಿನ ಸಾಧನೆ, ಕೊಡುಗೆಗಳಿಂದ ಸಾಧನೆ ಮಾಡುತ್ತಿದೆ. ಇಂತಹ ಊರಿನಲ್ಲಿ ಸಾಧಕ ಮಕ್ಕಳನ್ನು ಗುರುತಿಸಿ, ಗೌರವಿಸುವಂತಹ ಕೆಲಸವಾಗುತ್ತಿದೆ ಎಂದರು.

ದಾವಣಗೆರೆ ಸರ್ಕಾರಿ ಅಂಧ ಮಕ್ಕಳ ಶಾಲೆಯ ಇದೇ ವೇಳೆ ಅಂಧ ವಿದ್ಯಾರ್ಥಿ ಜಿ.ಟಿ. ಕಿರಣ್‌ಗೆ ಸರಸ್ವತಿ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ ಶೆಣೈ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ಕೆ.ಹೆಚ್. ಮಂಜುನಾಥ ಅಧ್ಯಕ್ಷತೆ ವಹಿಸಿದ್ದರು.

ಉದ್ಯಮಿ ಎಲೆಬೇತೂರು ಗ್ರಾಮದ ತೇಜಸ್ವಿನಿ ಪ್ರಕಾಶ, ಕಲಾಕುಂಚ ಮಹಿಳಾ ವಿಭಾಗದ ಜ್ಯೋತಿ ಗಣೇಶ ಶೆಣೈ, ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ, ಬೇಳೂರು ಸಂತೋಷ ಕುಮಾರ್ ಶೆಟ್ಟಿ ಸೇರಿದಂತೆ ಇತರರು ಇದ್ದರು.

# ಪಾಲಿಕೆ ವಿಪಕ್ಷ ಸದಸ್ಯರಿಂದ ಆವರಗೊಳ್ಳದ ಘನ ತ್ಯಾಜ್ಯ ಕಸ ವಿಲೇವಾರಿ ಘಟಕಕ್ಕೆ ಭೇಟಿ



ದಾವಣಗೆರೆ, ನ.3- ನಗರದಲ್ಲಿ ಕಳೆದ ಕೆಲವು ದಿನಗಳಿಂದ ಕಸ ವಿಲೇವಾರಿಯಲ್ಲಿ ಆಗುತ್ತಿರುವ ತೊಂದರೆಗಳನ್ನು ಮನಗಂಡು ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ನೇತೃತ್ವದಲ್ಲಿ ಕಾಂಗ್ರೆಸ್ ಪಾಲಿಕೆ ಸದಸ್ಯರು ಆವರಗೊಳ್ಳದಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಇಂದು ಭೇಟಿ ನೀಡಿ ಪರಿಶೀಲಿಸಿದರು.

ಅಧಿಕಾರಿಗಳಿಂದ ಮಾಹಿತಿ ಪಡೆದ ಸದಸ್ಯರು, ನಗರದಲ್ಲಿ ಪ್ರತಿದಿನ 160 ರಿಂದ 165 ಟನ್ ಕಸ ಸಂಗ್ರಹವಾಗುತ್ತಿದ್ದು, ಆದರೆ ಕಳೆದ 15 ದಿನಗಳಿಂದ ಪ್ರತಿದಿನ ಕೇವಲ 120 ರಿಂದ 121 ಟನ್ ಕಸ ಸಂಗ್ರಹವಾಗುತ್ತಿದೆ.

ಕಸ ಸರಿಯಾಗಿ ಸಂಗ್ರಹವಾಗದೆ ನಗರದ ಸ್ವಚ್ಛತೆ ಮತ್ತು ನಾಗರಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂಬುದು ಈ ಮಾಹಿತಿಯಿಂದ ತಿಳಿಯುತ್ತದೆ ಎಂದು ನಾಗರಾಜ್ ತಿಳಿಸಿದರು.

ಆವರಗೊಳ್ಳಕ್ಕೆ ಹೋಗುವ ರಸ್ತೆ ಕಾಮಗಾರಿ ನಡೆಯುತ್ತಿರುವುದರಿಂದ ಭಾರೀ ವಾಹನಗಳ ಮೂಲಕ ಕಸ ಸಾಗಾಣಿಕೆಗೆ ತೊಂದರೆಯಾಗುತ್ತಿದ್ದು, ಟ್ರ್ಯಾಕ್ಟರ್‌ಗಳನ್ನು ಹೆಚ್ಚೆಚ್ಚು ಮಾಡಿ ಕಸ ವಿಲೇವಾರಿ ಮಾಡಬೇಕು ಎಂದು ಆಯುಕ್ತರಿಗೆ ತಿಳಿಸಿದರು. ಆರೋಗ್ಯ ಅಧಿಕಾರಿಗಳ ಸಭೆ ಕರೆದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಕೆ. ಚಮನ್ ಸಾಬ್, ಜೆ.ಡಿ. ಪ್ರಕಾಶ್, ವಿನಾಯಕ, ಸೈಯದ್ ಚಾರ್ಲಿ, ಕಾಂಗ್ರೆಸ್ ಮುಖಂಡ ಉಮೇಶ್ ಉಪಸ್ಥಿತರಿದ್ದರು.

# ಮಾಲಿನ್ಯ ರಹಿತ ದೀಪಾವಳಿ ಆಚರಣೆಗೆ ಮಾರ್ಗಸೂಚಿ ಬಿಡುಗಡೆ

**ಕೋವಿಡ್-19 ಹಿನ್ನೆಲೆ**

ದಾವಣಗೆರೆ, ನ.3- ಕೋವಿಡ್-19 ಹಿನ್ನೆಲೆಯಲ್ಲಿ ಈ ಬಾರಿ ದೀಪಾವಳಿ ಹಬ್ಬವನ್ನು ಸರಳ ಹಾಗೂ ಮಾಲಿನ್ಯ ರಹಿತವಾಗಿ ಆಚರಿಸಲು ಸರ್ಕಾರ ಕೆಲವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಹಬ್ಬದಲ್ಲಿ ಪಟಾಕಿ, ಸಿಡಿಮದ್ದುಗಳನ್ನು ಮಾರಾಟ ಮಾಡುವುದು ಮತ್ತು ಸಿಡಿಸುವ ಕುರಿತು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಕೆಲವು ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸಲು ಸೂಚನೆ ನೀಡಿದ್ದಾರೆ.

**ಮಾರ್ಗಸೂಚಿಗಳು :** * ಸಂಬಂಧಪಟ್ಟ ಇಲಾಖೆ/ ಪ್ರಾಧಿಕಾರಗಳಿಂದ ಅಧಿಕೃತ ಪರವಾನಗಿ ಪಡೆದ ಮಾರಾಟಗಾರರು ಮಾತ್ರ ಮಾರಾಟ ಮಾಡಬಹುದು. * ನ. 1 ರಿಂದ 17 ರವರೆಗೆ ಮಾತ್ರ ಪಟಾಕಿ ಮಾರಾಟ ಮಳಿಗೆ ತೆರೆದಿರಬೇಕು. * ಪರವಾನಗಿಯಲ್ಲಿ ನಿಗದಿಪಡಿಸಿದ ದಿನಾಂಕ, ಸ್ಥಳದಲ್ಲಿ ಮಾತ್ರ ತಾತ್ಕಾಲಿಕವಾಗಿ ಪಟಾಕಿ ಅಂಗಡಿಗಳನ್ನಿಡಬೇಕು.

* ಮೈದಾನ ಅಥವಾ ಬಯಲು ಪ್ರದೇಶಗಳಲ್ಲಿ ಪಟಾಕಿ ಮಳಿಗೆಗಳನ್ನು ತೆರೆಯಲು ಇಲಾಖೆ/ಪ್ರಾಧಿಕಾರವು ಅನುಮತಿಸಬೇಕು. * ಮಳಿಗೆಗಳಲ್ಲಿ ಎರಡು ಕಡೆಯಿಂದ ಸರಾಗವಾಗಿ ಗಾಳಿಯಾಡುವಂತಿರಬೇಕು. * ಒಂದು ಮಳಿಗೆಯಿಂದ ಮತ್ತೊಂದು ಮಳಿಗೆಗೆ 6 ಮೀಟರ್ ಅಂತರವಿರಬೇಕು. * ಪ್ರತಿ ಮಳಿಗೆಯಲ್ಲಿ ಪರವಾನಗಿ ಪ್ರತಿ ಪ್ರದರ್ಶಿಸಬೇಕು. ಪತ್ರ ಪಡೆದವರು ಕಡ್ಡಾಯವಾಗಿ ಹಾಜರಿರಬೇಕು.

* ಮಾರಾಟ ಮಳಿಗೆ ಸುತ್ತಮುತ್ತ ನಿತ್ಯ ಸ್ಯಾನಿಟೈಸೇಷನ್ ಮಾಡಬೇಕು. ಸಾರ್ವಜನಿಕರು ಸ್ಯಾನಿಟೈಸರ್ ಹಾಗೂ ಥರ್ಮಲ್ ಸ್ಕ್ರೀನಿಂಗ್ ವ್ಯವಸ್ಥೆ ಜೊತೆ 6 ಅಡಿ ಅಂತರ ಗುರುತಿಸಬೇಕು. * ಖರೀದಿಗೆ ಬರುವ ಗ್ರಾಹಕರು, ವರ್ತಕರು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು. ಜನದಟ್ಟಣೆಯಾಗದಂತೆ ನೋಡಿಕೊಳ್ಳಬೇಕು.

ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

# ಪಾಲಿಕೆ ಗುತ್ತಿಗೆದಾರರ ಸಂಘಕ್ಕೆ ಎನ್. ಸಿದ್ದರಾಮಪ್ಪ, ವಿ. ಶ್ರೀನಿವಾಸ್




ದಾವಣಗೆರೆ, ನ.3- ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ನೂತನ ಅಧ್ಯಕ್ಷರಾಗಿ ಎನ್. ಸಿದ್ದರಾಮಪ್ಪ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ವಿ. ಶ್ರೀನಿವಾಸ್ ಅವರನ್ನು ನಿನ್ನೆ ನಡೆದ ಸಂಘದ ವಾರ್ಷಿಕ ಸಾಮಾನ್ಯ ಮಹಾಸಭೆಯಲ್ಲಿ ಎಲ್ಲಾ ಪದಾಧಿಕಾರಿಗಳು ಹಾಗೂ ಗುತ್ತಿಗೆದಾರರುಗಳು ಅವಿರೋಧವಾಗಿ ಆಯ್ಕೆ ಮಾಡಿದರು.

ಈ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳಾದ ಎ.ಎಂ. ರಾಮಣ್ಣ, ನಿರ್ಗಮಿತ ಅಧ್ಯಕ್ಷ ಹೆಚ್. ಜಯಣ್ಣ, ಮಾಜಿ ಅಧ್ಯಕ್ಷ ಡಿ. ಈಶ್ವರ್, ಗೌರವ ಅಧ್ಯಕ್ಷ ವಿರೂಪಾಕ್ಷಪ್ಪ ಕಕ್ಕರಗೊಳ್ಳ, ಉಪಾಧ್ಯಕ್ಷ ರುದ್ರಣ್ಣ ದೇವರಬೆಳಕೆರೆ, ಬಿ. ಉಮಾಪತಿ, ಆರ್. ಪ್ರತಾಪ್, ಹೆಚ್.ಎಂ. ಯಲ್ಲಪ್ಪ, ಪ್ರಧಾನ ಕಾರ್ಯದರ್ಶಿ ಜಿ.ಎಲ್. ಶಿವಪ್ರಕಾಶ್, ಖಜಾಂಚಿ ಕೆ. ಶಿವಕುಮಾರ್, ಹಿರಿಯ ಗುತ್ತಿಗೆದಾರರಾದ ಎಸ್.ಹೆಚ್. ಶಿವಣ್ಣ, ಕೆ. ಗಂಗಪ್ಪ, ಗೋಪಾಲಪ್ಪ, ಬಿ.ಹೆಚ್. ಉದಯಕುಮಾರ್, ಬಿ. ರಮೇಶ್, ಬಸಾಪುರ ಲಿಂಗರಾಜ್, ಕೆ.ಬಿ. ನಾಗರಾಜ್, ಆರ್. ರಫೀಕ್, ವೈ. ತಿಮ್ಮೇಶ್, ಷಣ್ಮುಖಪ್ಪ, ಡಿ. ಕೇಶವಮೂರ್ತಿ, ಮೈಲಾರಪ್ಪ, ಟಿ. ರಮೇಶ್, ಎಸ್. ಸುರೇಶ್, ಟಿ.ಎನ್. ಪರಶುರಾಮ, ಇ. ರುದ್ರೇಶ್, ಎ.ಆರ್. ದಾದಾಪೀರ್, ಬರ್ಕತ್ ಅಲಿ, ಕೆ. ಶಿವಕುಮಾರ್ ಸೇರಿದಂತೆ, ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಕನ್ನಡ ಪರ ಹೋರಾಟಕ್ಕೆ ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆ ಸದಾ ಸಿದ್ಧ




**ಟಾರ್ಗೆಟ್ ಅಸ್ಲಾಂ**

ದಾವಣಗೆರೆ, ನ.3- ಕನ್ನಡಪರ ಸಂಘಟನೆಗಳಲ್ಲಿ ಎಷ್ಟೇ ಬಣಗಳಿದ್ದರೂ ಕನ್ನಡದ ನಾಡು-ನುಡಿ, ನೆಲ-ಜಲ ವಿಚಾರಗಳಿಗೆ ಧಕ್ಕೆ ಬಂದರೆ ಯಾವುದೇ ಹೋರಾಟಕ್ಕೂ ನಮ್ಮ ಸಂಘಟನೆ ಸದಾ ಸಿದ್ಧವಿದೆ ಎಂದು ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಟಾರ್ಗೆಟ್ ಅಸ್ಲಾಂ ತಿಳಿಸಿದರು.

ಸ್ಥಳೀಯ ಕೆಟಿಜೆ ನಗರದದಲ್ಲಿ 65ನೇ ಕನ್ನಡ ರಾಜ್ಯೋತ್ಸವದ ಧ್ವಜಾರೋಣ ನೆರವೇರಿಸಿ ಮಾತನಾಡಿದ ಅವರು, ಪ್ರಸ್ತುತ ದಿನಮಾನಗಳಲ್ಲಿ ಕೋವಿಡ್‌ನಿಂದ ಜನಜೀವನ ಕಷ್ಟಕರವಾಗಿದ್ದು, ಇಂತಹ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಾಧ್ಯವಾಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆಯ ಪ್ರಧಾನ ಕಾರ್ಯದರ್ಶಿ, ಯಾಕೂಬ್ ಕೊಟ್ಟೂರ್, ಕನ್ನಡ ಚಳುವಳಿ ಹೋರಾಟಗಾರ ನಾಗೇಂದ್ರ ಬಂಡಿಕರ್, ಅಬ್ದುಲ್ ಜಬ್ಬಾರ್, ಸುಬೋಧ್ ಬಂಡಿಕರ್, ಬಿ.ಕೆ. ಅತಾವುಲ್ಲಾ ಷರೀಫ್ (ಮದನಿ), ನಜೀರ್ ಸಾಬ್, ತಿಪ್ಪೇಶ್, ಪ್ರವೀಣ್ ಎಬಿಸಿ, ನೂರುಲ್ಲಾ, ಸೂರಜ್ ಗ್ಯಾರೇಜ್, ಷರೀಫ್ ಉಪಸ್ಥಿತರಿದ್ದರು.

# ಸುದ್ದಿ ವಾಹಿನಿ ಕ್ಯಾಮರಾಮನ್ ಮೇಲೆ ಹಲ್ಲೆ : ಖಂಡನೆ



ದಾವಣಗೆರೆ, ನ.3- ಅಕ್ರಮವಾಗಿ ಎಂ ಸ್ಯಾಂಡ್ ಸಂಗ್ರಹಿಸಿಟ್ಟಿದ್ದ ಸ್ಥಳಕ್ಕೆ ವರದಿಗೆಂದು ನಿನ್ನೆ ತೆರಳಿದ್ದ ವೇಳೆ ಸುದ್ದಿ ವಾಹಿನಿಯೊಂದರ ಕ್ಯಾಮರಾಮನ್ ಮೇಲಿನ ಹಲ್ಲೆ ಖಂಡಿಸಿ ನಗರದಲ್ಲಿ ಇಂದು ಸುದ್ದಿ ಮಾಧ್ಯಮದ ಮಿತ್ರರು ಪ್ರತಿಭಟನೆ ನಡೆಸಿದರು.

ಉಪವಿಭಾಗಾಧಿಕಾರಿ ಕಚೇರಿ ಬಳಿ ವರದಿಗಾರರ ಕೂಟದ ಸಂಸ್ಥಾಪಕ ಅಧ್ಯಕ್ಷ ಕೆ. ಏಕಾಂತಪ್ಪ, ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ನೇತೃತ್ವದಲ್ಲಿ ಪ್ರತಿಭಟಿಸಿ ನಂತರ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಅವರ ಮುಖಾಂತರ ದೌರ್ಜನ್ಯ ಎಸಗಿರುವ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಜಿ.ಎಂ.ಆರ್. ಆರಾಧ್ಯ, ನಗರದ ಬೈಪಾಸ್ ರಸ್ತೆಯ ಪಕ್ಕದ ಜಾಗವೊಂದರಲ್ಲಿ ಎಂ ಸ್ಯಾಂಡ್ ದಾಸ್ತಾನು ಮಾಡಿಟ್ಟಿದ್ದ ಬಗ್ಗೆ ವೀಡಿಯೋ ಚಿತ್ರೀಕರಣ ಮಾಡಲು ಹೋಗಿದ್ದ ಸುದ್ದಿ ವಾಹಿನಿ ಕ್ಯಾಮೆರಾಮನ್ ಕಿರಣ್ ಕುಮಾರ್ ಮೇಲೆ ದುಷ್ಕರ್ಮಿಗಳ ಗುಂಪು ಹಲ್ಲೆ ನಡೆಸಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಹಲ್ಲೆಗೊಳಗಾದ ಕ್ಯಾಮೆರಾಮನ್ ಕಿರಣ್ ಕುಮಾರ್, ಕೂಟದ ಪ್ರಧಾನ ಕಾರ್ಯದರ್ಶಿ ಪಿ.ಮಂಜುನಾಥ ಕಾಡಜ್ಜಿ, ಕಾರ್ಯದರ್ಶಿಗಳಾದ ಪಿ.ಎಸ್. ಲೋಕೇಶ, ಈ. ಪವನಕುಮಾರ, ಕೂಟದ ಮಾಜಿ ಅಧ್ಯಕ್ಷ ಬಸವರಾಜ ದೊಡ್ಮನಿ, ತಾರಾನಾಥ, ನಾಗರಾಜ ಎಸ್.ಬಡದಾಳ್, ಡಿ. ರಂಗನಾಥ ರಾವ್, ಯೋಗರಾಜ, ಬಸವರಾಜ ನವಣೆ, ವಿನಾಯಕ ಪೂಜಾರ, ಎ. ಫಕ್ರುದ್ದೀನ್, ಸತೀಶ ಬಡಿಗೇರ್, ನಿಂಗಪ್ಪ, ಎಸ್.ಎಸ್. ಸಾಗರ್, ಪರಮೇಶ್ ಕುಂದೂರು, ರಾಮಪ್ಪ, ಭುವನೇಶ್ವರಿ ಆರ್. ರವಿಕುಮಾರ, ರಮೇಶ, ರಾಮ ಪ್ರಸಾದ, ಚಂದ್ರಣ್ಣ, ಸತೀಶ ಸೇರಿದಂತೆ ಇತರರು ಭಾಗವಹಿಸಿದ್ದರು.

## ಗ್ರಾಮೀಣ ವಿಭಾಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜೆ.ಹೆಚ್.ಪಟೇಲ್ ಬಡಾವಣೆ, ಶಾಮನೂರು, ಶಿವ ಪಾರ್ವತಿ ಬಡಾವಣೆ, ನಾಗನೂರು ರಸ್ತೆ, ಡಾಲರ್ಸ್ ಕಾಲೋನಿ, ಬನಶಂಕರಿ ಬಡಾವಣೆ, ಜರೀಕಟ್ಟೆ, ಬಿಸಲೇರಿ, ಶಿರಮಗೊಂಡನಹಳ್ಳಿ, ನಾಗನೂರು, ಆರನೇ ಮೈಲಿಗಲ್ಲು, ಏಳನೇ ಮೈಲಿಗಲ್ಲು, ಜವಳಘಟ್ಟ ಮತ್ತು ಮುದಹದಡಿ ವ್ಯಾಪ್ತಿಯಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6.30 ರವರೆಗೆ ವಿದ್ಯುಚ್ಛಕ್ತಿ ನಿಲುಗಡೆಯಾಗಲಿದೆ.


**ಅಭಿನಂದನೆಗಳು**



ದಾವಣಗೆರೆ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾಗಿ
ನೇಮಕಗೊಂಡಿರುವ ಆತ್ಮೀಯ ಸ್ನೇಹಿತರೂ,
ವಿನೋಬನಗರ ಶ್ರೀ ಚೌಡೇಶ್ವರಿ ದೇವಸ್ಥಾನದ ಅಧ್ಯಕ್ಷರೂ ಆದ
**ಶ್ರೀ ಶ್ರೀನಿವಾಸ್ ದಾಸಕರಿಯಪ್ಪ**
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

✦ **ಹೆಚ್. ದಿವಾಕರ್,**
ವಕೀಲರು ಮತ್ತು ಉಪಾಧ್ಯಕ್ಷರು, ದಾವಣಗೆರೆ ಜಿಲ್ಲಾ ವಕೀಲರ ಸಂಘ, ಸಂಚಾಲಕರು,
ದಾವಣಗೆರೆ ಲೋಕಸಭಾ ಕ್ಷೇತ್ರ, ಬಿಜೆಪಿ ಕಾನೂನು ಮತ್ತು ಸಂಸದೀಯ ಪ್ರಕೋಷ್ಠ.
✦ **ಎ.ಸಿ. ರಾಘವೇಂದ್ರ,** ವಕೀಲರು ಮತ್ತು ಸಂಚಾಲಕರು,
ದಾವಣಗೆರೆ ಲೋಕಸಭಾ ಕ್ಷೇತ್ರ, ಬಿಜೆಪಿ ಕಾನೂನು ಮತ್ತು ಸಂಸದೀಯ ಪ್ರಕೋಷ್ಠ.
✦ **ಎ.ಎಸ್. ಮಂಜುನಾಥ್,** ವಕೀಲರು ✦ **ತಿರುಮಲ್ಲೇಶ್**
✦ **ಡಿ.ಎಂ.ಕಾಂತರಾಜ್** ✦ **ಎಸ್.ಮಂಜುನಾಥ**
✦ **ರವಿ** ✦ **ಅನಿಲ್** ✦ **ಪಠಾಣ್** ✦ **ಆಲೂರು ಪ್ರಕಾಶ್**
**ಹಾಗೂ ವಿನೋಬನಗರದ ಎಲ್ಲಾ ಬಿ.ಜೆ.ಪಿ ಅಭಿಮಾನಿಗಳು.**



# ಹೃತ್ಪೂರ್ವಕ ಅಭಿನಂದನೆಗಳು



ಭಾರತೀಯ ಜನತಾ ಪಾರ್ಟಿ ದಾವಣಗೆರೆ
ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ
ಉತ್ಸಾಹಿ ಯುವ ಮುಖಂಡರು, ಸಂಘಟನಾ ಚತುರರು
ಹಾಗೂ ಆತ್ಮೀಯರು ಆದ

**ಶ್ರೀ ಶ್ರೀನಿವಾಸ್ ಟಿ ದಾಸಕರಿಯಪ್ಪ**

ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು



**ವೇಣು ಎಂ.ಎನ್**

ಅಧ್ಯಕ್ಷರು, 14ನೇ ವಾರ್ಡ್, ಬಿಜೆಪಿ
ಹಾಗೂ ಜಿಲ್ಲಾಧ್ಯಕ್ಷರು ಶ್ರೀ ಮಡಿವಾಳ ಮಾಚಿದೇವ
ಯುವ ಸೇನೆ (ರಿ.) ದಾವಣಗೆರೆ.

**14ನೇ ವಾರ್ಡ್‌ನ ಬಿಜೆಪಿ ಕಾರ್ಯಕರ್ತರು ಮತ್ತು ಅಭಿಮಾನಿಗಳು**







# ಹೃದಯಪೂರ್ವಕ ಕೃತಜ್ಞತೆಗಳು



ನನ್ನನ್ನು ಅಖಿಲ ಭಾರತ ವೀರಶೈವ ಮಹಾಸಭಾ (ರಿ.)
ದಾವಣಗೆರೆ ಜಿಲ್ಲಾ ಯುವ ಘಟಕದ ಸಂಘಟನಾ
ಕಾರ್ಯದರ್ಶಿಯಾಗಿ ನೇಮಿಸಿದ
ರಾಷ್ಟ್ರೀಯ ಅಧ್ಯಕ್ಷರಾದ
**ಡಾ|| ಶಾಮನೂರು ಶಿವಶಂಕರಪ್ಪ** ಅವರಿಗೆ
ರಾಷ್ಟ್ರೀಯ ಉಪಾಧ್ಯಕ್ಷರಾದ
**ಶ್ರೀ ಎಸ್. ಎಸ್. ಗಣೇಶ್** ಅವರಿಗೆ
ಜಿಲ್ಲಾಧ್ಯಕ್ಷರಾದ **ಶ್ರೀ ದೇವರಮನೆ ಶಿವಕುಮಾರ್**
ಅವರಿಗೆ, ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ
**ಶ್ರೀ ಶ್ರೀನಿವಾಸ ಶಿವಗಂಗಾ** ಅವರಿಗೆ
ಜಿಲ್ಲಾ ಯುವ ಘಟಕದ ಗೌರವಾಧ್ಯಕ್ಷರಾದ
**ಶ್ರೀ ಬಸವರಾಜ್ ವಿ. ಶಿವಗಂಗಾ** ಅವರಿಗೆ
ಜಿಲ್ಲಾ ಯುವ ಘಟಕದ ಅಧ್ಯಕ್ಷರಾದ
**ಶ್ರೀ ಪ್ರಶಾಂತ್ ಆರ್.ಟಿ.** ಅವರಿಗೆ ಮತ್ತು
ವೀರಶೈವ ಮಹಾಸಭಾದ ಎಲ್ಲಾ ಪದಾಧಿಕಾರಿಗಳಿಗೆ ಹಾಗೂ ಸಮಸ್ತ
ವೀರಶೈವ ಲಿಂಗಾಯತ ಸಮಾಜ ಬಾಂಧವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

**ಶಿವಪ್ರಸಾದ್ ಕುರುಡಿಮಠ್**

ಜಿಲ್ಲಾ ಸಂಘಟನಾ ಕಾರ್ಯದರ್ಶಿ
ಅಖಿಲ ಭಾರತ ವೀರಶೈವ ಮಹಾಸಭಾ (ರಿ.)
ದಾವಣಗೆರೆ ಜಿಲ್ಲಾ ಯುವ ಘಟಕ



# ಕೈಲಾಸ ಶಿವಗಣಾರಾಧನೆ



ಜನನ:
18.08.1958

ಮರಣ:
11.10.2020

**ಲಿಂ|| ಶರಣ ಗೌಡ್ರು ಸೋಮಶೇಖರ್, ಆನೆಕೊಂಡ**

ವಿನಾಯಕ ಪ್ರಾವಿಜನ್ ಸ್ಟೋರ್ಸ್ ಮತ್ತು ವಿನಾಯಕ ಟ್ರೇಡರ್ಸ್ ಮಾಲೀಕರು

|| ಮರುಳಸಿದ್ದೇಶ್ವರ ಪ್ರಸನ್ನ ||





ಲಿಂ|| ಶ್ರೀ ಗೌಡ್ರು ಬಸಪ್ಪನವರ ಮಗ
**ಶ್ರೀಮತಿ ಶ್ರೀ ಗೌಡ್ರು ಸಿದ್ದಪ್ಪ ಆನೆಕೊಂಡ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ: 11.10.2020ನೇ ಭಾನುವಾರ
ಬೆಳಗಿನಜಾವ 05:00 ಗಂಟೆಗೆ ನಮ್ಮ ಸಹೋದರರಾದ
**ಶರಣ ಗೌಡ್ರು ಸೋಮಶೇಖರ್**
ವಿನಾಯಕ ಪ್ರಾವಿಜನ್ ಸ್ಟೋರ್ಸ್ ಮತ್ತು ವಿನಾಯಕ ಟ್ರೇಡರ್ಸ್ ಮಾಲೀಕರು
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆ**ಯನ್ನು
ದಿನಾಂಕ: 05.11.2020ನೇ ಗುರುವಾರ ಬೆಳಗ್ಗೆ
11:30 ಗಂಟೆಗೆ ದಾವಣಗೆರೆ ಸಿಟಿ, ಎಂ.ಸಿ.ಸಿ. 'ಎ'
ಬ್ಲಾಕ್‌ನಲ್ಲಿರುವ ಶ್ರೀ ತೊಗಟವೀರ ಸಮುದಾಯಭವನದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು
ಕೋರಬೇಕಾಗಿ ವಿನಂತಿ.

**ದುಃಖತಪ್ತರು**

ಮೃತರ ಧರ್ಮಪತ್ನಿ ಶ್ರೀಮತಿ ಶಶಿಕಲಾ ಮತ್ತು ಮಕ್ಕಳಾದ
ಶ್ರೀ ಸಚಿನ್, ಚಿ|| ಶ್ರೇಯಸ್, ಸೊಸೆಯಾದ
ಶ್ರೀಮತಿ ಆಶಿಕಾ ಸಚಿನ್ ಮತ್ತು ಮೃತರ ಸಹೋದರ-
ಸಹೋದರಿಯರು ಹಾಗೂ ಗೌಡ್ರು ವಂಶಸ್ಥರು,
ಆನೆಕೊಂಡ ಮತ್ತು ದಾನಪ್ಪರ ವಂಶಸ್ಥರು, ಕತ್ತಲಗೆರೆ.
ಶ್ರೀಮತಿ ಶ್ರೀ ಅಶೋಕ್ ಕೆ.ಎಸ್. ಮತ್ತು
ಕುಟುಂಬದವರು, ದಾವಣಗೆರೆ ಹಾಗೂ ಬಂಧು-ಮಿತ್ರರು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte